ಸಂಪುಟ 23 ಸಂಚಿಕೆ 40-41
ಅಕ್ಟೋಬರ್ 14, 2001 ಬೆಲೆ ರೂ. 3.00


ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ಜನತೆ ಸಾರಿದೆ ಸಮರ

ತೊಲಗಲೇಬೇಕು ವಾಜಪೇಯಿ ಸರ್ಕಾರ



ಜೈವಿಕ ತಂತ್ರಜ್ಞಾನದ ಪಾರ್ಕೋ
ಅಥವಾ
ನೆಲಗಳ್ಳರಿಗೆ ನೆರೆಯೋ?



ಯುದ್ಧದಾಹಿ ಅಮೇರಿಕಾದ ವಿಕೃತ ಆಟಗಳು




ಮೂಲಭೂತವಾದ ವಿಜ್ಞಾನಕ್ಕೆ ಸವಾಲು



ನಿರೀಕ್ಷೆ ಹುಸಿಗೊಳಿಸುವ

ನೀಟಾ

ಬಯಲಾದ ಬೋಫೋರ್ಸ್ ಭ್ರಷ್ಟಾಚಾರ ಸ್ಫೋಟಗೊಂಡ ಗೂರ್ಖಾಲ್ಯಾಂಡ್ ಪ್ರತ್ಯೇಕತಾ ಚಳುವಳಿ



ಹಿಂದಿನ ಸಂಚಿಕೆಯಲ್ಲಿ ರಾಜ್ಯದ ಯೋಜನೆಗಳಿಗೆ ಅತಂತ್ರ ಸ್ಥಿತಿ, ರಾಜ್ಯದ ವಿರುದ್ಧ ಪ್ರಧಾನಿಯಿಂದ ಅಪ್ರಪ್ರಚಾರ, ಪ್ರತ್ಯೇಕತಾವಾದಿ ಘೋಷಣೆ ರಾಷ್ಟ್ರವಿರೋಧಿ ಅಲ್ಲವೆಂದ ಪ್ರಧಾನಿ, ಸ್ನೇಹಾಂಗ್ಶು ಆಚಾರ್ಯ ನಿಧನ, ಸ್ಮರಣೀಯ ಬಾಂಗ್ಲಾ ಪ್ರವಾಸ, ಬಂಗಾಳ, ಕೇರಳದಲ್ಲಿ ಎಡರಂಗ ಅಧಿಕಾರಕ್ಕೆ ಈ ಬಗ್ಗೆ ಓದಿರುವಿರ. ಈ ಸಂಚಿಕೆಯಲ್ಲಿ ಬಯಲಾದ ಬೊಫಾರ್ಸ್ ಹಗರಣ, ರಕ್ಷಣಾ ಖಾತೆ ರಾಜ್ಯ ಸಚಿವ ಅರುಣಸಿಂಗ್ ರಾಜಿನಾಮೆ, ರಾಜೀವ್ ಗಾಂಧಿ ಸರ್ಕಾರದ ರಾಜಿನಾಮೆಗೆ ನಮ್ಮ ಪಕ್ಷದ ಒತ್ತಾಯ, ತೀವ್ರಗೊಂಡ ಗೂರ್ಖಾಲ್ಯಾಂಡ್ ಪ್ರತ್ಯೇಕತಾ ಚಳುವಳಿ, ಘೀಸಿಂಗ್ ನಿಂದ ಬಂಗಾಳದೊರೆಗೆ ಪತ್ರ. ಬೆಂಕಿಯೊಡನೆ ಸರಸಕ್ಕೆ ನಿಂತ ಕಾಂಗ್ರೆಸ್. ಭಯೋತ್ಪಾದನೆಗೆ ಸಿಪಿಐ(ಎಂ) ಕಾರ್ಯಕರ್ತರ ಬಲಿ. 1987 ರಲ್ಲಿ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ. ಡಾರ್ಜಿಲಿಂಗ್ ಗುಡ್ಡಗಾಡು ಮಂಡಳಿ ರಚನೆ ಈ ಬಗ್ಗೆ ಓದಿ....

ಬೋಫೋರ್ಸ್ ಕಂಪನಿ ಅದುವರೆಗೆ 3.2 ಲಕ್ಷ ಸ್ವೀಡಿಷ್ ಕ್ರೋನರ್‌ಗಳನ್ನು ಪಾವತಿ ಮಾಡಿತ್ತು. ಸಂಸತ್ತಿನಲ್ಲಿ ಕೋಲಾಹಲ ಉಂಟಾಯಿತು. ರಾಜೀವಗಾಂಧಿ ಮತ್ತು ಅವರ ಪಕ್ಷದವರು ಆರೋಪಗಳನ್ನು ನಿರಾಕರಿಸಲು ಪ್ರಯತ್ನಿಸಿದರು. ಈ ವಿಷಯದ ಮೇಲೆ ಅಂದಿನ ರಕ್ಷಣಾ ಸಚಿವ ವಿ.ಪಿ. ಸಿಂಗ್ ರಾಜನಾಮೆ ನೀಡಿದರು. ಅವರನ್ನು ಜನವರಿಯಲ್ಲಷ್ಟೆ ಹಣಕಾಸು ಖಾತೆಯಿಂದ ವರ್ಗಾಯಿಸಲಾಗಿತ್ತು. ಹಣ ಹಸ್ತಾಂತರಗೊಂಡಿರುವ ಬಗ್ಗೆ ತಮ್ಮ ಬಳಿ ನಿಖರ ಪುರಾವೆಗಳಿವೆ ಹಾಗೂ ಅದನ್ನು ಠೇವಣಿ ಇಟ್ಟಿರುವ ಬ್ಯಾಂಕ್ ಖಾತೆಗಳ ಸಂಖ್ಯೆ ಬಗೆಗೂ ತಮಗೆ ತಿಳಿದಿದೆ ಎಂದು ಏಪ್ರಿಲ್ 22 ರಂದು ಕೆಲವು ಸ್ವೀಡಿಷ್ ಪತ್ರಿಕೆಗಳು ಬರೆದವು.

ಸಂಸತ್ತು ಅಲ್ಲೋಲ ಕಲ್ಲೋಲಗೊಂಡಿತು. ಬೊಫೋರ್ಸ್ ಜತೆಗಿನ ಶಸ್ತ್ರಾಸ್ತ್ರ ಒಪ್ಪಂದಕ್ಕೆ ಸಹಿ ಹಾಕಿದಾಗ ರಾಜೀವಗಾಂಧಿ ಪ್ರಧಾನಿ ಹಾಗೂ ರಕ್ಷಣಾ ಸಚಿವರೂ ಆಗಿದ್ದುದು ಕೇವಲ ಕಾಕತಾಳೀಯ ಎಂಬ ವಾದದಿಂದ ಹೆಚ್ಚಿನವರಿಗೆ ಮನವರಿಕೆ ಆಗಲಿಲ್ಲ.

ಒಪ್ಪಂದಕ್ಕಾಗಿ ಕೆಲವು ಏಜೆಂಟರಿಗೆ ಹಣ ನೀಡಿದ್ದು ಹೌದೆಂದು ಬೊಫೋರ್ಸ್ ಒಪ್ಪಿಕೊಂಡಿರುವುದಾಗಿ ಹಾಗೂ ಹಣವನ್ನು ಸ್ವಿಸ್ ಬ್ಯಾಂಕ್‌ಗಳಲ್ಲಿ ಇಟ್ಟಿರುವುದು ನಿಜ ಎಂದು ಸ್ವೀಡನ್‌ನ ರಾಷ್ಟ್ರೀಯ ಖಜಾನೆ (National exchequn) ಜೂನ್ ಒಂದರಂದು ಹೇಳಿಕೆಯೊಂದರಲ್ಲಿ ತಿಳಿಸಿತು. ಭಾರತ ಸರಕಾರ ಇನ್ನೂ ಹೆಚ್ಚು ಕಾಲ ನಾಟಕ ಆಡುವಂತಿರಲಿಲ್ಲ. ಸಂಸತ್ತಿನ ಮಳೆಗಾಲ ಅಧಿವೇಶನದ ಆರಂಭದಲ್ಲಿ ರಕ್ಷಣಾ ಖಾತೆ ರಾಜ್ಯ ಸಚಿವ ಅರುಣ್ ಸಿಂಗ್ ರಾಜನಾಮೆ ನೀಡಿದರು. ಅವರು ಯಾಕಾಗಿ ರಾಜನಾಮೆ ನೀಡಿದರು ಎನ್ನುವುದು ಯಾರಿಗೂ ಗೊತ್ತಾಗಲಿಲ್ಲ. ಪಾರದರ್ಶಕತೆ ಇರಬೇಕು ಹಾಗೂ ಒಂದು ವೇಳೆ ಲಂಚಾವತಾರ ನಡೆದಿದ್ದೇ ಹೌದಾದಲ್ಲಿ ಈ ಒಪ್ಪಂದವನ್ನು ರದ್ದುಪಡಿಸಬೇಕೆಂಬ ಪ್ರತಿಪಕ್ಷಗಳ ಬೇಡಿಕೆಯಿಂದ ನುಣುಚಿಕೊಳ್ಳಲು ಕೇಂದ್ರ ಸರಕಾರ ಪ್ರಯತ್ನಿಸಿತು. ಇದ್ದಕ್ಕಿದ್ದಂತೆ ಒಂದು ದಿನ ರಾಜೀವಗಾಂಧಿ ಸಂಸತ್ತಿನಲ್ಲಿ ಎದ್ದುನಿಂತು, ಬೊಫೋರ್ಸ್ ವ್ಯವಹಾರದಲ್ಲಿ ತಾವಾಗಲಿ ತಮ್ಮ ಕುಟುಂಬದ ಯಾರೇ ಆಗಲಿ ಯಾವುದೇ ಹಣವನ್ನು ಸ್ವೀಕರಿಸಿಲ್ಲ ಎಂದು ಹೇಳಿದರು. ಅದು ಆಶ್ಚರ್ಯಕರವಾಗಿತ್ತು! ಆದರೆ ಆ ವೇಳೆಗೆ ಸತ್ಯ ಹೊರಬಿದ್ದಿತ್ತು.

ರಚಿಸಲಾದ ಜಂಟಿ ಸಂಸದೀಯ ಸಮಿತಿ (ಜೆ.ಪಿ.ಸಿ) ವಾಸ್ತವವಾಗಿ ಒಂದು ಕಾಂಗ್ರೆಸ್ ಸಮಿತಿಯಾಗಿತ್ತು. ಈ ನಡುವೆ ಹಿಂದೂ ಪತ್ರಿಕೆ ಬೊಫೋರ್ಸ್ ಹಗರಣದ ನಾನಾ ಅಂಶಗಳನ್ನು ಹೊರಗೆಡವುತ್ತಲೇ ಇತ್ತು ಜನರಿಗೆ ಈಗ ನಿಜ ವಿಷಯ ಏನೆಂಬುದು ಅರಿವಾಗಿತ್ತು.

ಮಳೆಗಾಲದ ಅಧಿವೇಶನ ಮೇ ತಿಂಗಳ ಕೊನೆಯ ವಾರದಲ್ಲಿ ಮುಗಿಯುತ್ತ ಬಂದಿದ್ದಾಗ ರಕ್ಷಣಾ ಖಾತೆ ಬಗೆಗಿನ ಅಕೌಂಟೆಂಟ್ ಜನರಲ್‌ರ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲು ಸರಕಾರ ನಿರಾಕರಿಸಿತು. ಅದೊಂದು ಅಭೂತಪೂರ್ವ ಕ್ರಮವಾಗಿತ್ತು. ಎಲ್ಲ ನಿಯಮಗಳನ್ನು ಮೀರಿ, ರಾಜೀವ್‌ಗೆ ನಿಷ್ಠರಾಗಿದ್ದ ಜಯಲಲಿತ ಗುಂಪಿನ ಸದಸ್ಯರೊಬ್ಬರನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಜುಲೈ 16ರಂದು ಅಕೌಂಟೆಂಟ್ ಜನರಲ್‌ರ ವರದಿಯನ್ನು ಮಂಡಿಸಲಾಯಿತು. ಸರಕಾರ ವಾಸ್ತವಾಂಶಗಳನ್ನು ಮುಚ್ಚಿಡುತ್ತಿದೆ ಎಂಬುದರಲ್ಲಿ ಯಾವುದೇ ಅನುಮಾನ ಉಳಿಯಲಿಲ್ಲ. ಇದಾದ ಮೇಲೆ ಜನರಲ್ ಸುಂದರ್ ಜಿ ಅವರ ಹೇಳಿಕೆಯೊಂದು ಹೊರಬಿತ್ತು. ಹೆಸರುಗಳನ್ನು ಬಹಿರಂಗಪಡಿಸುವಂತೆ ಬೋಫೋರ್ಸ್ ಮೇಲೆ ಒತ್ತಡ ಹೇರಬೇಕು. ಹಾಗೂ ಅದಕ್ಕೆ ಒಪ್ಪದಿದ್ದರೆ ಒಪ್ಪಂದವನ್ನು ರದ್ದುಪಡಿಸಬೇಕು ಎಂದು ಸೂಚಿಸಿ ತಾವು 1987ರ ಜೂನ್ ಜುಲೈನಲ್ಲಿ ಪ್ರಧಾನಿಗೆ ಪತ್ರಬರೆದಿದ್ದಾಗಿ ಸುಂದರ್‌ಜಿ ಹೇಳಿಕೆಯಲ್ಲಿ ತಿಳಿಸಿದರು. ತಮಗೆ ಬರೆದ ಟಿಪ್ಪಣಿಗಳನ್ನು ನೋಡಿ ಪ್ರಧಾನಿ ಸಿಟ್ಟಾದರು ಎಂದು ಭೂಸೇನೆಯ ದಂಡನಾಯಕ ಸುಂದರ್‌ಜಿ ವಿವರಿಸಿದರು. ಅವರು ತಮ್ಮ ನಿಲುವನ್ನು ಬದಲಾಯಿಸಿಕೊಳ್ಳಲಿಲ್ಲ. ಬೊಫೋರ್ಸ್ ಪ್ರಕರಣದ ಕುರಿತು ಪ್ರಧಾನಿಯೊಂದಿಗೆ ಉಂಟಾದ ಭಿನ್ನಾಭಿಪ್ರಾಯಗಳಿಂದಾಗಿ ಅರುಣ್‌ಸಿಂಗ್ ರಾಜನಾಮೆ ನೀಡಿದರು ಎಂದೂ ಅವರು ಹೇಳಿದರು.

ದೇಶದ ಪ್ರಧಾನಿಯೊಬ್ಬರು ಒಳಗೊಂಡಂಥ ಇಂಥ ಹಗರಣವನ್ನು ನಾವು ಎಲ್ಲಿಯೂ ನೋಡಿರಲಿಲ್ಲ. ಜನತೆಗೆ ಅವಮಾನದ ಮೇಲೆ



ಅವಮಾನದ ಹೊರೆ ಹೇರುತ್ತಿರುವ ಈ ಸರಕಾರ ಆಡಳಿತದಲ್ಲಿ ಮುಂದುವರಿಯಲು ಬಿಡಬಾರದು ಎಂಬುದನ್ನು ದೇಶ ಅರಿಯಿತು. ಈ ಅರಿವು ಸಾಮೂಹಿಕ ರಾಜಕೀಯ ಅರಿವಾಗಿ ಪರಿವರ್ತನೆಗೊಂಡಿತು.

ಇದರಲ್ಲಿ ನಮ್ಮ ಪಕ್ಷ ಮಹತ್ವದ ಪಾತ್ರವನ್ನು ವಹಿಸಿತು. ರಾಜಿವ್‌ಗಾಂಧಿ ರಾಜನಾಮೆ ನೀಡಬೇಕು ಹಾಗೂ ಮಧ್ಯಂತರ ಚುನಾವಣೆಗಳನ್ನು ನಡೆಸಬೇಕು ಎಂದು ಒತ್ತಾಯಿಸಿದ ಮೊದಲ ಪಕ್ಷ ನಮ್ಮದಾಗಿತ್ತು. ಆಗಸ್ಟ್ 7 ರಿಂದ 10ರವರೆಗೆ ನಡೆದ ಪಕ್ಷದ ಕೇಂದ್ರ ಸಮಿತಿ ಸಭೆ ಈ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿತು.

ಬೆಟ್ಟ ಪ್ರದೇಶದಲ್ಲಿ ಪ್ರತ್ಯೇಕತಾವಾದ

ಬೆಟ್ಟಪ್ರದೇಶಗಳ ಜನರು ಶಾಂತಿಯಿಂದ ಜೀವನ ನಡೆಸುತ್ತಿರುವಾಗ ಗೂರ್ಖಾಲ್ಯಾಂಡ್ ಚಳುವಳಿ ಸ್ಫೋಟಗೊಂಡಿತು. ಜೀವನ ನಿರ್ವಹಣೆಗಾಗಿ ಚಹಾ ತೋಟದ ಕಾರ್ಮಿಕರು ಹೇಗೆ ಪರಿಶ್ರಮ ಪಡುತ್ತಾರೆ ಎಂಬುದು ನಮಗೆಲ್ಲ ಗೊತ್ತಿತ್ತು. ಈ ದೇಶದ ಕಾರ್ಮಿಕ ವರ್ಗದ ಪೈಕಿ ಚಹಾತೋಟಗಳ ಕಾರ್ಮಿಕರು ತುಂಬಾ ಪಾಡು ಪಡುತ್ತಿದ್ದಾರೆ ಎಂದು ಬ್ರಿಟಿಷರೇ ಗುರುತಿಸಿದ್ದರು ಎನ್ನುವುದು ಗಮನಾರ್ಹ. ಬೆಟ್ಟಪ್ರದೇಶಗಳ ಜನರನ್ನು ವಿಶೇಷವಾಗಿ ನೇಪಾಳಿ ಮಾತನಾಡುವ ಜನರನ್ನು ಗೊಂದಲದಲ್ಲಿ ಬೀಳಿಸುವ ಪ್ರಯತ್ನ ಆಗಲೂ ನಡೆದೇ ಇತ್ತು. ನೇಪಾಳಿ ಸಮುದಾಯದ ಅಭಿವೃದ್ಧಿಯನ್ನು ಗುರಿಯಾಗಿರಿಸಿಕೊಂಡು 1942ರಲ್ಲಿ ಅಖಿಲ ಭಾರತ ಗೂರ್ಖಾ ಲೀಗ್ ಸ್ಥಾಪನೆಗೊಂಡಿತು. ಆ ನಂತರ ಅದು ರಾಜಕೀಯ ಸ್ವರೂಪವನ್ನು ಪಡೆಯಿತು. ಗೂರ್ಖಾ ಪ್ರಶ್ನೆ ಮುಂದೆ ಮಾಡಿಕೊಂಡು ಅದರ ನಾಲ್ಕು ಶಾಸಕರು ಆಯ್ಕೆಯಾದರು.

ಬಹಳ ವರ್ಷಗಳ ನಂತರ 1979ರಲ್ಲಿ ಪ್ರತ್ಯೇಕತಾವಾದಿ ಬೇಡಿಕೆಯನ್ನು ಕೆದಕಲು ಗೂರ್ಖಾಲೀಗ್ ಪ್ರಾಂತ ಪರಿಷತ್‌ನಲ್ಲಿ ವಿಲೀನಗೊಂಡಿತು. ಅದೇ ಪ್ರಾಂತ ಪರಿಷತ್ ಈಗ ರಾಷ್ಟ್ರೀಯ ಮುಕ್ತಿ ಮೋರ್ಚಾದ ಮೂಲಶಕ್ತಿಯಾಗಿದೆ. ಲೀಗ್‌ನ ಇಬ್ಬರು ಶಾಸಕರು ಪಶ್ಚಿಮಬಂಗಾಳದ ಮಂತ್ರಿಗಳೂ ಆದರು. ಆದರೆ, ಗೂರ್ಖಾಲ್ಯಾಂಡ್ ಘೋಷಣೆಗಳು ಪಕ್ಕಾ ರಾಷ್ಟ್ರ ವಿರೋಧಿಯಾಗಿದ್ದವು. 1980ರಲ್ಲಿ ಗೂರ್ಖಾ ರಾಷ್ಟ್ರೀಯ ವಿಮೋಚನೆ ರಂಗ (ಜಿಎನ್‌ಎಲ್‌ಎಫ್) ಸ್ಥಾಪನೆಯಾದ ಮೇಲೆ ಅದರ ಅಧ್ಯಕ್ಷ ಸುಭಾಷ್ ಘೀಷಿಂಗ್ 1983 ಡಿಸೆಂಬರ್ 23ರಂದು ನೇಪಾಳದ ದೊರೆಗೆ ಒಂದು ಪತ್ರ ಬರೆದರು. ಬ್ರಿಟಿಷರು ನೇಪಾಳದಿಂದ ಡಾರ್ಜಿಲಿಂಗನ್ನು ಸೆಳೆದುಕೊಂಡಿದ್ದರು. ಅವರು ಬಿಟ್ಟುಹೋದ ಮೇಲೆ ಡಾರ್ಜಿಲಿಂಗ್‌ನ ಸ್ಥಾನಮಾನದ ಬಗ್ಗೆ ಏನನ್ನೂ ಮಾಡಿಲ್ಲ ಎಂದು ಘೀಷಿಂಗ್ ಪತ್ರದಲ್ಲಿ ಹೇಳಿದರು. ಇತಿಹಾಸವನ್ನು ತಿರುಚಲಾಗುತ್ತಿತ್ತು. ಡಾರ್ಜಿಲಿಂಗನ್ನು ಬ್ರಿಟಿಷರು ಸಿಕ್ಕಿಮ್‌ನ ರಾಜನಿಂದ ಪಡೆದಿದ್ದರೇ ಹೊರತು ನೇಪಾಳದಿಂದ ಅಲ್ಲ ಘೀಷಿಂಗ್ ವಿಶ್ವ ಸಂಸ್ಥೆಗೆ ಕೂಡ ಬರೆದರು.

ಈ ವಿಚಾರದಲ್ಲಿ ಘೀಷಿಂಗ್‌ರ ನಿಲುವು ಒಪ್ಪುವಂಥದ್ದಾಗಿರಲಿಲ್ಲ. ಎಲ್ಲ ರಾಷ್ಟ್ರೀಯ ದಿನಾಚರಣೆಗಳನ್ನು ಬಹಿಷ್ಕರಿಸುವಂತೆ ಹಾಗೂ ಶಾಂತಿ ಕಾಲೇಜುಗಳಿಂದ ದೂರವಿಡುವಂತೆ ವಿದ್ಯಾರ್ಥಿಗಳಿಗೆ ಅವರು ಕರೆ ನೀಡಿದರು. ಅವರ ಇಂಥ ಎಲ್ಲಾ ರೀತಿಯ ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ತೊಡಗಿದರು. ಸೈನಿಕರಮಧ್ಯೆ ಅನಾಮದೇಯ ಪುಸ್ತಿಕೆಗಳನ್ನು ವಿತರಿಸಿ ಸೇನೆಯನ್ನು ಪ್ರಚೋದಿಸಲು ಕೂಡ ಅವರು ಪ್ರಯತ್ನಿಸಿದರು.

ಆಗಸ್ಟ್ 18 ರಂದು ನೀವು ಆರಂಭಿಸಿದ ಸಹಿ ಸಂಗ್ರಹ ಚಳುವಳಿಯಲ್ಲಿ ಕಾಂಗ್ರೆಸ್ ಒಳಗೊಂಡಿರುವ ಘೀಷಿಂಗ್‌ರ ಹುನ್ನಾರವನ್ನು ಅರಿಯುವಲ್ಲಿ ಕಾಂಗ್ರೆಸ್ ಸೋತಿತು. ಕಾಂಗ್ರೆಸ್ ಬೆಂಕಿಯೊಡನೆ ಚೆಲ್ಲಾಟವಾಡುತ್ತಿತ್ತು. ರಾಜೀವ್‌ಗಾಂಧಿ ಹಾಗೂ ಕಾಂಗ್ರೆಸ್ ಉಪಾಧ್ಯಕ್ಷ ಅರ್ಜುನ್‌ಸಿಂಗ್ ಜಿಎನ್‌ಎಲ್‌ಎಫ್ ಘೀಷಿಂಗ್‌ರನ್ನು ರಾಷ್ಟ್ರವಿರೋಧಿ ಎಂದು ಕರೆಯಲು ನಿರಾಕರಿಸಿದರು. ಆದರೆ ಪಶ್ಚಿಮಬಂಗಾಳದ ಕಾಂಗ್ರೆಸ್ ನಾಯಕ ಪ್ರಿಯರಂಜನ ದಾಸ್ ಮುನ್ಶಿ ಇದೊಂದು ಪ್ರತ್ಯೇಕತಾವಾದಿ ಚಳುವಳಿ ಎಂದು ಹೇಳಿದರು. ಕಾಂಗ್ರೆಸಿಗರು ಜಿಎನ್‌ಎಲ್‌ಎಫ್ ಸಭೆಗಳಲ್ಲಿ ಪಾಲ್ಗೊಳ್ಳತೊಡಗಿದರು. 1983 ಏಪ್ರಿಲ್ 16 ರಂದು ಘೀಷಿಂಗ್ ಕರೆಕೊಟ್ಟ 76 ಗಂಟೆಗಳ ಬಂದ್‌ನಲ್ಲಿ ಭಾಗವಹಿಸಿದರು. ಕಾಂಗ್ರೆಸ್ ನಾಯಕತ್ವ ನಿಯಂತ್ರಣವನ್ನು ದಿಕ್ಸೂಚಿಯನ್ನೂ ಕಳೆದುಕೊಳ್ಳುತ್ತಿತ್ತು.

ಗುಡ್ಡಗಾಡು ಪ್ರದೇಶಗಳಿಗೆ ಸ್ವಾಯತ್ತ ಕೊಡುವ ಪರಿಕಲ್ಪನೆಗೆ "ನಮ್ಮ ವಿರೋಧ ಇರಲಿಲ್ಲ. ಹಾಗೆ ನೋಡಿದರೆ, 1957ರಲ್ಲೇ, ಸಿಪಿಐ ಮತ್ತು ಇತರ ಎಡಪಕ್ಷಗಳು ಈಬಗ್ಗೆ ಅಂದಿನ ಪ್ರಧಾನಮಂತ್ರಿ ಮನವಿ ಪತ್ರವೊಂದನ್ನು ಅರ್ಪಿಸಿದ್ದವು ಅದಕ್ಕೆ 52 ಶಾಸಕರು ಸಹಿ ಹಾಕಿದ್ದರು.


(ಮುಂದುವರಿಯುವುದು)



ದುಡಿಯುವ ವರ್ಗದ ಕ್ರಾಂತಿಕಾರಿರಾಜಕೀಯ ಚಳುವಳಿಯನ್ನು ಮಥನ ಮಾಡಿ ಪ್ರಸಕ್ತ ಸನ್ನಿವೇಶದಲ್ಲಿ ಹೊಸ ಸವಾಲು ಕೈಗೆತ್ತಿಕೊಳ್ಳುವ ದಿಕ್ಕಿನಲ್ಲಿ ಜನವರಿ 2002 ರಲ್ಲಿ ಜರುಗಲಿರುವ ಸಿಪಿಐ(ಎಂ)ನ 17ನೇ ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿಯ ಸಭೆ 30.9.2001 ರಂದು ಬಳ್ಳಾರಿಯಲ್ಲಿ ಕಿಕ್ಕಿರಿದು ನೆರೆದಿದ್ದ ಕಾರ್ಯಕರ್ತರು, ಹಿತೈಷಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವ ಕಾಂ. ಸೂರಿಯವರು. ಈ ಸಭೆಯಲ್ಲಿ ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಎಸ್.ವೈ. ಗುರುಶಾಂತ್ ಮತ್ತಿತರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಎಸ್.ಪ್ರಸನ್ನಕುಮಾರ್ ವಹಿಸಿದ್ದರು. ಅದು ರಚಿಸಲಾದ ಸ್ವಾಗತ ಸಮಿತಿಯ ಪದಾಧಿಕಾರಿಗಳು: ಗೌರವಾಧ್ಯಕ್ಷರು - ವಿಠ್ಠಲ್, ಅಧ್ಯಕ್ಷರು- ಪ್ರಸನ್ನಕುಮಾರ್, ಕಾರ್ಯಾಧ್ಯಕ್ಷರು- ಎಸ್.ಶಿವಶಂಕರ್, ಪ್ರಧಾನ ಕಾರ್ಯದರ್ಶಿ -ಯು.ಬಸವರಾಜ್, ಖಜಾಂಚಿ-ನಾಗಭೂಷಣ.

ಆ ನೆಲ ಜೈವಿಕ ತಂತ್ರಜ್ಞಾನದ ಪಾರ್ಕ್‌ಗೋ ಅಥವಾ ನೆಲಗಳ್ಳ ವ್ಯವಹಾರಕ್ಕೋ

'ಜೈವಿಕ ತಂತ್ರಜ್ಞಾನದ ಪಾರ್ಕ್'ಗೆಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ(ಗಾಂಧಿ ಕೃಷಿ ವಿಜ್ಞಾನ ಕೇಂದ್ರ) ದ ಜಮೀನನ್ನು ವಶಪಡಿಸಲು ಮುಂದಾದ ಕ್ರಮ ಹಾಗೂ ಪೋಲೀಸ್ ದೌರ್ಜನ್ಯಗಳು. ಎಸ್.ಎಂ.ಕೃಷ್ಣರ ಸರ್ಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. 'ಉನ್ನತ ತಂತ್ರಜ್ಞಾನ'ದ ಮಂತ್ರವನ್ನೇ ಜಪಿಸುವ ಸರ್ಕಾರ ಇಲ್ಲಿ ಅನುಸರಿಸಿದ್ದು ಭೂಗಳ್ಳರಂತಹ ಮೂರನೇ ದರ್ಜೆಗೂ ಕೆಳಗಿನ ವಿಧಾನವನ್ನೇ. ಅದೂ



ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣ ರಂಗದಲ್ಲಿನ 'ಸ್ವಾಯತ್ತ ಸಂಸ್ಥೆ'ಯ ಹಕ್ಕುಗಳು ಹಾಗೂ ಪ್ರತಿಷ್ಠೆಯ ಮೇಲೆ ಆಕ್ರಮಣಕಾರಿ ಧಾಳಿ ನಡೆಸಿದ್ದು.

ಪೋಲೀಸ್ ದೌರ್ಜನ್ಯ

ಸೆಪ್ಟೆಂಬರ್ 27 ರಂದು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನುಗ್ಗಿದ್ದ ಪೋಲಿಸ್ ಪಡೆ ಮತ್ತು ಕಾಮಗಾರಿ ಯಂತ್ರಗಳು ಹಲವು ವೈವಿಧ್ಯಮಯ ಶೋಧನಾರ್ಹ ಗಿಡ-ಮರಗಳನ್ನು ಸುಮಾರು ಎರಡು ಎಕರೆಯಷ್ಟು ಹೊಸಕಿ ಹಾಕಿವೆ. ಇದನ್ನು ತಡೆಯಲು ಮುಂದಾದ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಮನಬಂದಂತೆ ಪೋಲೀಸರು ಚಚ್ಚಿದ್ದಾರೆ. ಮಾತ್ರವಲ್ಲ ಅಧ್ಯಾಪಕರು, ಸಿಬ್ಬಂದಿಗಳನ್ನೂ ಸಹ ಈ ಕಿರಾತಕರ ಲಾಠಿ, ಬೂಟುಗಳಿಂದ 'ಪಾಠ' ಹೇಳಿಸಿಕೊಂಡಿದ್ದಾರೆ. ಈ ಘಟನೆಗಳಿಂದ ನೊಂದ ವಿ.ವಿ.ಯ ಕುಲಪತಿ ಡಾ. ಕೃಷ್ಣಪ್ಪನವರು ತಮ್ಮ ರಾಜೀನಾಮೆ ಪತ್ರವನ್ನು ರಾಜ್ಯಪಾಲೆ ರಮಾದೇವಿ ಯವರಿಗೆ ಸಲ್ಲಿಸಿ, ಕಣ್ಣೀರಿಟ್ಟಿದ್ದಾರೆ.

'ಹೈಟೆಕ್ ಗುಂಗಿನ - ನಯ ಮಾತಿನ' ಕೃಷ್ಣರ ಸರ್ಕಾರದ ಈ ದೌರ್ಜನ್ಯ ಖಂಡನೀಯ. ವಿಶ್ವವಿದ್ಯಾಲಯದ ಕೋರಿಕೆಯೂ ಇಲ್ಲದೆ ಅನುಮತಿಯನ್ನು ಪಡೆಯದೇ ಈ ಪಡೆಗಳನ್ನು ನುಗ್ಗಿಸಿದ್ದು ತಪ್ಪು ಮತ್ತು ವಿ.ವಿ. ಘನತೆಗೆ ಅವಮಾನ ಮಾಡುವಂತಹದ್ದು. ಇಡೀ ಪ್ರಕರಣ ನ್ಯಾಯಾಂಗ ತನಿಖೆಯಾಗಿ ಸಂಗತಿಗಳು ಹೊರಬರಬೇಕಾಗುವುದು ಅತ್ಯಗತ್ಯ. ಇದನ್ನು ಟೀಕಿಸಿದವರನ್ನು 'ಜೈವಿಕ ತಂತ್ರಜ್ಞಾನದ ಪಾರ್ಕ್' ನಿರ್ಮಾಣವನ್ನೇ ವಿರೋಧಿಸುವವರೆಂದು ಕೃಷ್ಣ ಬಣ್ಣ ಹಚ್ಚತೊಡಗಿದ್ದಾರೆ. ಅವರ ಕೃತ್ಯ ಮುಚ್ಚಿಕೊಳ್ಳಲು ಹೀಗೆಲ್ಲಾ ಗೋಳಾಡುತ್ತಿರಬಹುದು. ಆದರೆ ಕೃಷಿ ಸಚಿವರ ಸಮರ್ಥನೆ, ವೈಖರಿ ಗಮನಿಸಿದರೆ ಅವರು ಬೌದ್ಧಿಕ ಸಮತೋಲನ ಕಳೆದುಕೊಂಡಂತಿದೆ.

ಪಾರ್ಕ್‌ಗೆ ವಿರೋಧವಲ್ಲ

'ಜೈವಿಕ ತಂತ್ರಜ್ಞಾನದ ಪಾರ್ಕ್'ಗೆ ಬಹುತೇಕ ಜನರ ವಿರೋಧವಿಲ್ಲ. ಆದರೆ ಪ್ರಶ್ನೆ ಇರುವುದು ಅದರ ನಿರ್ಮಾಣದ ಸ್ಥಳದ ಬಗ್ಗೆ, ಈ ಹಿಂದೆ ಸರ್ಕಾರದ ಪ್ರಸ್ತಾವನೆಯನ್ನು ಪರಿಶೀಲಿಸಿದ ವಿಶ್ವವಿದ್ಯಾಲಯ ತನ್ನ 600 ಎಕರೆ ಆವರಣದಲ್ಲಿ ಇತರೆ ಪ್ರದೇಶಗಳನ್ನು ಸೂಚಿಸಿದೆ. ಮತ್ತು ಅಂತಹ ಜಾಗಕ್ಕೆ ನಿರ್ದಿಷ್ಟ ಮೌಲ್ಯ ನಿಗದಿಪಡಿಸಲು ಕೋರಿದೆ. ಆದರೆ ಸರ್ಕಾರ ವಿ.ವಿ.ಯ ಕ್ಯಾಂಪಸ್‌ನ, ಬಹುಪಯೋಗಿ ಪ್ರದೇಶದಲ್ಲಿ 100 ಎಕರೆ ಬೇಕೆಂದು ಹಠ ಹಿಡಿದಿದೆ. ಈ ಬಗ್ಗೆ ಚರ್ಚಿಸಲು ಬಯಸದೇ ಏಕಾಏಕಿ 144 ಸೆಕ್ಷನ್ ಹೇರಿ ಕೆಲಸ ಆರಂಭಿಸಲು ಕಾಮಗಾರಿ ಯಂತ್ರಗಳು, ಪೋಲೀಸ್ ಪಡೆಯನ್ನು ಬಳಸಿದೆ.

ಇಷ್ಟೊಂದು ಭೂಮಿ ಅಲ್ಲೇ ಬೇಕೆ?

ಈ ಪಾರ್ಕ್ ನಿರ್ಮಾಣಕ್ಕೆ ಕೇವಲ 20-25 ಎಕರೆ ಜಾಗ ಸಾಕು ಎಂಬುದು ಹಾಗಾದರೆ 100 ಎಕರೆ ಯಾಕೆ ಬೇಕು? ಲಭ್ಯ ಮಾಹಿತಿಯಂತೆ ಉಳಿದ ಜಮೀನಿನಲ್ಲಿ 'ನಗರ' ನಿರ್ಮಾಣದ ಯೋಜನೆ ಇದೆಯಂತೆ. ಅಂದರೆ ಎಸ್ಟೇಟ್ ಬಿಸಿನೆಸ್‌ಗೆ ಪ್ರಾಶಸ್ತ್ಯ? ಈ ಪಾರ್ಕ್‌ನಲ್ಲಿ ಬಹುತೇಕ ಖಾಸಗಿ ಕಂಪನಿಗಳ ಪಾಲಾಗುತ್ತದೆ ಎಂಬುದು ನಿಸ್ಸಂದೇಹ. ಹೀಗಾಗಿ ಶೈಕ್ಷಣಿಕ ಸಂಸ್ಥೆಗಳು, ನ್ಯಾಯಾಂಗ ಕಾಲೋನಿ, ಮುಂತಾದವುಗಳಿರುವಾಗ ಈ ಅಂಗಳದಲ್ಲೇ 'ಪಾರ್ಕ್ ಮತ್ತು ನಗರ' ಶೈಕ್ಷಣಿಕ ವಾತಾವರಣವನ್ನು ಹಾಳುಗೆಡವಲಿದೆಯೆಂಬ ಆತಂಕವಿದೆ. ಆದ್ದರಿಂದ ಪಾರ್ಕ್‌ಗೆ ಅಗತ್ಯವಿರುವ ಭೂಮಿಯನ್ನು ಯಶವಂತಪುರ- ಯಲಹಂಕ ರಸ್ತೆಗೆ ಹೊಂದಿಕೊಂಡಂತೆ ನೀಡಬಹುದು ಎಂಬುದು ವಿ.ವಿ.ಯ ಸೂಚನೆ. ಆದರೆ, ಸರ್ಕಾರಕ್ಕೆ ಇದು ಬೇಕಿಲ್ಲ, ಅತ್ಯಂತ ಬೆಲೆ ಬಾಳುವ ಆ 'ಬಂಗಾರ ಭೂಮಿ' ತಮ್ಮ ವ್ಯವಹಾರಕ್ಕೆ ಬೇಕು ಎಂಬ ಅದರ ದುರುದ್ದೇಶ ಸ್ಪಷ್ಟ.

ಆದ್ದರಿಂದ ಸರ್ಕಾರ ಕನಿಷ್ಟ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು, ವಿಧಾನವನ್ನು ಉಲ್ಲಂಘಿಸಿದೆ. ಅಧಿಕಾರದಲ್ಲಿದ್ದೇವೆ ಎಂಬ ಗತ್ತಿನಲ್ಲಿ ನೆಲಗಳ್ಳರಂತೆ ಅಥವಾ ಭೂಮಾಲಿಕ ಸ್ಥಾಪಿತ ಹಿತಾಸಕ್ತಿಗಳಂತೆ ನಡೆದುಕೊಂಡಿರುವುದು ನಾಚಿಕೆಗೇಡು. ಈ ಹೈಟೆಕ್ ಅರಸರ ಸೇವೆಗಾಗಿ ಯಾವುದೇ ಶಿಷ್ಟಾಚಾರ, ಕಾನೂನು, ಪ್ರಜಾಸತ್ತಾತ್ಮಕ ಕ್ರಮಗಳ ಉಲ್ಲಂಘನೆ ಏನು, ಭಿನ್ನಾಭಿಪ್ರಾಯ ತೋರಿಸಿದರೆ ಏನೂ ಮಾಡಲು ಹೇಸೆನು ಎಂದು ಕೃಷ್ಣ ಸರ್ಕಾರ ವರ್ತಿಸಿರುವುದು ಅಪಾಯದ ಸೂಚನೆ.

ಇನ್ನಾದರೂ ಸರ್ಕಾರ ಜೈವಿಕ ತಂತ್ರಜ್ಞಾನದ ಪಾರ್ಕ್‌ಗೆ ಜಾಗ ಬೇರೆಕಡೆ ಗುರುತಿಸಬೇಕು. 27 ರ ದೌರ್ಜನ್ಯ ಘಟನೆ ಬಗ್ಗೆ ಪೂರ್ಣ ಪ್ರಮಾಣದ ನ್ಯಾಯಾಂಗ ತನಿಖೆ ಆಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಮತ್ತು ತಕ್ಷಣದ ಕ್ರಮವಹಿಸಬೇಕು. ನಡೆದ ಪ್ರಮಾದದ ಬಗ್ಗೆ ಸರ್ಕಾರವು ವಿ.ವಿ.ಶೈಕ್ಷಣಿಕ ಸಮುದಾಯದ ಕ್ಷಮೆ ಕೋರಬೇಕು.

> ಈ ಘಟನೆಯ ಸ್ಥಳಕ್ಕೆ ಎಸ್‌ಎಫ್‌ಐ ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯರಾದ ಶಮೀಕ್ ಲಹರಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯನಾರಾಯಣ ರಾವ್ ಭೇಟಿ ನೀಡಿ ಘಟನೆ ವಿವರ ಪಡೆದು, ವಿದ್ಯಾರ್ಥಿ-ಶೈಕ್ಷಣಿಕ ಸಮುದಾಯದ ಹೋರಾಟಕ್ಕೆ ಬೆಂಬಲಿಸಿದ್ದಾರೆ. ಅಲ್ಲದೇ ವಿವಿಧ ಪಕ್ಷಗಳು-ಸಂಘಟನೆಗಳೂ ಬೆಂಬಲ ಸೂಚಿಸಿವೆ. ಹೋರಾಟ ನಡೆದಿದೆ.

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ. ಗುರುಶಾಂತ್

ರಾಜಕೀಯನಿರಾಶ್ರಿತರಿಗೆ ಮಂಡಳಿಗಳ ಅಧ್ಯಕ್ಷ ಪಟ್ಟ

ರಾಜಕೀಯ ನಿರಾಶ್ರಿತರಿಗೆಲ್ಲಾ ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಿಸಿ ಪುನರ್ವಸತಿ ಕಲ್ಪಿಸಿದ್ದಾರೆ ಎಸ್.ಎಂ.ಕೃಷ್ಣರವರು. ಈ ಕಳೆದೆರಡು ವರುಷಗಳಿಂದ ಈಗಲೋ-ನಾಳೆಗೋ ಎಂದು ಕುರ್ಚಿ ಹಿಡಿಯಲು ಕಾಯುತ್ತಿದ್ದ ಕೆಲವರಿಗೆ ಸಿಕ್ಕಿದ್ದೇ ಸಾಕು ಎಂಬ ಖುಷಿಯೋ .... ಸಿಗದವರಿಗೆ ಅಸಂತೃಪ್ತಿ ಹೆಚ್ಚಿ ರಾದ್ಧಾಂತಕ್ಕಿಳಿದ ಘಟನೆಗಳು ನಡೆದಿವೆ. ಈಗಾಗಲೇ ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳಲ್ಲಿ ಎನ್.ಜಿ.ಎಫ್., ಮೈಸೂರು ಲ್ಯಾಂಪ್ ಮುಂತಾದವುಗಳು ಅಪಾರ ಹಾನಿ ಅನುಭವಿಸಿ, ಅವುಗಳ ಅಭಿವೃದ್ಧಿಗೆ ಸೂಕ್ತ ನೆರವು, ರಾಜಕೀಯ - ಆಡಳಿತಾತ್ಮಕ ಇಚ್ಛಾಶಕ್ತಿ ಇಲ್ಲದೆ ಕೊನೆಯುಸಿರೆಳೆಯುತ್ತಾ ಕುಸಿಯುತ್ತಿರುವ ಸಂಸ್ಥೆಗಳಿಗೆ ಈ ಬಿಳಿ ಆನೆಗಳನ್ನು ಕೂರಿಸಿರುವುದು ಪರಿಸ್ಥಿತಿ ಸುಧಾರಿಸದೇ ಹದಗೆಡುವ ಸಂಭವವೇ ಹೆಚ್ಚು. ಈ ಅಧ್ಯಕ್ಷರುಗಳ ಕಾರುಬಾರು-ಪ್ರವಾಸ, ಭತ್ಯೆ ಖಂಡಿತಕ್ಕೂ ಹೊರೆಯಾಗಲಿದೆ. ಆದರೆ ಕೃಷ್ಣರವರಿಗೆ ಇದರ ಚಿಂತೆಯಿಲ್ಲ. ಹೇಗಾದರೂ ಆಗಲಿ ಬೆನ್ನಿಗೆ ಬಿದ್ದವರಿಗೆ, ಬೆನ್ನಿಗೆ ಗುದ್ದುವವರಿಗೆ ಮಂತ್ರಿ-ಶಾಸಕ ಸ್ಥಾನ ಸಿಗದವರಿಗೆ, ಭಿನ್ನಮತೀಯರಿಗೆ 'ಅಧಿಕಾರ'ಹಂಚಿ ತಮ್ಮ ತಂಟೆಗೆ ಬರದಂತಿದ್ದರೆ ಸಾಕು ಎಂಬ ನಿಲುವು. ನೇಮಕಗೊಂಡವರು ಅಭಿನಂದಿಸಿಕೊಳ್ಳುತ್ತಿರುವಾಗಲೇ ಭಿನ್ನಮತ ಸ್ಫೋಟಗೊಂಡು, ಡಿ-ಕಾಸ್ಟ್‌ನಂತಹವರು ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿ ಬಂದದ್ದು ಕೃಷ್ಣರ ಬಗ್ಗೆ ಪಕ್ಷದೊಳಗೇ ಬೆಂಕಿ ಹೊತ್ತಿಕೊಳ್ಳುತ್ತಿರುವುದಕ್ಕೆ ಉದಾಹರಣೆ. ಇಂತಹ ವರಸೆ ರಾಜ್ಯದ ಅಭಿವೃದ್ಧಿಗೂ, ಜನತೆ, ಸಂಸ್ಥೆಗಳಿಗೂ ಹೆಚ್ಚಿನದ್ದನ್ನು ತರಲಾರದು.

ಚೆಡ್ಡಿಗಳ ಮೆರವಣಿಗೆ - ಲಾಠಿಗಳ ಚಿತಾವಣೆ

ಮಂಗಳೂರಿನ ಬಜಿ, ಬೋಂಡಾ-ಬೊಂಗಡೆ ಸಹಜ ನಲಿವಿನಿಂದ 'ಶಿಸ್ತಾ'ಗಿ ಮೆಲ್ಲುತ್ತಾ, ಬೌದ್ಧಿಕ ವರ್ಗದಲ್ಲಿ ಗುಸುಗುಸು ಮಾತಾಡಿಕೊಂಡು ಮೊನ್ನೆ ಬೀದಿಗಳಲ್ಲಿ ಚೆಡ್ಡಿಗಳ ಮೆರವಣಿಗೆ ನಡೆಯಿತು. ಚೆಡ್ಡಿಗಳಲ್ಲೇ ಮಹಾಚೆಡ್ಡಿಯಾಗಿರುವ ಸುದರ್ಶನ ಭಯಂಕರವಾದ 'ಆಶೀರ್ವಚನ' ನೀಡಿ ಭಾರತಕ್ಕೆ ಪಾಕ್‌ಗಿಂತ ಚೀನಾ ಅಪಾಯಕರ, ಅದರ ಪ್ರಭಾವ ಭಾರತದಲ್ಲಿಯೂ ವಿಸ್ತರಣೆಯಾಗುತ್ತಿದೆ ಎಂದು ಅಡ್ಲಾಲ್ಫ್ ಹಿಟ್ಲರನ ನ್ಯಾಯತೀರ್ಪು ನೀಡಿಬಿಟ್ಟಿದ್ದಾರೆ. ಕೈಯಲ್ಲಿ ಬಡಿಗೆ ಹಿಡಿದೇ ಶಾಂತಿ-ಸಾಮರಸ್ಯ, ದೇಶೋದ್ಧಾರದ ಮಾತನಾಡಿದ ಅವರು ಒಡಲೊಳಗೆ



ಕೊತಕೊತ ಕುದಿವ ಕಮ್ಯುನಿಸ್ಟ್ ವಿರೋಧಿ ಹಳಸಲು ವಿಷವನ್ನು ಒಂದೇ ಬಾರಿಗೆ ಕಕ್ಕಿದ್ದನ್ನೇ 'ಸ್ವಯಂ ಸೇವಕರು' ಆಹಾ ಸಿಕ್ಕಿತಲ್ಲಾ ಪ್ರಸಾದವೆಂದು ಬೊಗಸೆ ತುಂಬಾ ಬಳಿದುಕೊಂಡು ನೆಕ್ಕಿ ನೆತ್ತಿಗೇರಿಸಿಕೊಂಡರಂತೆ. ಇಂತಹ ವರ್ಣರಂಜಿತ ವಿಶ್ಲೇಷಣೆಯ ವರದಿಯನ್ನು 'ತಮ್ಮನಿಷ್ಠರಿಂದ' ಕೇಳಿಸಿಕೊಂಡ ಅಮೆರಿಕಾದ ಬುಶ್ ಮಹಾಶಯರು ಜಾಗತಿಕ ಭಯೋತ್ಪಾದನೆ ನಿರ್ಮೂಲವಾಗ ಬೇಕಾದರೆ ಭಾರತದ ಈ ತಾಲಿಬಾನ್‌ಗಳ ಬಾಯಿ ಮತ್ತು ಬಡಿಗೆಗಳಿಗೆ, ಬಲ ನೀಡುವುದು ತುರ್ತು ಅಗತ್ಯೆಂದು, ತಮ್ಮ ಸಹಾಯನಿಧಿ ಕೋಟಾ ಹೆಚ್ಚಿಸಿ ಡಾಲರ್ 'ಶ್ಯಾಂಕ್ಷನ್' ಮಾಡಲು ಅನಿವಾಸಿಗಳಿಗೂ, ಬ.ಕ.ಗಳಿಗೂ ಸೂಚನೆ ನೀಡಿಬಿಟ್ಟಿದ್ದಾರಂತಲ್ಲಾ. ಹುಬ್ಬಳ್ಳಿಯಿಂದ ವಾಪಸ್ಸಾದ ಬಜರಂಗಿಗಳು ಇದರಿಂದ ಹುರಿಗೊಂಡು ತಮ್ಮ ದೇಶಪ್ರೇಮ ಮೆರೆಸಲು ದೇಶ ತುಂಬಾ ಹತ್ತಿ ಉರಿಸಬಹುದಾದ ಹಾಟ್‌ಸ್ಪಾಲ್‌ಗಳ 'ಸ್ಕೆಚ್' ರೆಡಿಮಾಡಿಕೊಂಡಂತಲ್ಲ. ಈ ಬಡಿಗೆ ಬಹದ್ದೂರರನ್ನು ಬಾಯ್ತುಂಬ ಹರಸಿದ್ದ ಉಡುಪಿ ಮಠದ ಸನ್ಯಾಸಿ ರಾಜಕಾರಣಿ ಪೇಜಾವರರು ಇದಕ್ಕೂ ತಮಗೂ ಏನೂ ಸಂಬಂಧ ವಿಲ್ಲವೆಂದೂ, ತಮ್ಮದು ಅವರೊಂದಿಗೆ ಕೇವಲ 'ಧರ್ಮ ಸಂಬಂಧ' ವೆಂದು ಕೈಕೊಡವಿ ಕಮಂಡಲ ಹಿಡಿದು ಅಯೋಧ್ಯೆಯತ್ತ ಮಂದಿರ ನಿರ್ಮಾಣಕ್ಕೆ ಕರಸೇವೆಗಾಗಿ ಈಗಲೇ ಯಾತ್ರೆ ಆರಂಭಿಸಿಬಿಟ್ಟರು ಎಂಬುದು ಕುಹಕದ ಸುದ್ದಿಯಲ್ಲವಂತೆ.

ಸರಕಾರಿ ನೌಕರರ ದಂಡನೆ ಕರಾಳ ನಿರ್ಧಾರ

ಎಸ್.ಎಂ.ಕೃಷ್ಣರವರು ತಾವು ಜನರಿಂದ ಚುನಾಯಿತ ಸರಕಾರವೆಂಬುದನ್ನು, ಪ್ರಜಾಪ್ರಭುತ್ವೀಯ ಮೌಲ್ಯಗಳ ಆಧಾರದಲ್ಲಿ ನಡೆಯಬೇಕೆಂಬುದನ್ನು ಎಂದೋ ಮರೆತುಬಿಟ್ಟಿದ್ದಾರೆ. ಸಚಿವ ಸಂಪುಟದ ಬದಲು ಟಾಸ್ಕ್ ಫೋರ್ಸ್‌ಗಳದ್ದೇ ಕಾರುಬಾರು, ಮುಖ್ಯಮಂತ್ರಿ ಬದಲು CEO ಮಾದರಿ ಆಡಳಿತ...

ಈಗ ಸರ್ಕಾರ ಎರಡು ಪ್ರಮುಖ ವಿಷಯಗಳ ಬಗ್ಗೆ ನಿರ್ಧಾರ ಕೈಗೊಂಡು ಜಾರಿಗೆ ಮುಂದಾಗಿದೆ. ಒಂದು ಹೊಸ ಕೈಗಾರಿಕಾ ನೀತಿ. ಅದನ್ನು ನವೆಂಬರ್ 1 ರಿಂದಲೇ ಜಾರಿಗೆ ತರಲಾಗುವುದಂತೆ. ಇನ್ನೊಂದು ಅತ್ಯಂತ ಕರಾಳ ನಿರ್ಧಾರ 'ಸರ್ಕಾರಿ ನೌಕರರ ವಿರುದ್ಧ ಸಾಬೀತಾದ ಆರೋಪಿಗಳಿಗೆ ನೀಡುವ ಶಿಕ್ಷೆಗಳ ಸುತ್ತೋಲೆ (ಇ.ಸಿ.ಅ.ಸು., 18 ನೇ ಇವಿ 2001)

ಕೈಗಾರಿಕಾ ನೀತಿಯಂತಹ ಪ್ರಮುಖ ವಿಷಯಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಟನೆಗಳೊಂದಿಗೆ ಮುಕ್ತವಾಗಿ ಸಮಾಲೋಚಿಸಬೇಕಿತ್ತು. ವಿಧಾನಸಭೆಗಳಲ್ಲಿಯೂ ಚರ್ಚಿಸಿ, ನಿರ್ಧರಿಸಬೇಕಿತ್ತು. ಇಂತಹ ಸಂವಾದದಲ್ಲಿ ಸರ್ಕಾರಕ್ಕೆ ಆಸಕ್ತಿಯಿಲ್ಲ, ಬೇಕಾಗಿಯೂ ಇಲ್ಲ. ಬಹುದೊಡ್ಡ ಮಾಲೀಕರು ಕೈಗಾರಿಕೋದ್ಯಮಿಗಳ ಅಂಗೀಕಾರವೇ ಸಾಕೆಂದು ಭಾವಿಸಿದೆ.

ಸರ್ಕಾರಿ ನೌಕರರ ಮೇಲಿನ ಸೂಚಿತ ದಂಡನಾಕ್ರಮಗಳು ಅತ್ಯಂತ ಕರಾಳ, ಸರ್ವಾಧಿಕಾರಿತನದಿಂದ ಕೂಡಿವೆ. ನೌಕರರನ್ನು ಹೇಗಾದರೂ ಮಾಡಿ ಬಲಿಹಾಕಲು, ಅವರುಗಳನ್ನು ಕ್ರಿಮಿನಲ್‌ಗಳಂತೆ ದಂಡಿಸುವುದೇ, ಮನಬಂದಂತೆ ಕ್ರಮವಹಿಸಲು ಪೂರ್ಣವಾದ ಶಸ್ತ್ರವನ್ನು ಅದು ಒಳಗೊಂಡಿದೆ. ಇದು ಉಗ್ರ ಖಂಡನೀಯ. ಈ ನಿರ್ಧಾರ ವಾಪಾಸಾಗಿಸಲು ಸರ್ಕಾರಿ ನೌಕರರು ಹಾಗೂ ಇತರೆ ಪ್ರಜಾಸತ್ತಾತ್ಮಕ ಚಳುವಳಿ ತೀವ್ರವಾಗಿ ಪ್ರತಿರೋಧಿಸಿ, ಹಿಂತೆಗೆದುಕೊಳ್ಳುವಂತಾಗಬೇಕು.

ವಿವರ ಲೇಖನ: ಮುಂದಿನವಾರ

ಉದಾರೀಕರಣದ ದಾಳಿ, ಆಡಳಿತಾದಿಕಾರಿಗಳ ನಿರಂತರ ಲೂಟಿ. ಅವರಿಗೆ ಅಲ್ಲಿ ಅಧಿಕ ವೇತನ ಭತ್ಯೆ, ಆಂಧ್ರದಿಂದ ಹೆಚ್ಚಿನ ಬೆಲೆ ನೀಡಿ ಎಣ್ಣೆ ಬೀಜ ಖರೀದಿಸಿ ರಾಜ್ಯದ ರೈತದ ಹಿತ ನಿರ್ಲಕ್ಷಿಸಿ ಕೋಟ್ಯಾಂತರ ರೂ. ಲೂಟಿ, ಮತ್ತೊಂದೆಡೆ ನಾಲ್ಕು ವರ್ಷಗಳಿಂದಲೂ ಕಾರ್ಮಿಕರ ವೇತನ ಪರಿಷ್ಕರಣೆಗೆ ನಿರಾಕರಣೆ, ಅಧಿಕಾರಿಗಳನ್ನು ಪ್ರಶ್ನಿಸುವ ಕಾರ್ಮಿಕರ ಮುಖಂಡರ ವಜಾ - ಅಮಾನತು, ಸರ್ಕಾರದ ದಿವ್ಯ ನಿರ್ಲಕ್ಷ್ಯ, ಸಂಸ್ಥೆ ಮುಚ್ಚಿಹೋಗುವ ಬೀತಿಯಲ್ಲಿ ರೈತರು ಕಾರ್ಮಿಕರು ಇದು ಹೊಸಪೇಟೆ ಕರ್ನಾಟಕ ಆಯಿಲ್ ಪೆಡರೇಷನ್‌ನ (ಕೆ.ಓ.ಎಫ್) ದಾರುಣ ಚಿತ್ರ.

ದಿವಾಳಿಯತ್ತ ಹೊಸಪೇಟೆಯ ಕೆ.ಓ.ಎಫ್.

ರಾಜ್ಯದಲ್ಲಿ ಎಣ್ಣೆ ಬೀಜ ಬೆಳೆಯುವ ರೈತರ ಹಿತಕಾಪಾಡಲೆಂದು 1985ರಲ್ಲಿ ಸಹಕಾರಿ ರಂಗದಲ್ಲಿ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಒಕ್ಕೂಟ ಸ್ಥಾಪನೆಯಾಯ್ತು. ಈ ಒಕ್ಕೂಟ ಹೊಸಪೇಟೆ, ಹುಬ್ಬಳ್ಳಿ, ರಾಯಚೂರು, ಬೆಂಗಳೂರು, ಮುಂತಾದ ಸ್ಥಳಗಳಲ್ಲಿ ಘಟಕಗಳನ್ನು ಹೊಂದಿದೆ. ರಾಜ್ಯದ ರೈತರಿಂದ ಶೇಂಗಾ ಸೂರ್ಯಕಾಂತಿ ಮುಂತಾದ ಎಣ್ಣೆ ಬೀಜಗಳನ್ನು ಬೆಂಬಲ ಬೆಲೆ ನೀಡಿ ಒದಗಿಸುವ ಜೊತೆಗೆ ಸಹಕಾರಿ ರಂಗವೂ ಅಭಿವೃದ್ಧಿ ಹೊಂದುವುದು ಇದು ಒಕ್ಕೂಟ ಸ್ಥಾಪನೆಯ ಮೂಲ ಉದ್ದೇಶ.

ಹೊಸಪೇಟೆ ಘಟಕ ದಿವಾಳಿಯತ್ತ

ಇಂತಹ ಘನ ಉದ್ದೇಶದೊಂದಿಗೆ ಆರಂಭವಾದ ಕೆ.ಓ.ಎಫ್. ಈಗ ವಿದೇಶದಿಂದ ಮುಕ್ತವಾಗಿ ಆಮದು ಮಾಡಿಕೊಳ್ಳುವ ನೀತಿಯ ಫಾಳಿಗೆ ಒಳಗಾಗಿದೆ ಇನ್ನೊಂದೆಡೆ ತನ್ನ ಆಡಳಿತಾದಿಕಾರಿಗಳ ಮಿತಿ ಮೀರಿದ ಭ್ರಷ್ಟತೆ ಲೂಟಿಕೋರತನ, ಸ್ವೇಚ್ಛಾ ಪ್ರವೃತ್ತಿಗಳಿಂದಾಗಿ ಅದು ತನ್ನ ಅನೇಕ ಘಟಕಗಳು ದಿವಾಳಿಯತ್ತ ಸಾಗಿವೆ. ಕೊನೆಯುಸಿರೆಳೆಯಲು ಸಿದ್ಧವಾಗಿ ನಿಂತಿವೆ. ಸರ್ಕಾರದ ದಿವ್ಯ ನಿರ್ಲಕ್ಷವು ಭ್ರಷ್ಟ ಆಡಳಿತಾಧಿಕಾರಿಗಳಿಗೆ ಮಣೆ ಹಾಕಿದಂತಾಗಿದೆ. ಕಾರ್ಮಿಕರ ಮೇಲಿನ ದೌರ್ಜನ್ಯಗಳಿಗೆ ಕೊನೆಯಿಲ್ಲದಾಗಿದೆ.

ಹೊಸಪೇಟೆಯಲ್ಲಿರುವ ಕೆ. ಓ.ಎಫ್. ಘಟಕದಲ್ಲಿ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಗಳ 135 ಎಣ್ಣೆ ಬೀಜ ರೈತರ ಸಹಕಾರಿ ಸಂಘಗಳು ಸೇರಿವೆ. ಈ ಸಹಕಾರಿ ಸಂಘಗಳು ರೈತರಿಂದ ಎಣ್ಣೆ ಬೀಜಗಳನ್ನು ಖರೀದಿಸಿ ಕೆ.ಓ.ಎಫ್.ಗೆ ಮಾರುತ್ತವೆ.

ಭ್ರಷ್ಟ ಅಧಿಕಾರಿಗಳ ನೇಮಕ


ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್ (ಎನ್.ಡಿ.ಡಿ.ಬಿ)ನಿಂದ ನೇಮಕಗೊಂಡಿರುವ ಕೇರಳ ಮೂಲದ ಜಾನ್ ಜೊಸೆಫ್ ಇಲ್ಲಿನ ವ್ಯವಸ್ಥಾಪಕ ನಿರ್ದೇಶಕರಾಗಿ ಬಂದ ನಂತರ ಈ ಸಂಸ್ಥೆಯಲ್ಲಿನ ಲೂಟಿ ಮಿತಿಮೀರತೊಡಗಿದೆ. ಜಾನನೊಡನೆ ಶಾಮೀಲಾಗಿರುವ ಚುನಾಯಿತ ಅಧ್ಯಕ್ಷ ಬಿಜೆಪಿಯ ಮಲ್ಲಿಕಾರ್ಜುನ ರೆಡ್ಡಿ ಎಂಬ ವಂಚಕ ತಾನೂ ಎಷ್ಟು ಸಾಧ್ಯವೋ ಅಷ್ಟನ್ನೂ ಲೂಟಿ ಮಾಡಿ ಜೇಬಿಗಿಳಿಸುತ್ತಿದ್ದಾನೆ.

ಇತ್ತೀಚಿನ ಲೂಟಿ

ರಾಜ್ಯದ ರೈತರು ಬೆಳೆದ ಶೇಂಗಾ ಬೆಲೆ ಕ್ವಿಂಟಾಲ್ ಒಂದಕ್ಕೆ 2000-01 ರಲ್ಲಿ 1000 ರೂಪಾಯಿ. ಅದೇ ವೇಳೆ ಆಂಧ್ರದ ಶೇಂಗಾ ಬೆಲೆ 900 ರೂಪಾಯಿ ಮಾತ್ರ. ಆದರೂ ಜಾನ್ ಕೂಟ ಆಂಧ್ರದ ವ್ಯಾಪಾರಿಗಳಿಗೆ ಕ್ವಿಂಟಾಲ್ ಒಂದಕ್ಕೆ ಕೊಟ್ಟ ಬೆಲೆ 1250 ರೂಪಾಯಿಗಳು, ರಾಜ್ಯದ ರೈತರು ತಮ್ಮ ಬೆಳೆಗೆ ಸರಿಯಾದ ಬೆಲೆಸಿಗದೆ, ನಷ್ಟ ಅನುಭವಿಸುತ್ತಿರುವಾಗ ಇಲ್ಲಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಈ ವಂಚಕರು ಆಂಧ್ರದಿಂದ 50 ಕ್ವಿಂಟಾಲ್ ಶೇಂಗಾ ಖರೀದಿಸಿದರು. 2 ಕೋಟಿಗೂ ಅಧಿಕ ಹಣ ಲಪಟಾಯಿಸಿದರು. ಆಂಧ್ರದ ಶೇಂಗಾದಲ್ಲಿ ಎಣ್ಣೆಯ ಅಂಶವೂ ತೀರಾ ಕಡಿಮೆ ಕರ್ನಾಟಕದ ಶೇಂಗಾದಲ್ಲಿ ಎಣ್ಣೆಯ ಅಂಶ ಶೇ. 45 ರಷ್ಟಿದ್ದರೆ, ಆಂಧ್ರದ ಶೇಂಗಾದಲ್ಲಿ ಕೇವಲ ಶೇ. 10 ರಷ್ಟು ಮಾತ್ರ ಎಂಬ ಅಂದಾಜು. ಒಂದೆಡೆ ಅಧಿಕ ಬೆಲೆ ನಿಗದಿಪಡಿಸಿ ಕೋಟ್ಯಾಂತರ ರೂ ಗಳಿಸಿದ ಇವರು ಮತ್ತೊಂದೆಡೆ ಎಣ್ಣೆಯ ಪ್ರಮಾಣವೂ ಕಡಿಮೆಯಾಗಿ ಸಂಸ್ಥೆಗೆ ಮತ್ತಷ್ಟು ನಷ್ಟ ಉಂಟಾಗುವಂತೆ ಮಾಡಿದರು.

ಕಾರ್ಮಿಕರ ಮೇಲೆ ವಿಪರೀತ ದೌರ್ಜನ್ಯ

- ಕಳೆದ ನಾಲ್ಕು ವರ್ಷಗಳಿಂದ ಇಲ್ಲಿನ ಕಾರ್ಮಿಕರು ತಮ್ಮ ವೇತನ ಪರಿಷ್ಕರಣೆಗಾಗಿ ಒತ್ತಾಯಿಸುತ್ತಲೇ ಬಂದಿದ್ದಾರೆ. ಕೇಂದ್ರ ಸರ್ಕಾರ ತನ್ನ ನೌಕರರಿಗೆ 5ನೇ ವೇತನ ಆಯೋಗದ ಮಧ್ಯಂತರ ಆದೇಶವನ್ನು



ಭ್ರಷ್ಟಸೂತ್ರದಾರ ಚಂದ್ರಪ್ಪ



ಗುಳ್ಳೇನರಿ ಜಾನ್ ಜೋಸೆಫ್



ಮೆತ್ತಗೆ ಮೇಯುವ ಮಲ್ಲಿಕಾರ್ಜುನ

1997ರಲ್ಲಿ ಜಾರಿಗೊಳಿಸಿತು. ರಾಜ್ಯ ಸರ್ಕಾರವೂ ತನ್ನ ನೌಕರರಿಗೆ ಆದೇಶದಂತೆ ಶೇ. 20 ರಷ್ಟು ವೇತನ ಹೆಚ್ಚಳ ಮಾಡಿತು. ಸರ್ಕಾರದ ಅಂದಿನ ಆದೇಶ ಸಹಕಾರಿ ಉದ್ಯಮಗಳಿಗೂ ಅನ್ವಯಿಸುವುದರಿಂದ ಹೊಸಪೇಟೆಯ ಕೆ.ಓ.ಎಫ್. ಕಾರ್ಮಿಕರು ತಮಗೂ ಮಧ್ಯಂತರ ಪರಿಹಾರ ರೂಪದಲ್ಲಿ ಶೇ. 20ರಷ್ಟು ವೇತನ ನೀಡಬೇಕೆಂದು ಅದಿಕಾರಿಗಳನ್ನು ಒತ್ತಾಯಿಸುತ್ತಲೇ ಬಂದಿದ್ದಾರೆ. ತಮ್ಮ ಬೇಡಿಕೆಗೆ ಒತ್ತಾಯಿಸಲು 1998ರ ಮೇ ತಿಂಗಳಲ್ಲಿ 16 ದಿನಗಳ ಮುಷ್ಕರವನ್ನು ನಡೆಸಿದರು. ಕಾರ್ಮಿಕ ಆಯುಕ್ತರ ಮಧ್ಯ ಪ್ರವೇಶದಿಂದ ಶೇ. 20 ರಷ್ಟು ಮಧ್ಯಂತರ ಪರಿಹಾರವನ್ನು ಇನ್ನೆರಡು ತಿಂಗಳಲ್ಲಿ ನೀಡುವುದಾಗಿಯೂ ಆಡಳಿತ ಮಂಡಳಿ ಒಪ್ಪಿತ್ತು. ಆದರೆ ಕಾರ್ಮಿಕರ ಬೇಡಿಕೆ ಈಡೇರುವ ಬದಲು ಅವರಿಗೆ ಕಿರುಕುಳ, ದೌರ್ಜನ್ಯ ಹೆಚ್ಚಿತು. ಸಂಘದ ಮುಖಂಡರನ್ನು ಕೆಲಸದಿಂದ ವಜಾ ಮಾಡಿದರು. ಜಾನ್ ಮತ್ತು ಆತನ ಕೂಟದ ಎದುರು ನಿಂತು ಮಾತನಾಡುವ ಯಾವುದೇ ಕಾರ್ಮಿಕನೂ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕು. ಇದುವರೆಗೆ 10 ಕಾರ್ಮಿಕರ ಡಿಸ್‌ಮಿಸ್ ಮೂವರ ಸಸ್ಪೆಂಡ್ ಆಗಿದೆ. ಕಾರ್ಮಿಕರನ್ನು ಜೀತದಾಳುಗಳಂತೆ ನೋಡಲಾಗುತ್ತದೆ. ಕಾರ್ಮಿಕರಿಗೆ ಸಿಗಬೇಕಾದ ನ್ಯಾಯವಾದ ವೇತನ ನೀಡದೆ, ಅಪಘಾತದಲ್ಲಿ ನೊಂದವರಿಗೆ ಯಾವುದೇ ಪರಿಹಾರ ನೀಡದೆ ಉಳಿಸಿದ ಹಣವನ್ನೇ ಸಂಸ್ಥೆಯು 1 ಕೋಟಿ ಲಾಭಗಳಿಸಿದೆಯೆಂದು ತೋರಿಸಲು ಜಾನ್ ಕೂಟ ಮುಂದಾಗಿದೆ.

ವೇತನ, ಭತ್ಯೆ ಹೆಸರಿನಲ್ಲೂ ಲೂಟಿ

ಕಾರ್ಮಿಕರಿಗೆ ನ್ಯಾಯವಾಗಿ ನೀಡಬೇಕಾದ ಸೌಲಭ್ಯ ನೀಡಲು ನಿರಾಕರಿಸುವ ಆಡಳಿತ ಮಂಡಳಿ ವೇತನ ಭತ್ಯೆ ಹೆಸರಿನಲ್ಲಿ ತಾನು ಹಣ ಲೂಟಿ ಹೊಡೆಯುತ್ತಿದೆ. ಎಂ.ಡಿ.ಜಾನ್ ಜೊಸೆಫ್‌ನ ತಿಂಗಳ ವೇತನ ಸುಮಾರು 40 ಸಾವಿರ ರೂಪಾಯಿ. ತನ್ನ ಪ್ರಯಾಣದ ಖರ್ಚಿಗೆ ತಿಂಗಳಿಗೆ 25 ಸಾವಿರ ರೂಪಾಯಿ. ಅಧ್ಯಕ್ಷ ಮಲ್ಲಿಖಾರ್ಜುನ ರೆಡ್ಡಿಯೂ ಇದರ ಜೊತೆ ಕೈಜೋಡಿಸಿ ಲೂಟಿ ಹೊಡೆಯುತ್ತಿದ್ದಾರೆ. ಸಂಸ್ಥೆಗೆ ಯಾವುದೇ ವಸ್ತು ಖರೀದಿಸಿದರೂ ಕಮಿಷನ್, ಸುಳ್ಳು ಲೆಕ್ಕ ಯಾವುದೇ ವಸ್ತು ಮಾರಿದರೂ ಕಮಿಷನ್, ಸುಳ್ಳುಲೆಕ್ಕ.

ಸಮಗ್ರ ತನಿಖೆಗೆ ಒತ್ತಾಯ

ಇವರ ಅವ್ಯವಹಾರದ ಬಗ್ಗೆ ತನಿಖೆ ನಡೆಸುವಂತೆ ಇಲ್ಲಿನ ರೈತರು ಕಾರ್ಮಿಕರು ಒತ್ತಾಯಿಸುತ್ತಲೇ ಬಂದಿದ್ದಾರೆ. ಭ್ರಷ್ಟ ಅಧಿಕಾರಿಗಳನ್ನು ವಜಾಗೊಳಿಸುವಂತೆ, ಸಂಸ್ಥೆಯನ್ನು ಉಳಿಸುವಂತೆ ಅಲ್ಲಿನ ರೈತರು ಕಾರ್ಮಿಕರು ಸರ್ಕಾರಕ್ಕೆ ಒತ್ತಡ ಏರುತ್ತಲೇ ಇದ್ದಾರೆ ಸರ್ಕಾರ ಕಣ್ಣು ಮುಚ್ಚಿಕುಳಿತಿದೆ.

ರೈತ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ನಿಂತ ಸಿಪಿಐ(ಎಂ)ನ ಬಳ್ಳಾರಿ ಜಿಲ್ಲಾ ಸಮಿತಿ ಸಂಸ್ಥೆಯಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ಕಠಿಣ ಕ್ರಮ ಜರುಗಿಸಲು ಒತ್ತಾಯಿಸಿದೆ.

ಉದಾರೀಕರಣ, ಜಾಗತೀಕರಣ ನೀತಿಯಿಂದಾಗಿ ವಿದೇಶದ ಎಣ್ಣೆಗಳು ನಮ್ಮ ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳುತ್ತಿದ್ದರೆ, ಮತ್ತೊಂದೆಡೆ ಇಲ್ಲಿನ ಎಣ್ಣೆ ಗಿರಣಿಗಳು ಮುಚ್ಚುತ್ತಿವೆ. ಸಹಕಾರಿ ತತ್ವದ ಆದಾರದಲ್ಲಿ ಸ್ಥಾಪಿತವಾದ ಕೆ.ಓ.ಎಫ್.ಗೆ ಭ್ರಷ್ಟ ಅಧಿಕಾರಿಗಳ ನೇಮಕದಿಂದಾಗಿ ದಿವಾಳಿಯತ್ತ ಸಾಗಿವೆ. ಕೇಂದ್ರದ ಉದಾರೀಕರಣ ಭ್ರಷ್ಟ ಅಧಿಕಾರಿಗಳ ಲೂಟಿ, ರಾಜ್ಯ ಸರ್ಕಾರದ ನಿರ್ಲಕ್ಷ ಧೋರಣೆಗಳಿಂದಾಗಿ ಎಣ್ಣೆ ಬೀಜ ಬೆಳೆಯುವ ರೈತರು ಮತ್ತು ಕೆ.ಓ.ಎಫ್.ನ ಕಾರ್ಮಿಕರು ಸಂಕಷ್ಟದಲ್ಲಿ ಸಿಲುಕಿದ್ದಾರೆ.

ಇಂತಹ ಭ್ರಷ್ಟತೆ, ಸೋರಿಕೆ ಬಗ್ಗೆ ಪ್ರತಿಭಟಿಸಿದರೆ, ಹಾನಿ ಏಕೆಂದು ಪ್ರಶ್ನಿಸಿದರೆ ಇಂತಹ ಸಂಸ್ಥೆಗಳ ಸ್ಥಿತಿ ಅರ್ಥವಾಗುತ್ತಿಲ್ಲವಲ್ಲಾ ಎಂದು ಜಾಗತೀಕರಣದ ಸಿದ್ಧಾಂತ ಬಿಚ್ಚುವ ಹಿರಿಯ ಅಧಿಕಾರಿಗಳೂ ಇದ್ದಾರೆ. ಅವರ ಲೆಕ್ಕದಂತೆ ನಷ್ಟ ತಡೆಯಬೇಕಾದರೆ ಕಾರ್ಮಿಕರು ತೆಪ್ಪಗಿರಬೇಕು. ಹಾಗೂ ಒದೆ ತಿನ್ನಬೇಕು. ಹೇಗಿದೆ ವಾದ!

ಲೋಕಾಯುಕ್ತರ ತನಿಖೆ ತೀವ್ರಗೊಳ್ಳಬೇಕು

ವ್ಯವಸ್ಥಾಪಕ ನಿರ್ದೇಶಕ ಮತ್ತು ಅಧ್ಯಕ್ಷರು ಹೇಳಿಕೆಯೊಂದನ್ನು ನೀಡಿ ಸಂಸ್ಥೆ 2 ಕೋಟಿ ಲಾಭದಲ್ಲಿದೆ ಎಂದಿದ್ದಾರೆ. ಇದು ದಾರಿ ತಪ್ಪಿಸುವಂತದ್ದಾಗಿದೆ. ಇದರಲ್ಲಿ ಕಾರ್ಮಿಕರಿಗೆ ಸಂದಾಯವಾಗಬೇಕಾದ ಬಾಕಿ ಇರುವ ವೇತನವೇ ಒಂದೂವರೆ ಕೋಟಿ ರೂ. ರೈತರಿಗೆ ಸರ್ಕಾರದಿಂದ ಕೊಟ್ಟಿರುವ ಸಬ್ಸಿಡಿ ಹಣ 80 ಲಕ್ಷ ಎಂದು ರೂ.ಗಳನ್ನು ಕೊಡದೆ 2 ಕೋಟಿ ಲಾಭ ಎಂದು ಹೇಳಿಕೊಳ್ಳಲು ನಾಚಿಕೆ ಬಿಟ್ಟಿದ್ದಾರೆ. ಎಂ.ಡಿ. ಮತ್ತು ಛೇರ್ಮನ್ ಇವುಗಳ ಪತ್ತಾಂಶ ಹೊರ ಬೀಳಲು ಲೋಕಾಯುಕ್ತರ ತನಿಖೆ ತೀವ್ರಗೊಳ್ಳಬೇಕಾಗಿದೆ.

1999 ರಲ್ಲಿ ಅಧ್ಯಕ್ಷ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಮಲ್ಲಿಕಾರ್ಜುನ ರೆಡ್ಡಿ ಕುತಂತ್ರ, ದೌರ್ಜನ್ಯದಿಂದ ಅಧ್ಯಕ್ಷರಾದರು. ಹಿರಿಯರು ಹಾಗೂ ಗಾಂಧಿವಾದಿಯೂ ಆದ 68 ವರ್ಷದ ನಿರ್ದೇಶಕ ರಾಮಕೃಷ್ಣರೆಡ್ಡಿಯವರು ತಮ್ಮನ್ನು ಬೆಂಬಲಿಸುವುದಿಲ್ಲ ಎಂದು ಅರಿತ ಮಲ್ಲಿಕಾರ್ಜುನ ಹಾಗೂ ಎಂ.ಡಿ.ಜಾನ್, ಜೊಸೆಫ್ ಸೇರಿ ಅವರನ್ನು ಕಾರ್ಖಾನೆಯ ದ್ವಾರದ ಬಳಿ ಹೊಡೆದು ಎಲೆದಾಡಿ ಬಟ್ಟೆಗಳನ್ನು ಹರಿದು ಕಿಡ್ನಾಪ್ ಮಾಡಿ, ಮಲ್ಲಿಕಾರ್ಜುನ ರೆಡ್ಡಿ 3ನೇ ಬಾರಿಗೆ ಅಧ್ಯಕ್ಷ ಸ್ಥಾನಕ್ಕೇರಿದರು.

ಈ ಅಕ್ಟೋಬರ್ 15ರ ಒಳಗೇ ಮತ್ತೇ ಅಧ್ಯಕ್ಷ ಸ್ಥಾನದ ಚುನಾವಣೆ ನಡೆಯಲಿದ್ದು ಈ ಚುನಾವಣೆಯಲ್ಲಿಯೂ ತಾವೇ ಗೆಲ್ಲಬೇಕೆಂದು, ಮಲ್ಲಿಕಾರ್ಜುನರೆಡ್ಡಿ, ಮಂತ್ರಿ ಮಹೋದಯರ ಕಾಲು ಹಿಡಿಯಲಿಕ್ಕೆ ವಿಧಾನ ಸೌಧದ ಸುತ್ತ ಗಿರಕಿ ಹೊಡೆಯುತ್ತಿದ್ದಾರೆ. ಇತ್ತ ಎಂ.ಡಿ.ಜಾನ್ ಜೋಸೇಫ್ ರಾಷ್ಟ್ರೀಯ ಹೈನುಗಾರಿಕೆಯ ಹಿರಿಯ ಅಧಿಕಾರಿಗಳ ಕಾಲು ಹಿಡಿದು ಅವರುಗಳಿಂದ ಸಂಬಂಧಪಟ್ಟ ಸಚಿವರುಗಳಿಗೆ ಪತ್ರ ಹಾಕಿಸುವ, ವಿಚಾರಣೆ ಕೈಬಿಡಿಸುವ ಕುತಂತ್ರ ಕೆಲಸದಲ್ಲಿ ತೊಡಗಿದ್ದಾರೆ. ಏಕೆ? ಇಂತಹ ಮುತುವರ್ಜಿ ಎಂಬುವುದು ಇನ್ನೂ ರಹಸ್ಯವಾಗಿದೆ.

ಕಾರ್ಮಿಕರಿಗೆ ಇಲ್ಲದ ಕಿರುಕುಳ ಕೊಡಲು ಶುರುಮಾಡಿದ್ದಾರೆ. ಬಲವಂತವಾಗಿ ವಿಆರ್‌ಎಸ್‌ಗೆ ಒತ್ತಾಯಿಸುವುದು, ಇವುಗಳ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಪೊಲೀಸರು ಎಂ.ಡಿ. ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಒಟ್ಟಾರೆಯಾಗಿ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಅಲ್ಲದೆ ಕಾರ್ಮಿಕರು ಹಾಗೂ ರೈತರ ಕೊಟ್ಯಾಂತರ ಹಣಕ್ಕೂ ಪಂಗನಾಮ ಹಾಕುತ್ತಿದ್ದಾರೆ. NDDB (ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್) ನಿಂದ ಎರವಲು ಸೇವೆಗೆ ಬಂದ ಎಂ.ಡಿ. ಜಾನ್ ಜೋಸೆಫ್ ಜನರಲ್ ಮ್ಯಾನೇಜರ್‌ಗಳಾದ ತಿರುಮಾವಲ್ಲಮ್. ಶ್ರೀನಿವಾಸನ್, ಪ್ರಸಾದ್ ಇವರ 'ಕಬ್ಬಿಣದ ಕಾಲು' ಇಟ್ಟಾಗಿನಿಂದ ಸಂಸ್ಥೆ ಯಾವಾಗ ಮುಚ್ಚುತ್ತಾರೋ ಎಂಬ ಬೀತಿಯಲ್ಲಿ ಕಾರ್ಮಿಕರಿದ್ದಾರೆ.

ಸಂಸ್ಥೆ ಉದ್ಧಾರ ಮಾಡಲು ಕೆಲವರು ಹೆಚ್ಚುವರಿ ಕೆಲಸ ಮಾಡಿದ್ದರೆ. ಇಲ್ಲಿ ಲೋಕಾಯುಕ್ತರ ತನಿಖೆ ದಿಕ್ಕು ತಪ್ಪಿಸಲು, ಸುಳ್ಳು ದಾಖಲೆ ಸೃಷ್ಟಿಸಲು ತಮ್ಮ ಅವ್ಯವಹಾರ ಮುಚ್ಚಲು ಬೆಳಿಗ್ಗೆ 5.30ರಿಂದ ರಾತ್ರಿ 10.ರ ವರೆಗೂ ಕೆಲಸ ಮಾಡುವುದು ಇಲ್ಲಿಯ ಎಂ.ಡಿ. ಮತ್ತು ಜಿ.ಎಂ.ಗಳ ವರಸೆ ಹೇಗಿದೆ ಈ ಪರಿ.

- ವರದಿಗಾರ

ಭಯೋತ್ಪಾದನೆ ವಿರುದ್ಧ ಹೋರಾಟ
ಅಮೆರಿಕಾ ಅಧಿಪತ್ಯದ ಕನಸು ನನಸಾಗದು

ಹರ್ಕಿಶನ್ ಸಿಂಗ್ ಸುರ್ಜಿತ್

ಜಾಗತಿಕ ಅಧಿಪತ್ಯದ ವಿಕೃತ ಕನಸನ್ನು ಕಾಣುತ್ತಿರುವ ಅಮೆರಿಕಾ ದಿನಬೆಳಗಾದರೆ ಭಯೋತ್ಪಾದನೆಯ ವಿರುದ್ಧ ಸಮರ ಸಾರಿರುವುದಾಗಿ ಹೇಳುತ್ತಿದೆ. ಈ 'ಪುಂಡ ಸೂಪರ್‌ಪವರ್' ಹಲವು ಆಟಗಳನ್ನು ಆಡಿಸುತ್ತಿದೆ. ಈ ಕನಸು ನನಸಾದೀತೆ? ತನ್ನ ತಪ್ಪುಗಳಿಂದ ಪಾಠ ಕಲಿತೀತೆ?

ನ್ಯೂಯಾರ್ಕ್ ಮತ್ತು ವಾಷಿಂಗ್‌ಟನ್‌ನ ಆಯ್ದ ಗುರಿಗಳ ಮೇಲೆ ಕೆಲವು ಭಯೋತ್ಪಾದಕರು ಸೆಪ್ಟೆಂಬರ್ 11 ರಂದು ನಡೆಸಿದ ಧಾಳಿಯಿಂದ ಜಗತ್ತು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಗಾಬರಿಗೊಳಗಾಗಿದೆ. ಈ ಧಾಳಿಯಿಂದ ತಮ್ಮ ಹತ್ತಿರದ ಬಂಧುಗಳನ್ನು ಸ್ನೇಹಿತರನ್ನು ಕಳೆದುಕೊಂಡವರಿಗೆ ಅಂತರ್‌ರಾಷ್ಟ್ರೀಯ ಸಮುದಾಯ ಹೃದಯಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸಿದೆ ಮತ್ತು ದಾಳಿಯನ್ನು ಅತ್ಯುಗ್ರವಾಗಿ ಖಂಡಿಸಿದೆ.

ಸಿನಿಕತನದ ಆಟ


ಆದರೆ ಈಗ ಹೊಸದೊಂದು ಆಟ ಪ್ರಾರಂಭವಾದ ಹಾಗೆ ಕಾಣುತ್ತದೆ. ವಿಶ್ವಶಾಂತಿ ಮತ್ತು ನಾಗರೀಕತೆಗೆ ದೊಡ್ಡ ಗಂಡಾಂತರಕಾರಿಯಾದ ಭಯೋತ್ಪಾದನೆ ಬಗ್ಗೆ ಯಾರೂ ಕರುಣೆಯನ್ನು ಹೊಂದಿಲ್ಲ. ಆದರೆ ಈಗ ಸ್ಪಷ್ಟವಾಗಿರುವಂತೆ, ಜಾರ್ಜ್ ಬುಷ್‌ರಿಂದ ಹಿಡಿದು ಅಮೆರಿಕಾದ ನಾಯಕರು ಪ್ರಯತ್ನಪಡುತ್ತಿರುವುದು ಭಯೋತ್ಪಾದನೆಯ ವಿರುದ್ಧ ಪ್ರಾಮಾಣಿಕ ಸಮರವಲ್ಲ, ಬದಲಿಗೆ ಇಡೀ ವಿಶ್ವ ತಮ್ಮ ನಿಲುವನ್ನು ಬೆಂಬಲಿಸುವಂತೆ ಮಾಡುವುದು.

ಇತ್ತೀಚಿನ ಬೆಳವಣಿಗೆಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ.

'ಲಾಕರ್‌ಬೀ ಬಾಂಬ್' ಕೇಸಿನ ಕರ್ತೃಗಳಾರೆಂದು ಖಚಿತವಾಗಿ ಗುರುತಿಸದೆ ಅಮೆರಿಕವು ಲಿಬ್ಯಾ ನಾಯಕ ಮಹಮ್ಮದ್ ಗಡಾಫಿಯ ಅರಮನೆ ಮೇಲೆ ವಾಯುದಾಳಿಯನ್ನು ನಡೆಸಿ ಇವರ ಸಣ್ಣ ಮಗಳನ್ನು ಸೇರಿದಂತೆ ಹಲವರನ್ನು ಕೊಂದಿತು. ತಾಂಜಾನಿಯ ಮತ್ತು ಕೀನ್ಯಾದಲ್ಲಿರುವ ಅಮೇರಿಕನ್ ರಾಯಭಾರಿ ಕಛೇರಿಗಳ ಮೇಲೆ ಬಾಂಬ್ ದಾಳಿ ನಡೆದ ನಂತರದಲ್ಲಿ ಸೂಡಾನ್‌ನಲ್ಲಿರುವ ಔಷಧ ತಯಾರಿಕ ಕಾರ್ಖಾನೆಯ ಮೇಲೆ ಅಮೆರಿಕ ಕ್ಷಿಪಣಿಗಳನ್ನು ಹಾರಿಸಿತು. ಇದಕ್ಕೆ ಕೊಟ್ಟ ಬೋಗಸ್ ಕಾರಣವೇನೆಂದರೆ ಅಲ್ಲಿ ಬಾಂಬ್ ಸಂಬಂಧಿ ರಾಸಾಯನಿಕಗಳನ್ನು ತಯಾರಿಸುತ್ತಿದ್ದಾರೆಂದು. ಇಂತಹುದೇ ಆಟವನ್ನು ಮತ್ತೆ ಆಡಲಾಗುತ್ತಿದೆ. ಅಮೆರಿಕಾವು, ಸೆಪ್ಟೆಂಬರ್ 11 ರ ಘಟನೆಗೆ ಕಾರಣರಾದವರನ್ನು ಮತ್ತು ಅಗತ್ಯ ಸಾಕ್ಷ್ಯಾಧಾರ ಸಂಗ್ರಹಿಸುವುದನ್ನು ಬಿಟ್ಟು, ಯುದ್ಧ ತಯಾರಿಯನ್ನು ಪ್ರಾರಂಭಿಸಿದೆ.

ಇದೇ ಸಂದರ್ಭದಲ್ಲಿ ವಿಶ್ವದ ಜನತೆಯ ವೇದಿಕೆಯಾದ ವಿಶ್ವಸಂಸ್ಥೆಯನ್ನು ಒಳಗೊಳಿಸುವ ಬಗ್ಗೆ ಅಮೇರಿಕಕ್ಕೆ ಆಸಕ್ತಿಯಿಲ್ಲ. ಯುಗೋಸ್ಲಾವಿಯಾದ ಮೇಲಿನ ನ್ಯಾಟೋ ದಾಳಿಯ ಸಂದರ್ಭದಲ್ಲೂ ಹೀಗೆ ಮಾಡಲಾಗಿತ್ತು. ಅಮೇರಿಕಾ ಹೇಳುತ್ತಿದೆ. ಇದೀಗ ಯುದ್ಧದಲ್ಲಿದೆ ಎಂದು. ಪ್ರಶ್ನೆಯಿರುವುದು ಯುದ್ಧ ಯಾರ ಮೇಲೆ? ಅಫಘಾನಿಸ್ತಾನದ ಮೇಲೋ ಅಥವಾ ಭಯೋತ್ಪಾದನೆಯ ಮೇಲೋ? ಈ ಎರಡೂ ಸಂದರ್ಭಗಳಲ್ಲಿ ಅಮೆರಿಕವು ವಿಶ್ವಸಂಸ್ಥೆಯನ್ನು ಕೇಳಬೇಕಾಗಿತ್ತು. ಆದರೆ ಅದು ಹಾಗೆ ಮಾಡಲಿಲ್ಲ. ಅಮೇರಿಕಾವು ಶಕ್ತಿಯ ಮೂಲಕ ಸಾಧಿಸ ಬೇಕೆಂದಿರುವುದನ್ನು ವಿಶ್ವಸಂಸ್ಥೆಯ ಮೂಲಕ ಮಾಡಲಾಗುವುದಿಲ್ಲ ಎಂಬ ಭಯ ಅದಕ್ಕಿದೆಯೇ?

ಇಂತಹ ಪರಿಸ್ಥಿತಿಯು ಇಡೀ ಮಾನವ ಜನಾಂಗಕ್ಕೆ ಅಪಾಯವೊಡ್ಡಿದೆ. ಇದು ದಶಕಗಳು ಹಿಂದೆ ಲೀಗ್ ಆಫ್ ನೇಷನ್ಸ್‌ನ್ನು ನಿಷ್ಪ್ರಯೋಜಕವಾಗಿ ಮಾಡಿದ ಬಗೆಯನ್ನು ಮರೆಯುವ ಹಾಗಿಲ್ಲ. ಹಿಟ್ಲರ್‌ನ ಜರ್ಮನಿಯನ್ನು ಮತ್ತು ಬ್ರಿಟನ್, ಫ್ರಾನ್ಸ್‌ಗಳನ್ನು ಸುಮ್ಮನಿರಿಸುವಲ್ಲಿ ಲೀಗ್ ಆಫ್ ನೇಷನ್ಸ್ ವಿಫಲವಾದದ್ದೂ ಎರಡನೇ ಮಹಾಯುದ್ಧಕ್ಕೆ ಕಾರಣಗಳಲ್ಲೊಂದು. ವಿಶ್ವದ ಜನತೆ



ಅಂತಹ ಚರಿತ್ರೆಯನ್ನು ಪುನರಾವರ್ತನೆಯಾಗಲು ಅವಕಾಶ ಕೊಡುವರೆ? ಅದೂ, ಮೇಲ್ಪಟ್ಟದ ಸಾಮೂಹಿಕ ನಾಶದ ಶಸ್ತ್ರಾಸ್ತ್ರಗಳನ್ನು ಹೊಂದಿರುವಾಗ?

ಅಮೇರಿಕಾದ ಪ್ರಭುತ್ವದ ಭಯೋತ್ಪಾದನೆ

ದಾಳಿಯ ವ್ಯಾಪ್ತಿಯನ್ನು ವಿಸ್ತರಿಸುವ ಯೋಜನೆಯಿಂದ ಅಮೆರಿಕದ ವಿಕೃತ ಆಟವು ಸ್ಪಷ್ಟವಾಗುತ್ತಿದೆ. ಸೆಪ್ಟೆಂಬರ್ 11 ರ ದಾಳಿಯಲ್ಲಿ ಇರಾಕ್‌ನ ಪಾತ್ರ ಇರಬಹುದೆಂಬ ರೀತಿಯಲ್ಲಿ ಪಾಶ್ಚಾತ್ಯ ಮಾಧ್ಯಮಗಳು ಕಥೆಗಳನ್ನು ನಿರ್ಮಿಸುತ್ತಿವೆ. ಕಳೆದ ಒಂದು ದಶಕದಲ್ಲಿ ಆಹಾರ ಮತ್ತು ಔಷಧಿಗಳ ಕೊರತೆಯಿಂದ 25 ಮಿಲಿಯನ್ ಇರಾಕಿಗಳ ಪೈಕಿ 1.5 ಮಿಲಿಯನ್ ಇರಾಕಿಗಳು-ಹೆಚ್ಚಿನವರು ಮಕ್ಕಳು ಮಯಸ್ಕಾದವರು ನಾಶವಾದದ್ದನ್ನು ಜಗತ್ತಿನ ಜನರು ಮರೆಯಬೇಕೆಂದು ಅಮೇರಿಕಾ ಬಯಸುತ್ತದೇನು? 1990ರ ತನಕ ಇರಾಕ್ ಜಗತ್ತಿನ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಮಕ್ಕಳ ಮರಣ ಪ್ರಮಾಣವನ್ನು ಹೊಂದಿತ್ತು. ಈಗ ಪ್ರತಿದಿನ ನೂರಾರು ಮಕ್ಕಳು ಅಲ್ಲಿ ಸಾಯುತ್ತಿದ್ದಾರೆ. ಆಗ ವಿಶ್ವ ಸಂಸ್ಥೆಯನ್ನು ಹೈಜಾಕ್ ಮಾಡಿ ವಿಧಿಸಿದ ಅಮೆರಿಕ-ಇಂಗ್ಲೆಂಡ್ ಪ್ರಯೋಜಿತ ಕ್ರಿಮಿನಲ್ ದಿಗ್ಬಂಧನದಿಂದ ಇಂತಹ ಸ್ಥಿತಿ ನಿರ್ಮಾಣವಾಗಿದ್ದಲ್ಲದೆ ಬೇರೆ ಯಾರು ಕಾರಣರು ಇದಕ್ಕೆ? ಇದು ಅಮೆರಿಕಾದ ಪ್ರಭುತ್ವ ಪ್ರಾಯೋಜಿತ ಭಯೋತ್ಪಾದನೆ ಅಲ್ಲದೆ ಮತ್ತೇನು?

ಹಲವಾರು ಸಂದರ್ಭಗಳಲ್ಲಿ ವಿಯೆಟ್ನಾಂನಿಂದ ಹಿಡಿದು ಯುಗೋಸ್ಲಾವಿಯಾ ವರೆಗೆ ವಿವಿಧ ದೇಶಗಳಲ್ಲಿ ನಡೆದಿರುವುದು ಇದೇ ಅಮೇರಿಕಾ ಪ್ರಾಯೋಜಿತ ಪ್ರಭುತ್ವ ಭಯೋತ್ಪಾದನೆ. 1983 ರಲ್ಲಿ ಒಂದು ಪುಟ್ಟ ರಾಷ್ಟ್ರ ಗ್ರೆನಡಾವನ್ನು ಆಕ್ರಮಿಸಿಕೊಳ್ಳಲು ಅಮೇರಿಕಾ ಹಿಂಜರಿಯಲಿಲ್ಲ. ಎಲ್ಲರಿಗೂ ತಿಳಿದಿರುವ ಸತ್ಯವೇನೆಂದರೆ ಜಗತ್ತಿನಾದ್ಯಂತ ಹಲವಾರು ರಾಜಕೀಯ ಮುಖಂಡರ ಕೊಲೆಗಳನ್ನು ಮಾಡಿಸುವಲ್ಲಿ ಅಮೇರಿಕಾ ನಿರ್ಣಾಯಕವಾಗಿದೆ. ಜೊತೆಗೆ ಅಂಗೋಲದ 'ಯುನಿಟಾ' (UNITA) ದಿಂದ ಹಿಡಿದು ಕೊಸೊವೊದ ಕೆಎಲ್ಓ(KLO) ದವರೆಗೆ ಎಲ್ಲ ಕಡೆ ಹಲವಾರು ಭಯೋತ್ಪಾದಕ ಗುಂಪುಗಳನ್ನು ಅಮೇರಿಕಾ ಬೆಳೆಸುತ್ತಿದೆ.

ಜಾಗತಿಕ ರಂಗ: ಏತಕ್ಕಾಗಿ?

ನೋಮ್ ಚಾಮ್‌ಸ್ಕಿ ಸರಿಯಾಗಿ ಹೇಳಿದಂತೆ ಇಂತಹ ಒಂದು 'ಪುಂಡ ಸೂಪರ್ ಶಕ್ತಿ' ಇಂದು ಭಯೋತ್ಪಾದನೆಯ ವಿರುದ್ಧ ಸ್ವಯಂ ತೀರ್ಮಾನ ಮಾಡಿಕೊಂಡಿದೆ. ಗಾಳಿಯನ್ನು ಬಿತ್ತಿದವರು, ಸುಂಟರಗಾಳಿಯನ್ನು ಪಡೆಯಬೇಕೆಂಬುದನ್ನು ಇದು ಮರೆತಿದೆಯೇ? ನಾವು ಹಿಂದೆ ಹೇಳಿದಂತೆ ಭಯೋತ್ಪಾದನೆಯನ್ನು ಎದುರಿಸುವ ಕುರಿತ ಮೊದಲು ತನ್ನ ಪ್ರಾಮಾಣಿಕತೆಯನ್ನು ಸಾಬೀತು ಪಡಿಸಬೇಕಾದದ್ದು ಅಮೇರಿಕಾವೆ.

ಹಿಂದಿನ ತಪ್ಪುಗಳಿಂದ ಪಾಠ ಕಲಿತ ಬಗ್ಗೆ ಯಾವುದೇ ಸೂಚನೆಯನ್ನು ಅಮೇರಿಕಾ ಇದುವರೆಗೂ ನೀಡಿಲ್ಲ. ಬುಷ್ ಭಯೋತ್ಪಾದನೆಯ ವಿರುದ್ಧ ಜಾಗತಿಕ ರಂಗಕ್ಕೆ ಕರೆ ನೀಡಿದ್ದಾರೆ ಮತ್ತು ಕಾಲಿನ್ ಪೊವೆಲ್ ಭಯೋತ್ಪಾದನೆ ವಿರೋಧಿ ಯುದ್ಧ ಒಸಾಮಾ ಬಿನ್ ಲಾಡೆನ್ ಅಥವಾ ತಾಲಿಬಾನ್‌ಗೆ ಸೀಮಿತವಾಗಿರುವುದಿಲ್ಲ. ಜೊತೆಗೆ ಅಮೆರಿಕದ ಯುದ್ಧವು ಭಯೋತ್ಪಾದನೆಯನ್ನು ಕಾಶ್ಮೀರದಿಂದಲೂ ತೊಡೆದು ಹಾಕಲಿದೆ ಎಂದು ಘೋಷಿಸ

ಪುಟ 8 ಕ್ಕೆ

‘ಸಿಮಿ’ ನಿಷೇಧ ; ಆದರೆ ಭಜರಂಗದಳ ಯಾಕಿಲ್ಲ?

ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಸಂಘಟನೆಯನ್ನು ನಿಷೇಧಿಸಿರುವ ಕೇಂದ್ರ ಸರ್ಕಾರದ ಕ್ರಮ ಪೂರ್ವಗ್ರಹಪೀಡಿತವೆಂದು ತೋರುತ್ತದೆ. ಹಿಂದೆ ಇಲ್ಲದೆ ಈಗಲೇ ಏಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಕುರಿತು ವಿವರಗಳನ್ನು ಕೂಡಲೇ ಬಹಿರಂಗಗೊಳಿಸುವುದು ಅತ್ಯಗತ್ಯ.

ಆದರೆ, ದೇಶದ ಸಮಗ್ರತೆಗೆ ಅಪಾಯಕಾರಿಯಾಗುವಂತಹ ಕೃತ್ಯಗಳಲ್ಲಿ ನೇರವಾಗಿ ತೊಡಗಿರುವ ಭಜರಂಗದಳ ದಂತಹ ಸಂಘಟನೆ ಕುರಿತು ಕೇಂದ್ರ ಸರ್ಕಾರ ವಹಿಸಿರುವ ಮೌನ ಖಂಡನಾರ್ಹ. ಅಲ್ಲದೆ ಇತ್ತೀಚಿಗೆ ಲಕ್ನೋದಲ್ಲಿ 'ಸಿಮಿ' ಕಾರ್ಯಕರ್ತರ ಮೇಲೆ ಗೋಲಿಬಾರ್ ನಡೆಸಿ ಮೂರು ಯುವಕರ ಸಾವಿಗೆ ಕಾರಣವಾಗಿರುವ ಘಟನೆಯೂ ಸಹ. ಉತ್ತರ ಪ್ರದೇಶದ ರಾಜನಾಥಸಿಂಗ್ ನೇತೃತ್ವದ ಬಿಜೆಪಿ ಸರ್ಕಾರವು ಒಂದು ಮತೀಯ ಭಾವನೆಯಿಂದ ಪ್ರೇರಿತವಾಗಿ ಆಡಳಿತ ನಡೆಸುತ್ತಾ ಅಲ್ಪ ಸಂಖ್ಯಾತ ಸಮುದಾಯದ ವಿರುದ್ಧ ವಾತಾವರಣವನ್ನು ನಿರ್ಮಿಸುತ್ತಿದೆ. ಕೇಂದ್ರ ಹಾಗೂ ಉತ್ತರ ಪ್ರದೇಶ ಸರ್ಕಾರಗಳ ಇಂತಹ ಪೂರ್ವಾಗ್ರಹ ಪೀಡಿತ ನೀತಿಗಳನ್ನು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ಎದುರಿಸಬೇಕು.

ಭಜರಂಗದಳ ನಿಷೇಧಕ್ಕೆ ಆಗ್ರಹ

ಕಾನೂನು ಬಾಹಿರ ತಡೆ ಕಾಯ್ದೆ (1967)ರ ಅನ್ವಯದಂತೆ ಕೇಂದ್ರ ಸರ್ಕಾರ 'ಸಿಮಿ' ಮೇಲೆ ಹೇರಿರುವ ಎರಡು ವರ್ಷಗಳ ನಿಷೇಧವನ್ನು ತೀವ್ರವಾಗಿ ವಿರೋಧಿಸಿರುವ ವಿವಿಧ ರಾಜಕೀಯ ಪಕ್ಷಗಳು ಇದೊಂದು "ಸಂಪೂರ್ಣ ರಾಜಕೀಯ ಪ್ರೇರಿತವಾದುದು, ದುರುದ್ದೇಶದ್ದು ಮಾತ್ರವಲ್ಲ ಉತ್ತರ ಪ್ರದೇಶದಲ್ಲಿ ಮುಂದೆ ನಡೆಯುವ ವಿಧಾನಸಭಾ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಅಲ್ಪ ಸಂಖ್ಯಾತ ಸಮುದಾಯವನ್ನು ಮತೀಯವಾದದ ಆಧಾರದಲ್ಲಿ ಬೇರ್ಪಡಿಸಲು ಹೂಡಿದ ವ್ಯವಸ್ಥಿತ ತಂತ್ರ ಇದಾಗಿದೆ. ಎಂದು ಆರೋಪಿಸಿವೆ. ಸಿಪಿಎಂ, ಸಿಪಿಐ ಅಲ್ಲದೆ ಸಮಾಜವಾದಿ ಪಕ್ಷ, ಕಾಂಗ್ರೆಸ್(ಐ) ಹಾಗೂ ಬಹುಜನ ಸಮಾಜ ಪಕ್ಷಗಳು ದೇಶದ ಭದ್ರತೆಗೆ ಅಪಾಯಕಾರಿಯಾದ ಕೃತ್ಯಗಳಲ್ಲಿ ನೇರವಾಗಿ ಭಾಗಿಯಾಗಿರುವ ಭಜರಂಗದಳದ ಮೇಲೆ ನಿಷೇಧ ಹೇರಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿವೆ.

'ಭಜರಂಗದಳ' ದೇಶಾದ್ಯಂತ ನಡೆಸಿರುವ ಮತ್ತು ನಡೆಸುತ್ತಿರುವ ಪೈಶಾಚಿಕ ಕೃತ್ಯಗಳ ಕುರಿತು ಕೇಂದ್ರ ಸರ್ಕಾರ ಕಣ್ಣು ಮುಚ್ಚಿಕೊಂಡಿದೆ ಎಂದು ಕಾಂಗ್ರೆಸ್ (ಐ) ವಕ್ತಾರ ಜೈಪಾಲರೆಡ್ಡಿ ಕೇಂದ್ರದ ಕ್ರಮವನ್ನು ಟೀಕಿಸಿದ್ದಾರೆ.

'ಭಜರಂಗದಳ' ಸಂಘಟನೆಯು ಸಹಸ್ರಾರು ಕಾರ್ಯಕರ್ತರಿಗೆ ದೇಶದ ಹಲವಡೆ ಸಶಸ್ತ್ರ ತರಬೇತಿಯನ್ನು ಬಹಿರಂಗವಾಗಿಯೇ ನಡೆಸುತ್ತಾ ದೇಶದ ಭದ್ರತೆಗೆ ಅಪಾಯವನ್ನೊಡ್ಡುತ್ತಿದ್ದರೂ ಅದರ ಮೇಲೆ ನಿಷೇಧ ಹೇರದೆ ಪಕ್ಷಪಾತಿಯಾಗಿ ವರ್ತಿಸಿರುವ ವಾಜಪೇಯಿ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದು ಕೊಂಡಿರುವ ಸಮಾಜವಾದಿ ಪಕ್ಷದ ಅಧ್ಯಕ್ಷ ಮುಲಾಯಂಸಿಂಗ್ ಯಾದವ್ 'ಸಿಮಿ' ನಿಷೇಧಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಕೂಡಲೇ ಸರ್ವಪಕ್ಷಗಳ ಸಭೆ ಕರೆಯಬೇಕೆಂದು ಆಗ್ರಹ ಪಡಿಸಿದ್ದಾರೆ.

ವಿರೋಧ ಪಕ್ಷಗಳನ್ನು ನಿರ್ಲಕ್ಷಿಸಲಾಗಿದೆ-ಫರೂಕ್ ಅಬ್ದುಲ್

'ಸಿಮಿ'ಯನ್ನು ನಿಷೇಧಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರ ವಿರೋಧ ಪಕ್ಷಗಳನ್ನು ನಿರ್ಲಕ್ಷಿಸಿ ಆತುರದ ತೀರ್ಮಾನ ಕೈಗೊಂಡಿದೆ ಎಂದು ಜಮ್ಮುಕಾಶ್ಮೀರ ಮುಖ್ಯಮಂತ್ರಿ ಹಾಗೂ ಎನ್.ಡಿ.ಎ. ಮಿತ್ರರಾಗಿರುವ ಫರೂಕ್ ಅಬ್ದುಲ್ ಟೀಕಿಸಿದ್ದಾರೆ. ಭಯೋತ್ಪಾದನೆಯ ವಿರುದ್ಧ ಹೋರಾಟ ನಡೆಸಬೇಕಾದ ಅಗತ್ಯವನ್ನು ಒತ್ತಿ ಹೇಳಿದ ಅಬ್ದುಲ್‌ರವರೂ ಆದೇ ವೇಳೆಗೆ ಕೇಂದ್ರ ಸರ್ಕಾರ ವಿರೋಧ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬಹುದಿತ್ತು ಎಂದು ರಾಜ್ಯ ವಿಧಾನ ಸಭೆಯಲ್ಲಿ ಎತ್ತಿದ ಪ್ರಶ್ನೆಗೆ ಉತ್ತರಿಸಿದ್ದಾರೆ.

ಅಮೇರಿಕಾದ ಮೇಲೆ ನಡೆದ ಬಾಂಬ್ ಧಾಳಿಯನ್ನು ನೆಪವನ್ನಾಗಿಟ್ಟುಕೊಂಡು ಮುಸ್ಲಿಂ ಸಮುದಾಯವನ್ನೇ ಅಪರಾಧಿಯನ್ನಾಗಿಸಲು



ನಡೆಸಿರುವ ಹುನ್ನಾರವಿದು ಎಂದು ವಿವಿಧ ಧಾರ್ಮಿಕ ಹಾಗೂ ಸಂಘಟನೆಗಳ ಮುಖಂಡರು ಖಂಡಿಸಿದ್ದಾರೆ. ಭಜರಂಗದಳದಂತಹ ಭಯೋತ್ಪಾದಕರನ್ನು ನಿಷೇಧಿಸದೇ ವಾಜಪೇಯಿ ಸರ್ಕಾರ ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಹಚ್ಚುತ್ತಿದೆ.

— ಕೆ.ಮಹಂತೇಶ್

ಭಯೋತ್ಪಾದನೆ ವಿರುದ್ಧ ಜಾಗತಿಕ ಸಮರದ ಹೆಸರಿನಲ್ಲಿ ಅಧಿಪತ್ಯ ಸಾಧಿಸಲು ಯುದ್ಧದಾಹಿ ಅಮೇರಿಕಾ ಮುಂದಾಗಿರುವಾಗಲೇ ಅದರ ಕರಿನೆರಳಿನ ಆಶ್ರಯ ಪಡೆಯಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹವಣಿಸಿದೆ. ಇಂದು ಜನತೆಯ ಮುಂದಿರುವುದು ಅದೊಂದೇ ಎಂಬಂತೆ, ಈ ಮೂಲಕವೇ ಕೋಮು ವಿಭಜನೆ ತರಲು ಯತ್ನಿಸುತ್ತಿದೆ. ನೈಜ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯುವ ತಂತ್ರವೂ ಹೌದು. ಅದಕ್ಕಾಗಿ ಅಪಾಯಕಾರಿ ನೀತಿಗಳನ್ನು ಅನುಸರಿಸುತ್ತಿದೆ. ದೇಶ-ಜನತೆ-ಉಳಿಯಬೇಕಾದರೆ ಈ ವಾಜಪೇಯಿ ಸರ್ಕಾರ ತನ್ನ ನೀತಿಗಳನ್ನು ಹಿಂತಿರುಗಿಸಬೇಕು ಇಲ್ಲವೇ ರಾಜೀನಾಮೆ ನೀಡಿ ತೊಲಗಲೇಬೇಕು. ಈ ಘೋಷಣೆ ಆಧಾರದಲ್ಲಿ ದೇಶ ಹಾಗೂ ರಾಜ್ಯದಾದ್ಯಂತ ನಡೆದ ವ್ಯಾಪಕ ಜನಾಂದೋಲನ - ಪಿಕೆಟಿಂಗ್ ಚಳುವಳಿಯ ಪ್ರತಿರೋಧದ ವರದಿಗಳು ಇಲ್ಲಿವೆ.

ತೊಲಗು ತೊಲಗ
ಜನತೆ ಸಾರಿದೆ ಸ

ಬಾಲಕೃಷ್ಣ ಶೆಟ್ಟಿ

ಜಗತ್ತಿನ ಎಲ್ಲೆಡೆ ಯುದ್ಧದ ಬಿಸಿಬಿಸಿ ಸುದ್ದಿಗಳು, ಭಾರತದ ಮೇಲೂ ಇದರ ಪರಿಣಾಮದ ಭಯ. ಯುದ್ಧ ಸನ್ನದ್ಧವಾಗಿರುವ ಅಮೆರಿಕ ಇಚ್ಛೆ ವ್ಯಕ್ತಪಡಿಸದೇ ಇದ್ದರೂ 'ಜಿ ಹುಜೂರ್' ವಾಜಪೇಯಿ ಸರ್ಕಾರ ಅಮೆರಿಕಾಕ್ಕೆ ಎಲ್ಲಾ ಸವಲತ್ತುಗಳನ್ನು ಒದಗಿಸಲು ಹಾತೊರೆಯುತ್ತಿರುವ ಸಂದರ್ಭ. ಇನ್ನೊಂದೆಡೆ ಜನರ ಮೇಲೆ ಅಸಹನೀಯ ಸಮಸ್ಯೆಗಳ ಹೊರೆ, ದೇಶಕ್ಕೆ ಘಾತುಕವಾಗುವ ನೀತಿಗಳು.

ಇಂತಹ ಸಂದಿಗ್ಧ ಸಂದರ್ಭದಲ್ಲೂ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಮಿಜೋರಾಂನಿಂದ ಮಹಾರಾಷ್ಟ್ರದ ವರೆಗೂ ಲಕ್ಷಾಂತರ ಜನ ವಾಜಪೇಯಿ ಸರಕಾರದ 4 ಪ್ರಮುಖ ನೀತಿಗಳ ವಿರುದ್ಧ ಸೆಪ್ಟೆಂಬರ್ 25, 26 ಮತ್ತು 27 ರಂದು ತೀವ್ರವಾಗಿ ಪಿಕೆಟಿಂಗ್, ರ್‍ಯಾಲಿ ನಡೆಸಿ ಪ್ರತಿಭಟಿಸಿದರು. ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆಯ ಮೇರೆಗೆ ಸಂಘಟಿಸಿದ ಈ ಚಳುವಳಿಯಲ್ಲಿ ಅಮೆರಿಕಾ ಪರ ವಿದೇಶಾಂಗ ನೀತಿಯನ್ನು ಹಿಂತೆಗೆದುಕೊಳ್ಳಲು ಒತ್ತಾಯ ಮಾಡಿದುದು ಬರೀ ಕಾಕತಾಳಿಯವಾಗಲಿಲ್ಲ. ಸರ್ವಪಕ್ಷಗಳ ಸಭೆಯಲ್ಲಿ ವಿರೋಧ ವ್ಯಕ್ತಪಡಿಸಿದರೂ ಅಮೆರಿಕಾಕ್ಕೆ ಸಹಕಾರ ನೀಡುವ ವಾಜಪೇಯಿ ಸರಕಾರದ ಇಚ್ಛೆ, ಸಿಪಿಐ(ಎಂ) ನ ನಿಲುವನ್ನು ಪುಷ್ಟೀಕರಿಸಿತು ಅಷ್ಟೆ.

ತೆಹಲ್ಕಾ, ಯುಟಿಐ, ಶೇರು ಹಗರಣಗಳ ಮೂಲಕ ಭ್ರಷ್ಟಾಚಾರದಲ್ಲಿ ದಾಖಲೆ ಸ್ಥಾಪಿಸಿದ ವಾಜಪೇಯಿ ಸರಕಾರ ತನ್ನ ಆರ್ಥಿಕ ನೀತಿಗಳ ಮೂಲಕ ರೈತ ಕಾರ್ಮಿಕರನ್ನು ಆತ್ಮಹತ್ಯೆಯ ದವಡೆಗೆ ನೂಕಿದೆ. ಕೋಮುವಾದದ ವಿಷ ಬೀಜವನ್ನು ಸಮಾಜದ ಎಲ್ಲಾ ಸ್ತರಗಳಲ್ಲಿ ಬಿತ್ತುತ್ತಿರುವ ಬಿಜೆಪಿ ಸರಕಾರ ಮುಗ್ಧ ಮಕ್ಕಳ ಶಿಕ್ಷಣದಲ್ಲೂ ಕೋಮುವಾದವನ್ನು ತುರುಕುತ್ತಿದೆ.

ಇದರ ವಿರುದ್ಧ ನಡೆದ ಪ್ರಚಾರ-ಪ್ರಕ್ಷೋಭೆಗೆ ದೇಶದೆಲ್ಲೆಡೆ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ಅಮೆರಿಕಾದಲ್ಲಿ ಭಯೋತ್ಪಾದಕ ಕೃತ್ಯ ಮತ್ತು ಬುಶ್ ಆಡಳಿತದ ಪ್ರತೀಕಾರದ ಯುದ್ಧ ಘೋಷಣೆ - ಜನರ ಮನಸ್ಸನ್ನು ಆಕಡೆ ಸೆಳೆದರೂ, ತಮ್ಮ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದ ಸಿಪಿಐ(ಎಂ) ಮುಖಂಡರನ್ನು, ಕಾರ್ಯಕರ್ತರನ್ನು ಜನ ಹೆಮ್ಮೆಯಿಂದ ಅಭಿನಂದಿಸಿದರು.

ಅಮೆರಿಕಾ ಪರ ವಿದೇಶ ನೀತಿ:

ಈ ಚಳುವಳಿಯ ಒಂದು ಪ್ರಮುಖ ಅಂಶ- ಅಮೆರಿಕಾ ಪರ ವಾಲುತ್ತಿರುವ ವಿದೇಶಾಂಗ ನೀತಿ. ಅಲಿಪ್ತ ಚಳುವಳಿಯನ್ನು ಹುಟ್ಟು ಹಾಕಿ, ಅದರಲ್ಲಿ ಪ್ರಮುಖ ಪಾತ್ರ ವಹಿಸಿದ ಭಾರತ, ಇಂದು ಖಾವಿ ಪಡೆಗಳ ನೇತೃತ್ವದಲ್ಲಿ 'ಸ್ವದೇಶಿ' ಹೆಸರಿನಲ್ಲಿ ಅಮೆರಿಕಾ ಪರ ವಾಲುತ್ತಿರುವುದು ಇದೀಗ ಸ್ಪಷ್ಟಗೊಂಡಿದೆ. ತಾಲಿಬಾನ್ ವಿರುದ್ಧ ಧಾಳಿ ನಡೆಸಲು ಪಾಕಿಸ್ತಾನದೊಂದಿಗೆ ಪೈಪೋಟಿ ನಡೆಸಿದ ವಾಜಪೇಯಿ ಸರಕಾರ 'ಮಿಲಿಟರಿ ನೆಲೆ ಒದಗಿಸಲು ನಮ್ಮನ್ನು ಕೇಳಿ' ಎಂದು ಒತ್ತಾಯ ಮಾಡಿತು. ಇದು ಸರಿಯಲ್ಲ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಹಿಂದೆ ಕೊಲ್ಲಿ ಯುದ್ಧವಾದಾಗ ವಿಪರೀತ ಬೆಲೆ ಏರಿಕೆ ಆದುದನ್ನು, ಮಾರುಕಟ್ಟೆ ಸ್ಥಗಿತ ಗೊಂಡುದನ್ನು ಜನರು ಭೀತಿಯಿಂದ ನೆನಪಿಸಿಕೊಳ್ಳುತ್ತಾರೆ. ಅಂತಹ ಯುದ್ಧಕ್ಕೆ ಭಾರತ ನೆಲೆ ನೀಡುವುದೇ ಎಂದು ಆತಂಕದಿಂದ ಪ್ರಶ್ನೆ ಮಾಡುತ್ತಿದ್ದಾರೆ.

ಕೋಮುವಾದೀಕರಣ

ಶಿಕ್ಷಣ, ಸಮಾಜ ಮತ್ತು ಅಧಿಕಾರದ ವಿವಿಧ ಸ್ತರಗಳಲ್ಲಿ ಕೋಮುವಾದೀಕರಣದ ವಿರುದ್ಧ ಪ್ರಚಾರ ನಡೆಸುತ್ತಿರುವಾಗಲೇ ಭಯೋತ್ಪಾದನೆಯನ್ನು ಸಹ ಕೋಮುವಾದದ ಕಣ್ಣಲ್ಲೇ ಕಾಣುವ ಖಾವಿ ಪಡೆಗಳಿಗೆ ಏನನ್ನಬೇಕು? ಮುಸ್ಲಿಂ ಅಲ್ಪಸಂಖ್ಯಾತರು ಮಾತ್ರ ಭಯೋತ್ಪಾದಕರು ಎಂಬಂತೆ ಚಿತ್ರಿಸಲು ಪ್ರಯತ್ನ ನಡೆದಿದೆ. ಭಯೋತ್ಪಾದಕರು, ಅವರನ್ನು ಪ್ರಚೋದಿಸುವವರು, ಪ್ರಾಯೋಜಿಸುವವರು

ದೇಶವ್ಯಾಪಿ ಲಕ್ಷಾಂತರ ಜನರ ಪಿಕೆಟಿಂಗ್

ಯಾರೇ ಇರಲಿ ಅವರನ್ನು ಖಡಾಖಂಡಿತವಾಗಿ ಖಂಡಿಸಬೇಕು ಆದರೆ ಕಾಮಾಲೆ ಕಣ್ಣಿನಿಂದ ಅಲ್ಲ.

ರೈತ-ಕಾರ್ಮಿಕರ ಆತ್ಮಹತ್ಯೆಗಳಿಗೆ ಕೊನೆ ಇಲ್ಲ:

ಐಎಂಎಫ್ ನಿರ್ದೇಶಿತ ಆರ್ಥಿಕ ನೀತಿಗಳ ವಿರುದ್ಧ ಪ್ರಚಾರ ನಡೆಸುತ್ತಿರುವಾಗಲೇ ರೈತರ ಆತ್ಮಹತ್ಯೆ ಹೆಚ್ಚಾಗುತ್ತಲಿದೆ. ಬರ ಪರಿಸ್ಥಿತಿ ರೈತರ ಬವಣೆಯನ್ನು ಇನ್ನಷ್ಟು ಸಂಕಷ್ಟಕ್ಕೆ ತಳ್ಳಿದೆ. ಅಲ್ಲಲ್ಲಿ ಮಳೆ ಬಾರದೆ ಹೋಗಿದ್ದಲ್ಲಿ ತೀವ್ರತೆ ಇನ್ನಷ್ಟು ಜಾಸ್ತಿಯಾಗುತ್ತಿತ್ತು.

ಆದರೆ ಸರಕಾರಗಳ ಪರಿಹಾರಕಾರ್ಯ ಕಾಗದದಲ್ಲಿ ಮಾತ್ರ ಉಳಿದಿದೆ. ಕೆಲವು ಹಳ್ಳಿಗಳಲ್ಲಿ 'ಕೂಲಿಗಾಗಿ ಕಾಳು' ಯೋಜನೆ ಆರಂಭಿಸಿದರೂ, ಹಣದ ಕೊರತೆಯಿಂದಾಗಿ ಕಾಮಗಾರಿಯನ್ನು ಅರ್ಧದಲ್ಲೇ ಕೈಬಿಟ್ಟ ವರದಿಗಳು ಬರುತ್ತಲಿವೆ. ಆಹಾರ ನಿಗಮದ ಗೋದಾಮುಗಳಲ್ಲಿ ಧಾನ್ಯಗಳು ಕೊಳೆಯುತ್ತಿದ್ದರೂ ಹಸಿದ ಹೊಟ್ಟೆಗೆ ಅದು ಆಹಾರವಾಗಲಿಲ್ಲ. ದೇಶದ ಸರ್ವೋಚ್ಛ ನ್ಯಾಯಾಲಯದ ಗಮನವನ್ನು ಇದು ಸೆಳೆದಿದೆ.

ಉತ್ಪಾದನೆ ಕುಂಠಿತ:

ಸುಧಾರಣೆಗಳ ಹಿನ್ನೆಲೆಯಲ್ಲಿ ಉತ್ಪಾದನೆಗಳ ಕುರಿತು ಉದ್ದುದ್ದ ಮಾತನಾಡಿದ ಕೇಂದ್ರ ಸರ್ಕಾರದ ವರದಿಯ ಪ್ರಕಾರವೇ ಎಲ್ಲಾ ಕ್ಷೇತ್ರಗಳಲ್ಲಿ ಉತ್ಪಾದನೆ ಕುಂಠಿತಗೊಂಡಿದೆ. 9ನೇ ಪಂಚವಾರ್ಷಿಕ ಯೋಜನೆಯ ಪ್ರಕಾರ ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆಯ ಗುರಿ ಶೇ 8 ರಷ್ಟು ಇದ್ದರೆ, ಅದು ಶೇ 4.7 ಕ್ಕೆ ಇಳಿದಿದೆ. 2001 ನೇ ಏಪ್ರಿಲ್ ನಿಂದ ಜೂನ್ ವರೆಗಿನ ಪ್ರಥಮ ತ್ರೈಮಾಸಿಕದಲ್ಲಿ ಅದು ಶೇ 4.4ಕ್ಕೆ ಇಳಿದಿದೆ. ಕೃಷಿ ಕ್ಷೇತ್ರದಲ್ಲಿ ಶೇ 4 ಗುರಿ ಹೊಂದಿದ್ದು ಅದು ಶೇ.4 ಕ್ಕೆ ಇಳಿದಿದೆ.

ಸೆಪ್ಟೆಂಬರ್ 1 ರಂದು ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ (NDC) ಯ ಸಭೆಯಲ್ಲಿ ಮಾತಾಡಿದ ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳ ಮುಖ್ಯಮಂತ್ರಿಗಳು, ಇಂದಿನ ವಿಷಮ ಪರಿಸ್ಥಿತಿಯಲ್ಲಿ ಪರ್ಯಾಯ ಧೋರಣೆಗಳ ಜಾರಿಗೆ ಒತ್ತಾಯಿಸಿದರು. ಸಮಗ್ರ ಭೂಸುಧಾರಣೆ, ರೇಶನ್ ವ್ಯವಸ್ಥೆಯನ್ನು ಬಲಪಡಿಸುವುದು, ಇತ್ಯಾದಿ ಅಂಶಗಳನ್ನು ಮುಂದಿಟ್ಟು ಮಾತನಾಡಿದರು. ಆದರೆ ಬಿಜೆಪಿ ಸರ್ಕಾರಕ್ಕೆ ಪರ್ಯಾಯ ಧೋರಣೆಗಳ ಬಗ್ಗೆ ಗಮನ ಇದೆಯೇ ಎಂಬುದು ಪ್ರಶ್ನಾರ್ಹ.

ಆದ್ದರಿಂದಲೇ ಸಿಪಿಐ(ಎಂ)ನ ಸೆಪ್ಟೆಂಬರ್ ಚಳುವಳಿ ಮಹತ್ವಪೂರಕವಾದುದು. ಗೊಂದಲ, ಸಂಕಷ್ಟಗಳು ಹಾಗೂ ನಿರಾಶೆಯಿಂದ ದಿಕ್ಕುಕಾಣದ ಜನರಿಗೆ ಸರಿಯಾದ ದಾರಿಯಾವುದು ಎಂದು ವಿವರಿಸಲು ಜಾಗೃತಿ ಮೂಡಿಸಲು ಸಾಧ್ಯವಾಗಿದೆ. ಆದರೆ ಮಾಡಬೇಕಾದುದು ಬಹಳಷ್ಟಿದೆ. ಈ ಚಳುವಳಿಯ ಪ್ರತಿಕ್ರಿಯೆಯಿಂದ ಹೆಮ್ಮೆ ಪಡಬಹುದಾದರೂ ಕರ್ನಾಟಕದ 5 ಕೋಟಿ ಜನರ ನಡುವೆ ತಲುಪಿದ್ದು ಕೆಲವು ಲಕ್ಷದಷ್ಟು ಜನರನ್ನು ಮಾತ್ರ. ಆದ್ದರಿಂದ ಚಳುವಳಿಯ ಸಂದೇಶವನ್ನು, ಸಮರಶೀಲತೆಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಬಿಜೆಪಿ ಸರಕಾರ ತನ್ನ ನೀತಿಗಳನ್ನು ಬದಲಿಸಿಕೊಳ್ಳುವ ಲಕ್ಷಣ ತೋರುತ್ತಿಲ್ಲ. ಆದ್ದರಿಂದ ಈ ಸರ್ಕಾರ ಅಧಿಕಾರದಿಂದ ಕೆಳಗಿಳಿಯುವವರೆಗೂ ಪ್ರಚಾರ, ಪ್ರಕ್ಷೋಭೆ ಮುಂದುವರಿಸಬೇಕಾಗಿದೆ.ಸಮರ ಶೀಲತೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆ.

ಜಿಲ್ಲೆಗಳಿಂದ ಬಂದ ವರದಿ

ದ.ಕ./ ಉಡುಪಿ: ಮಂಗಳೂರಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಬಿ.ಮಾಧವ ಅವರ ನೇತೃತ್ವದಲ್ಲಿ ಪ್ರಧಾನ ಅಂಚೆ ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಇದಕ್ಕೂ ಮೊದಲು ಜಿಲ್ಲಾ ಪಂಚಾಯತ್ ಕಛೇರಿಯ ಆವರಣದಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರನರನ್ನು ಉದ್ದೇಶಿಸಿ ಕೆ.ಆರ್.ಶ್ರೀಯಾನ್ ಮತ್ತು ಬಿ.ಮಾಧವ ಮಾತನಾಡಿದರು. ರಾಜ್ಯ ಸಮಿತಿ ಸದಸ್ಯರಾದ ರಾಮಚಂದ್ರ ಉಚ್ಚಿಲ್, ಅಬ್ರಹಾಂ ಕರ್ಕಡ, ಸಿ.ನಂಜುಂಡಪ್ಪ, ಜಿಲ್ಲಾ ಸಮಿತಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಕಾಂ. ಬಿ.ಲೋಕಯ್ಯ, ವಸಂತ ಆಚಾರಿ, ಪದ್ಮಾವತಿ, ರಮಣಿ ಮುಂತಾದವರು ನೇತೃತ್ವದ ವಹಿಸಿದ ಸಭೆಯಲ್ಲಿ ಡಿವೈಎಫ್ಐ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್, ಎಸ್ಎಫ್ಐ ಮುಖಂಡ ಅಶ್ರಫ್ ಮೊದಲಾದವರು ಭಾಗವಹಿಸಿದ್ದರು.

ಕುಂದಾಪುರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಹಂಚು, ಬೀಡಿ, ಗೇರು ಬೀಜ ಕಾರ್ಮಿಕರು, ಆಟೋ ಚಾಲಕರು, ವಿದ್ಯಾರ್ಥಿ ಯುವಜನರು ಭಾಗವಹಿಸಿದ್ದ ಪಿಕೆಟಿಂಗ್‌ನ ನೇತೃತ್ವದಲ್ಲಿ ರಾಜ್ಯ ಸಮಿತಿ ಸದಸ್ಯ ಕೆ.ಶಂಕರ್, ಪುರಸಭೆಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ಕೌನ್ಸಿಲರ್ ವಿ.ನರಸಿಂಹ, ಸಿಐಟಿಯು ಮುಖಂಡ ಸಿ.ನಾರಾಯಣ, ರೈತ ಸಂಘದ ಮುಖಂಡ ಯು.ದಾಸಭಂಡಾರಿ ಮೊದಲಾದವರು ವಹಿಸಿದ್ದರು. 27ನೇ ತಾರೀಖು ಬೆಳಿಗ್ಗೆ 11 ಗಂಟೆಗೆ ಕುಂದಾಪುರ ತಾಲ್ಲೂಕು ಕಛೇರಿಯ ಎದುರು ಪಿಕೆಟಿಂಗ್ ನಡೆಸಿದಾಗ ಬಂಧನಕ್ಕೊಳಗಾದರು.

ದ.ಕ. ಜಿಲ್ಲೆಯ ಸುಳ್ಯ, ಬೆಳ್ತಂಗಡಿ ಹಾಗೂ ಉಡುಪಿ ಜಿಲ್ಲಾ ಕೇಂದ್ರಗಳಲ್ಲೂ ಪಿಕೆಟಿಂಗ್ ನಡೆದಿದ್ದು ವಿವರವಾದ ವರದಿಗಳನ್ನು ನಿರೀಕ್ಷಿಸಲಾಗಿದೆ.

ಕೋಲಾರ: ಜಿಲ್ಲೆಯ ಎಂಟು ಕೇಂದ್ರಗಳಲ್ಲಿ ಪಿಕೆಟಿಂಗ್/ ಪ್ರತಿಭಟನೆಗಳು ನಡೆದಿದ್ದು ಬಾಗೇಪಲ್ಲಿಯಲ್ಲಿ 1270 ಮಂದಿ ಬಂಧನಕ್ಕೊಳಗಾದರು. ಮಾಜಿ ಶಾಸಕ ಹಾಗೂ ಕೋಲಾರ ಜಿಲ್ಲಾ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ನೇತೃತ್ವದಲ್ಲಿ ಅಂಚೆ ಕಛೇರಿ ಮುಂದೆ ನಡೆದ ಪ್ರತಿಭಟನೆಯಲ್ಲಿ 2000 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಶಿಡ್ಲಘಟ್ಟ, ಗುಡಿಬಂಡೆ, ಕೆಜಿಎಫ್, ಕೋಲಾರ, ಶ್ರೀನಿವಾಸಪುರ, ಗೌರಿಬಿದನೂರು, ಚಿಂತಾಮಣಿಗಳಲ್ಲೂ ಪ್ರತಿಭಟನೆ, ಪಿಕೆಟಿಂಗ್ ನಡೆದಿದ್ದು ಸಾವಿರಕ್ಕೂ



ಶಿರಗುಪ್ಪದಲ್ಲಿ ಪಿಕೆಟಿಂಗ್‌ನತ್ತ

ಹೆಚ್ಚು ಜನರು ಬಂಧನಕ್ಕೊಳಗಾದರು. ಕೆ.ಜಿ.ಎಫ್. ನಲ್ಲಿ ಮಾಜಿ ಶಾಸಕ ಟಿ.ಎಸ್.ಮಣಿ, ಶಿಡ್ಲಘಟ್ಟದಲ್ಲಿ ಕೆ.ಎಂ.ವೆಂಕಟೇಶ್, ಕೋಲಾರದಲ್ಲಿ ಗಾಂಧಿನಗರ ನಾರಾಯಣ ಸ್ವಾಮಿ ಮೊದಲಾದವರು ನೇತೃತ್ವ ವಹಿಸಿದ್ದರು.

ಗುಲ್ಬರ್ಗ: ಗುಲ್ಬರ್ಗಾದಲ್ಲಿ ಅಂಚೆ ಕಛೇರಿಯ ಮುಂದೆ 2 ಗಂಟೆಗೂ ಹೆಚ್ಚು ಸಮರಶೀಲ ಪಿಕೆಟಿಂಗ್ ನಡೆದ ವರದಿಯಾಗಿದ್ದು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮಾರುತಿ ಮಾನ್ಪಡೆ, ರಾಜ್ಯ ಸಮಿತಿ ಸದಸ್ಯೆ ಕೆ.ನೀಲಾ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಚಂದು ಜಾದವ್ ಮೊದಲಾದವರು ನೇತೃತ್ವ ವಹಿಸಿದ್ದು ಬ್ರಹ್ಮಾಪುರ ಸ್ಟೇಶನ್ನಿನ ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು.

ಶಹಾಪುರದಲ್ಲಿ ಚೆನ್ನಪ್ಪಾ ಆನೆಗುಂದಿ, ಮಲ್ಲಿಕಾರ್ಜುನ ಕರಿಗುಡ್ಡ, ಮಲ್ಲಿಕಾರ್ಜುನ ಬೇವಿನಳ್ಳಿ ಮೊದಲಾದವರ ನೇತೃತ್ವದಲ್ಲಿ 500 ಮಂದಿ ಸಿಪಿಐ(ಎಂ) ಕಾರ್ಯಕರ್ತರು 3 ಗಂಟೆಗಳ ಕಾಲ ಅಂಚೆ ಕಛೇರಿ ಪಿಕೆಟಿಂಗ್ ನಡೆಸಿ



ಮಂಗಳೂರಿನಲ್ಲಿ ಪ್ರಬಲ ಪ್ರತಿಭಟನೆ, 3000 ಕ್ಕೂ ಅಧಿಕ ಬಂಧನ

...ಂಧನಕ್ಕೊಳಗಾದರು.

...450 ಕ್ಕೂ ಹೆಚ್ಚು ಕಾರ್ಯಕರ್ತರು ...ಟೋಳಿಯಲ್ಲಿ ದಿನಾಂಕ 25 ರಂದು ತಾಲ್ಲೂಕು ಪಂಚಾಯತ್ ಕಛೇರಿ ಪಿಕೆಟಿಂಗ್ ನಡೆಸಿದರು. ...ಮಶೆಟ್ಟಿ ಎಂಪಳ್ಳಿ, ವೀರಶೆಟ್ಟಿ ಸಂರಾಣ, ಸೌಭಾಗ್ಯಮ್ಮ ಹಿರೇಮಠ ಮುಂತಾದವರು ನೇತೃತ್ವ ವಹಿಸಿದ ವರದಿ ಬಂದಿದೆ. ಇದಲ್ಲದೆ, ಆಳಂದ, ...ಗಿ, ವಹಾಗಾಂವ್, ಯಾದಗಿರಿ, ಸುರಪುರ ಮೊದಲಾದ ಕಡೆಗಳಲ್ಲಿ ಪಿಕೆಟಿಂಗ್ ನಡೆದಿದೆ. ಒಟ್ಟು 8 ಸ್ಥಳಗಳಲ್ಲಿ 1800 ಮಂದಿ ಬಂಧನಕ್ಕೊಳಗಾದರು.

ಬಂಧಿಸಿ ನಂತರ ಬಿಡುಗಡೆ ಮಾಡಿದರು.

ರಾಮದುರ್ಗ: ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕು ಕೇಂದ್ರದಲ್ಲಿ ಎರಡೂವರೆ ಸಾವಿರ ರೈತ, ಕಾರ್ಮಿಕರು ಪ್ರತಿಭಟನೆ ನಡೆಸಿದರು. ಇದಕ್ಕೂ ಮೊದಲು ಹಳ್ಳಿ, ಹಳ್ಳಿಗಳಲ್ಲಿ ಜಾಥಾ ನಡೆಸಿ, ಜನಜಾಗೃತಿ ಸಭೆಗಳನ್ನು ನಡೆಸಲಾಗಿತ್ತು. ನಾಲ್ಕು ಅಂಶಗಳನ್ನೊಳಗೊಂಡ 'ವಂಚಕರ ಆಡಳಿತ ದಿವಾಳಿಯತ್ತ ಭಾರತ' ಕಿರು ಹೊತ್ತಗೆಯನ್ನು ಒಂದು ಸಾವಿರ ಪ್ರತಿಗಳನ್ನು ಮಾರಾಟ ಮಾಡಲಾಗಿತ್ತು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ವಿ.ಪಿ.ಕುಲಕರ್ಣಿ

...ಯ್ಯ ವಾಜಪೇಯಿ ...ರ ಎಚ್ಚರ ಎಚ್ಚರ!

ಬೆಂಗಳೂರು: ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ಎಸ್.ಸೂರ್ಯನಾರಾಯಣ ರಾವ್ ಅವರ ನೇತೃತ್ವದಲ್ಲಿ ಮುನ್ನೂರಕ್ಕೂ ಹೆಚ್ಚು ಕಾರ್ಯಕರ್ತರು ಬಂಧನಕ್ಕೊಳಗಾದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಸಮಿತಿ ಸದಸ್ಯ ಕೆ.ಪ್ರಕಾಶ್ ಮೊದಲಾದವರು ಭಾಗವಹಿಸಿದ್ದ ಪ್ರತಿಭಟನೆಯಲ್ಲಿ ಮಂಡ್ಯ ಜಿಲ್ಲೆಯ

ಮಾತನಾಡಿ ರೈತರನ್ನು ದಿಕ್ಕಾಪಾಲು ಮಾಡಿದ ಬಿಜೆಪಿ ಸರ್ಕಾರ ಆದಷ್ಟು ಬೇಗನೆ ಅಧಿಕಾರದಿಂದ ತೊಲಗಬೇಕು ಎಂದು ಹೇಳಿದರು. ಕಾರ್ಮಿಕ ಮುಖಂಡ ಗೈಬುಜೈನ್ ಖಾನ್ ಮೊದಲಾದವರು ಮಾತನಾಡಿದರು.

ರಾಯಚೂರು/ ಕೊಪ್ಪಳ: ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ 700 ಕ್ಕೂ ಹೆಚ್ಚು ಕೃಷಿ ಕೂಲಿಕಾರರು, ಕಾರ್ಮಿಕರು ವಿದ್ಯಾರ್ಥಿ-ಯುವಜನಗಳು ಪ್ರತಿಭಟನೆ

...ರಾಜ್ಯದಲ್ಲಿ 15 ಸಾವಿರಕ್ಕೂ ಅಧಿಕ ಬಂಧನ

ನೂರಾರು ಕಾರ್ಯಕರ್ತರು ಕಾರ್ಯದರ್ಶಿ ಪುಟ್ಟಮಾದು ಅವರ ಜತೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆ ಆರಂಭ ಗೊಳ್ಳುವ ಮೊದಲು ಸಭೆಯನ್ನುದ್ದೇಶಿಸಿ ಸೂರ್ಯ ನಾರಾಯಣ ರಾವ್ ಅವರು ಮಾತನಾಡುತ್ತಾ ಅಮೆರಿಕಾದ ಮೇಲೆ ನಡೆದ ಭಯೋತ್ಪಾದಕ ಧಾಳಿಯನ್ನು ಖಂಡಿಸಿದರು. ಆದರೆ ಅಮೆರಿಕಾವು ಮೊದಲಿನಿಂದಲೂ



ಭಯೋತ್ಪಾದನೆಯನ್ನು ಪ್ರಚೋದಿಸುತ್ತಿತ್ತು. ಭಾರತದಲ್ಲಿನ ಉಗ್ರಗಾಮಿ ಚಟುವಟಿಕೆಗಳಿಗೆ ಅಮೆರಿಕ ಪರೋಕ್ಷ ಬೆಂಬಲ ನೀಡಿತ್ತು ಎಂಬುದನ್ನು ಮರೆಯಲಾಗದು, ಅಂತಹ ಅಮೆರಿಕ ಏಕಪಕ್ಷೀಯವಾಗಿ ತಾಲಿಬಾನ್ ಮೇಲೆ ಯುದ್ಧ ಸಾರುವುದನ್ನು ಖಂಡಿಸಿದರು. ಹಾಗೂ ಬಿಜೆಪಿ ಸರಕಾರ ಅಮೆರಿಕಾದ ಬಾಲಂಗೋಚಿಯಾಗುತ್ತಿರುವುದನ್ನು ಟೀಕಿಸಿದರು.

ಶಿಸ್ತುಬದ್ಧ ಪಕ್ಷ ಎಂದು ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರದ ಭ್ರಷ್ಟಾಚಾರ ತುತ್ತತುದಿಗೇರಿದೆ. ಇನ್ನೊಂದೆಡೆಯಲ್ಲಿ ಜನರ ಸಮಸ್ಯೆಗಳು ದಿನೇ ದಿನೇ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಐಕ್ಯತೆಯಿಂದ ಹೋರಾಟವನ್ನು ಮುಂದುವರಿಸಬೇಕೆಂದು ಕರೆ ನೀಡಿದರು.

ಮೈಸೂರು ಬ್ಯಾಂಕ್ ಚೌಕದಿಂದ ಕೆ.ಆರ್. ಸರ್ಕಲ್, ಮಹಾರಾಣಿ ಕಾಲೇಜು, ಬಸವೇಶ್ವರ ಸರ್ಕಲ್ ಮಾರ್ಗವಾಗಿ ರಾಜಭವನಕ್ಕೆ ತೆರಳುತ್ತಿದ್ದ ಮೆರವಣಿಗೆಯನ್ನು ದಾರಿಯಲ್ಲಿ ತಡೆದ ಪೋಲೀಸರು

ನಡೆಸಿ ಬಂಧನಕ್ಕೆ ಒಳಗಾದರು. ಜಿಲ್ಲಾ ಮುಖಂಡರಾದ ಮಂಟನಗೌಡ, ಬಾಳಪ್ಪ ಮೊದಲಾದವರು ನೇತೃತ್ವ ವಹಿಸಿದ್ದರು. ಸೆಪ್ಟೆಂಬರ್ 25 ರಂದು ರಾಯಚೂರಿನಲ್ಲಿ ಕರಿಯಪ್ಪ ಅಚ್ಚೊಳ್ಳಿ ಅವರ ನೇತೃತ್ವದಲ್ಲಿ 100 ಕ್ಕೂ ಹೆಚ್ಚು ಕಾರ್ಯಕರ್ತರು ರೈಲು ತಡೆ ನಡೆಸಿದರು. ಸಿಂಧನೂರು, ಕುಷ್ಟಗಿ, ಜಾಲಹಳ್ಳಿ ಮೊದಲಾದ ಕಡೆಗಳಲ್ಲಿ ಪ್ರತಿಭಟನೆ ನಡೆದಿದ್ದು ವಿವರವಾದ ವರದಿಗಳನ್ನು ನಿರೀಕ್ಷಿಸಲಾಗಿದೆ.

ತುಮಕೂರಿನಲ್ಲಿ ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್, ಬಿಲುಮೇಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆದು ಬಂಧನಕ್ಕೊಳಗಾದರು.

ಉತ್ತರ ಕನ್ನಡ: ಉತ್ತರ ಕನ್ನಡದ ದಾಂಡೇಲಿ, ಭಟ್ಕಳದಲ್ಲಿ ಸೆಪ್ಟೆಂಬರ್ 26 ರಂದು ಪಿಕೆಟಿಂಗ್ ನಡೆಸಿದ್ದಾರೆ. ಶಿರಸಿಯಲ್ಲಿ 25 ರಂದು ಹೊನ್ನಾವರ, ಕಾರವಾರದಲ್ಲಿ 27 ರಂದು ಪಿಕೆಟಿಂಗ್ ನಡೆದು ಬಂಧನಕ್ಕೆ ಒಳಗಾಗಿದ್ದಾರೆ.

ಬಳ್ಳಾರಿ: ಹೊಸಪೇಟೆಯಲ್ಲಿ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಿ.ವೆಂಕಟರಮಣ, ರಮೇಶ್, ಬಾಲು ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ದೂರವಾಣಿ ಕಛೇರಿ ಮುತ್ತಿಗೆ ಹಾಕಿ ಬಂಧನಕ್ಕೊಳಗಾದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಬಳ್ಳಾರಿ ನಗರದಲ್ಲಿ ರಾಜ್ಯ ಸಮಿತಿ ಸದಸ್ಯರಾದ ಪ್ರಸನ್ನ ಕುಮಾರ್, ಯು.ಬಸವರಾಜು , ಶಿವಶಂಕರ್ ಬಂಧನಕ್ಕೊಳಗಾಗಿದ್ದಾರೆ. ಮೊಳಕಾಲ್ಮೂರು, ಹಗರಿಬೊಮ್ಮನಹಳ್ಳಿ, ಕುರುಗೋಡು, ಶಿರಗುಪ್ಪದಲ್ಲಿ ಪ್ರತಿಭಟನೆ ನಡೆದಿದೆ. ಕುರುಗೋಡಿನಲ್ಲಿ ನಡೆದ ಪ್ರತಿಭಟನೆಯಲ್ಲಿ 200 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಅಂಚೆ ಕಛೇರಿ ಮುತ್ತಿಗೆ, ರಸ್ತೆ ತಡೆ ನಡೆಸಲಾಗಿತ್ತು. ಶಿರಗುಪ್ಪದಲ್ಲಿ 106 ಜನ ಬಂಧನಕ್ಕೆ ಒಳಗಾಗಿದ್ದು ಇ.ಆರ್.ಯಲ್ಲಪ್ಪ ನೇತೃತ್ವ ವಹಿಸಿದ್ದರು.

ಬಿಜಾಪುರ: ಬಿಜಾಪುರ ಜಿಲ್ಲೆಯ 3 ಕೇಂದ್ರಗಳಲ್ಲಿ ಪಿಕೆಟಿಂಗ್ ನಡೆದ ವರದಿಯಾಗಿದೆ. ಬಿಜಾಪುರದಲ್ಲಿ 300 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಪಿಕೆಟಿಂಗ್‌ನಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಪಕ್ಷದ ನಾಯಕರಾದ ಎಸ್.ಕೆ.ಉಪಾಧ್ಯಾಯರವರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ರಾಜ್ಯ ಸಮಿತಿ ಸದಸ್ಯ ಹಾಗೂ ಬಿಜಾಪುರ ಜಿಲ್ಲಾ ಕಾರ್ಯದರ್ಶಿ

ಪುಟ 8 ಕ್ಕೆ

ದೆಹಲಿಯಲ್ಲಿ ಕಾಂ. ಸುರ್ಜಿತ್ ಬಂಧನ - ಬಿಡುಗಡೆ



ದೆಹಲಿಯಲ್ಲಿ...

ದೆಹಲಿಯಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್, ಪೊಲಿಟ್‌ಬ್ಯೂರೋ ಸದಸ್ಯರಾದ ಎಸ್.ರಾಮಚಂದ್ರ ಪಿಳ್ಳೆ, ಎಂ.ಕೆ.ಪಂಧೆ, ಕೇಂದ್ರ ಸಮಿತಿ ಸದಸ್ಯರಾದ ಬೃಂದಾಕಾರಟ್ ಮತ್ತು ಸಾವಿರಾರು ಕಾರ್ಯಕರ್ತರು ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಯುದ್ಧಕೋರ ಅಮೆರಿಕಾಕ್ಕೆ ಧಿಕ್ಕಾರ, ಜನವಿರೋಧಿ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆ ಹಾಕಿದ ಸಮರಶೀಲ ಕಾರ್ಯಕರ್ತರು ಹೋರಾಟವನ್ನು ಮುಂದುವರಿಸುವುದಾಗಿ ಪಣತೊಟ್ಟರು.

ಬಂಧನಕ್ಕೆ ಮೊದಲು ಪಾರ್ಲಿಮೆಂಟ್ ರಸ್ತೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಸುರ್ಜಿತ್, ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಇದು ಹೋರಾಟದ ಪ್ರಾರಂಭ ಮಾತ್ರ, ಬಿಜೆಪಿ ಸರ್ಕಾರ ತನ್ನ ನೀತಿಗಳನ್ನು ಬದಲಿಸುವವರೆಗೂ ಹೋರಾಟಗಳನ್ನು ತೀವ್ರಗೊಳಿಸಬೇಕೆಂದು ಕರೆ ನೀಡಿದರು.

ಕೇರಳದಲ್ಲಿ 2 ಲಕ್ಷ ಕ್ಕೂ ಹೆಚ್ಚು ಬಂಧನ

ಕೇರಳದ 165 ಜಿಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ 2 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಬೆಂಬಲಿಗರು ಕೇಂದ್ರ ಸರಕಾರಿ ಕಛೇರಿಗಳ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾಗಿದ್ದಾರೆಂದು ಐಎನ್‌ಎಸ್ ವರದಿ ಮಾಡಿದೆ.

ಕೇರಳ ರಾಜ್ಯ ಕಾರ್ಯದರ್ಶಿ ಹಾಗೂ ಪೊಲಿಟ್ ಬ್ಯೂರೋ ಸದಸ್ಯರಾದ ಪಿನರಾಯ್ ವಿಜಯನ್ ಕೋಝಿಕೋಡ್‌ನ ಆದಾಯ ತೆರಿಗೆ ಕಛೇರಿ ಮುಂದುಗಡೆ ಪಿಕೆಟಿಂಗ್‌ನ್ನು ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೊಡಿಯೆರಿ ಬಾಲಕೃಷ್ಣ ತಿರುವನಂತಪುರದ ಹೋರಾಟದಲ್ಲಿ ಭಾಗವಹಿಸಿದ್ದ ಎಡ ಪ್ರಜಾ ಪ್ರಭುತ್ವ ರಂಗ (ಎಲ್‌ಡಿಎಫ್) ದ ಸಂಚಾಲಕ ಪಳೊರಿ ಮಹಮ್ಮದ್ ಕುಟ್ಟಿ ಮಲ್ಲಪುರಂ ಪ್ರಧಾನ ಅಂಚೆ ಕಛೇರಿಯ ಮುಂದೆ ನಡೆದ ಪಿಕೆಟಿಂಗ್‌ನಲ್ಲಿ ನೇತೃತ್ವ ವಹಿಸಿದ್ದರು.

ಪಂಜಾಬ್: ಪಂಜಾಬಿನ ವಿವಿಧ ಭಾಗಗಳಲ್ಲಿ ಪ್ರತಿಭಟನೆಗಳು ನಡೆದಿದ್ದು ಅಮೃತಸರದಲ್ಲಿ 3000 ಕ್ಕೂ ಹೆಚ್ಚು ಸಂಗಾತಿಗಳು ಅಂಚೆ ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿದರು. ಇದಕ್ಕೂ ಮೊದಲು ಶಹೀದ್ ಭಗತ್‌ಸಿಂಗ್ ಪಾರ್ಕ್‌ನಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಕಾರ್ಯದರ್ಶಿ ಕಾಂ. ಪಾಸ್ಲಾ ಮಾತನಾಡಿದರು. ಜಮ್ಮುಕಾಶ್ಮೀರ, ಪಂಜಾಬ ಮತ್ತು ದೇಶದ ಇತರ ಕಡೆಗಳಲ್ಲಿ ಭಯೋತ್ಪಾದಕ ಶಕ್ತಿಗಳನ್ನು ಪ್ರಚೋದಿಸುವುದನ್ನು ಅಮೆರಿಕಾ ಕೈಬಿಡಬೇಕೆಂದು ಒತ್ತಾಯಿಸಿದರು.

ಬಿಹಾರದ ರಾಜ್ಯ ಕೇಂದ್ರ ಪಾಟ್ನಾದಲ್ಲಿ ಪಾಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ರಾಜ್ಯ ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಉತ್ತರ ಪ್ರದೇಶದ ಹಲವಾರು ಕೇಂದ್ರಗಳಲ್ಲಿ ಪಿಕೆಟಿಂಗ್ ನಡೆದಿದ್ದು ಲಕ್ನೋದಲ್ಲಿ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಭಾಗವಹಿಸಿದ್ದರು.

ಬಂಗಾಳದಲ್ಲಿ ಭಾರೀ ರ‍್ಯಾಲಿ: ಪಶ್ಚಿಮ ಬಂಗಾಳದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ರ‍್ಯಾಲಿಗಳು ನಡೆದು ಕೇಂದ್ರದ ನೀತಿಯನ್ನು ಖಂಡಿಸಲಾಯ್ತು. ಭಯೋತ್ಪಾದನೆಯ ದಮನದ ಹೆಸರಿನಲ್ಲಿ ಅಮೆರಿಕಾ ಜಾಗತಿಕ ಯುದ್ಧ ನಡೆಸಲು ಹವಣಿಸುತ್ತಿದ್ದು ಮುಗ್ಧ ಜನರು ಬಲಿಯಾಗಲಿದ್ದಾರೆ ಎಂದು ಹೇಳಿದ ಕಾಮ್ರೇಡ್ ಜ್ಯೋತಿಬಸು "ಅಮೆರಿಕಾದ ಬೇಡಿಕೆಯೇ ಇಲ್ಲದೆ ಇದ್ದರೂ ಯುದ್ಧ ಸಹಕಾರ ನೀಡಲು ಮುಂದಾಗುತ್ತಿರುವ ಬಿಜೆಪಿಯ ನೀತಿಯನ್ನು ಒಕ್ಕೊರಲಿನಿಂದ ಖಂಡಿಸಬೇಕೆಂದು ಕರೆ ನೀಡಿದರು.

ಪಶ್ಚಿಮ ಬಂಗಾಳದ ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್, ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಮೊದಲಾದ ಮುಖಂಡರು ವಿವಿಧ ಸಭೆಗಳಲ್ಲಿ ಮಾತನಾಡಿದರು.

ತಮಿಳುನಾಡು/ಚೆನ್ನೈ ವರದಿ: 1000 ಮಹಿಳೆಯರೂ ಸೇರಿದಂತೆ 5000 ಕ್ಕೂ ಹೆಚ್ಚು ಪಕ್ಷದ ಕಾರ್ಯಕರ್ತರು ದಕ್ಷಿಣ ರೈಲ್ವೆ ಪ್ರಧಾನ ಕಛೇರಿಯ ಮುತ್ತಿಗೆ ಹಾಕಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ಸೌಂದರ್‌ರಾಜನ್, ಪಿ.ಸೆಲ್ವಸಿಂಗ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಎನ್.ಶಂಕರಯ್ಯ ಮಾತನಾಡಿದರು.

ತಮಿಳುನಾಡಿನ ಇತರ ಕೇಂದ್ರಗಳಲ್ಲಿ ಹಾಗೂ ಪಾಂಡಿಚೇರಿಯಲ್ಲೂ ಪ್ರತಿಭಟನೆ ನಡೆದಿದೆ.

ತ್ರಿಪುರ, ಆಂಧ್ರ, ಮಹಾರಾಷ್ಟ್ರ ಮತ್ತಿತರ ಭಾಗಗಳಲ್ಲಿ ತೀವ್ರ ಪ್ರತಿಭಟನೆಯ ವರದಿಗಳು ಬಂದಿವೆ.

ತಮಿಳುನಾಡು ಮತ್ತು ಕೇರಳಗಳಲ್ಲಿ ಪೋಲೀಸರು ಚಳುವಳಿಕಾರ ವಿದ್ಯಾರ್ಥಿಗಳ ಮೇಲೆ ತೀವ್ರ ಪೋಲೀಸ್ ಧಾಳಿ ನಡೆಸಿದ ವರದಿಗಳಿವೆ.

ಹೊಸಪೇಟೆ ಟೆಲಿಫೋನ್ ಕಛೇರಿ ಪಿಕೆಟಿಂಗ್



......ಅಮೆರಿಕಾ ಅಧಿಪತ್ಯದ ಕನಸು ನನಸಾಗದು

ಪುಟ 5 ರಿಂದ

ಮಾಡಿದ್ದಾರೆ.

ಅಮೇರಿಕಾ ಆಡಳಿತಕ್ಕೆ ಪಿಟೀಲು ನುಡಿಸದಿರಲು ಮತ್ತು ಉತ್ಸಾಹ ಇಲ್ಲದಿರಲು ವಾಜಪೇಯಿ, ಅಡ್ವಾಣಿ ಅಂಡ್ ಕಂಪನಿಗೆ ಯಾವುದೇ ಕಾರಣಗಳಿಲ್ಲ!

ಫಿಡೆಲ್ ಕ್ಯಾಸ್ಟ್ರೋ ಸರಿಯಾಗಿ ಗುರುತಿಸಿದ ಹಾಗೆ, ಅಮೆರಿಕಾವೇ ಒಂದು ಕಡೆ ಮತ್ತು ಭಯೋತ್ಪಾದನೆಯೇ ಮತ್ತೊಂದು ಕಡೆ ಎಂಬಂತೆ ಪೋಸು ಕೊಡುವುದಲ್ಲದೆ ಜಗತ್ತಿನಲ್ಲಿ ಬೇರೇನೂ ಅಲ್ಲ! ಸೆಪ್ಟೆಂಬರ್ 11 ರ ದಾಳಿಯನ್ನು ಭಯೋತ್ಪಾದನೆ ವಿರುದ್ಧ ಹೋರಾಡುವ ಹೆಸರಿನಲ್ಲಿ ಇಡೀ ಜಗತ್ತನ್ನು ಅಮೆರಿಕಾದ ಹಿಂದೆ ಸಾಲಾಗಿ ನಿಲ್ಲಿಸಲು ದೇವರೇ ಸೃಷ್ಟಿಸಿದ ಅವಕಾಶ ಎಂಬಂತೆ ಅಮೇರಿಕನ್ ಮುಖಂಡರು ಪರಿಗಣಿಸಿದ್ದಾರೆ. ಅವರಿಗೆ ಸಾಧ್ಯವಾದರೆ ಜಗತ್ತನ್ನು ತನ್ನ ಅಧಿಪತ್ಯಕ್ಕೆ ಒಳಪಡಿಸಲು ಈ ದಾಳಿಗಳನ್ನು ಬಳಸಿಕೊಳ್ಳಲಾಗುತ್ತಿದೆ.

ದೇಶ ದಾಳಿಗೊಳಗಾಗುವ ಮೊದಲೇ ಅಭಾಧಿತ ಅಧಿಪತ್ಯಕ್ಕಾಗಿನ ಅಮೇರಿಕಾದ ಆಸೆಯು ಸ್ಪಷ್ಟವಾಗಿತ್ತು. ಈ ದಾಳಿಗೆ ಐದು ದಿನಗಳ ಮೊದಲು, ಅಮೇರಿಕಾದ ಜನಪ್ರತಿನಿಧಿ ಸಭೆಯು 'ವಿಯೆಟ್ನಾಂ ಮಾನವ ಹಕ್ಕುಗಳ ಮಸೂದೆ'ಯನ್ನು ಅಂಗೀಕರಿಸಿ, ಒಪ್ಪಿಗೆ ಪಡೆಯಲು ಸೆನೆಟ್‌ಗೆ ಕಳುಹಿಸಿತ್ತು. ಮಾನವ ಹಕ್ಕುಗಳ ಹೆಸರಲ್ಲಿ ವಿಯೆಟ್ನಾಂ ಸಮಾಜವಾದಿ ಗಣರಾಜ್ಯದ ಆಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡಲು ಇದು



ಇರಾಕಿನಲ್ಲಿ ಇಂದಿಗೂ ಅಮೇರಿಕ ಹೇರಿದ ನಿರ್ಬಂಧಗಳಿಂದಾಗಿ ಸಾವಿರಾರು ಮಕ್ಕಳು ಔಷಧಿ-ಆಹಾರಗಳಿಲ್ಲದೆ ಸಾವನ್ನಪ್ಪುತ್ತಿವೆ.

ನೀಲಿ ನಕ್ಷೆಯಾಗಿದೆ. ವಿಯೆಟ್ನಾಂನಲ್ಲಿ ಅಮೇರಿಕನ್ ಪರ ಗುಂಪುಗಳನ್ನು ಬೆಳೆಸುವುದು ಮತ್ತು ಅದರ ವಿರುದ್ಧ ರೇಡಿಯೋ ಏಷ್ಯಾದ ಮೂಲಕ ಪ್ರಚಾರವನ್ನು ಹರಿಬಿಡುವುದು ಇದರಲ್ಲಿ ಸೇರಿದೆ. ಇದೇ ರೀತಿ ಈಗಾಗಲೇ ಇರಾಕ್‌ನಲ್ಲಿ ಇರಾಕಿ ನ್ಯಾಷನಲ್ ಕಾಂಗ್ರೆಸ್ ಮತ್ತು ಇತರ ದೇಶಗಳಲ್ಲಿ ಇಂತಹುದೇ ಸಂಘಟನೆಗಳನ್ನು ಅಮೇರಿಕಾ ಹುಟ್ಟುಹಾಕಿದೆ.

ಅಮೇರಿಕ ಮುಖಂಡತ್ವ ವಹಿಸಿರುವ ಕೊಳೆಯುತ್ತಿರುವ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆಯ ಆಯುಷ್ಯವನ್ನು ಮತ್ತಷ್ಟು ಮುಂದಕ್ಕೊಯ್ಯುವ ಪ್ರಯತ್ನದ ಭಾಗವಾಗಿ ಇವೆಲ್ಲಾ ನಡೆಯುತ್ತಿದೆ. ಅಮೇರಿಕಾವು ವ್ಯಾಪಾರ, ಆರ್ಥಿಕ ಮತ್ತು ಹಣಕಾಸು ರಂಗಗಳಲ್ಲಿ ಐಎಂಎಫ್, ವಿಶ್ವಬ್ಯಾಂಕ್, ಡಬ್ಲ್ಯುಟಿಒ ಸಾಧನಗಳ ಮೂಲಕ ಇದೇ ಉದ್ದೇಶವನ್ನು ಸಾಧಿಸಲು ಪ್ರಯತ್ನಿಸುತ್ತಿದೆ. ಭಯೋತ್ಪಾದನೆ ಎದುರಿಸುವ ಹೆಸರಲ್ಲಿ ನಾಯಕತ್ವದ ದೇಶಗಳ ಗುಂಪನ್ನು ಜೋಡಿಸುವ ಮೂಲಕ ಡಿಪ್ಲೊಮ್ಯಾಟಿಕ್ ಮತ್ತು ವಿದೇಶಾಂಗ ನೀತಿಯ ರಂಗಗಳಲ್ಲೂ ಇದನ್ನು ಸಾಧಿಸಲು ಅಮೇರಿಕ ಹೊರಟಿದೆ.

ಆದುದರಿಂದಾಗಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭಯೋತ್ಪಾದನೆ ಎಂಬ ವಿಚಾರವನ್ನು ಪೋಸ್ ಮಾಡುತ್ತಿರುವ ರೀತಿಯನ್ನು ಯಾರು ಅಮೆರಿಕಾದೊಂದಿಗೆ ಇಲ್ಲವೋ ಅವರು ಭಯೋತ್ಪಾದಕರೊಂದಿಗೆ ಇದ್ದಾರೆ ಎಂಬುದನ್ನು ಜಗತ್ತಿನ ಜನಾಭಿಪ್ರಾಯ ಒಪ್ಪಲು ಸಾಧ್ಯವಿಲ್ಲ. ಇಂತಹ ನಿಲುವು ಮೂಲಭೂತವಾಗಿ ತಪ್ಪು. ಭಯೋತ್ಪಾದನೆಯನ್ನು ಎದುರಿಸಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಏಕಧ್ರುವ ವಿಶ್ವವನ್ನು ತನ್ನ ಹಿಡಿತದಲ್ಲಿ ಸೃಷ್ಟಿಸಬೇಕೆಂಬ ಅಮೇರಿಕದ ನಿಲುವಿಗೆ ಯಾರೂ ಭಾಗಿಗಳಾಗಲು ಸಾಧ್ಯವಿಲ್ಲ. ಮಿಗಿಲಾಗಿ, ಬಂಡವಾಳಶಾಹಿ ಸಾಮ್ರಾಜ್ಯಶಾಹಿ ವ್ಯವಸ್ಥೆಯು ಯುದ್ಧಗಳನ್ನು ಸೃಷ್ಟಿಸುವ ಹಾಗೆಯೇ ಭಯೋತ್ಪಾದನೆಯನ್ನೂ ಸೃಷ್ಟಿಸುತ್ತದೆ ಎಂಬುದನ್ನು ಯಾರೂ ಮರೆಯುವ ಹಾಗಿಲ್ಲ.

ಹಾಗೆಯೇ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಭಯೋತ್ಪಾದನೆಯೊಂದಿಗೆ ಸಮೀಕರಿಸುವ ಅಮೇರಿಕದ ಯತ್ನಗಳನ್ನು ಯಾರೂ ಒಪ್ಪಲಾಗದು. ಪ್ರಜಾಪ್ರಭುತ್ವ ಮನಸ್ಸಿನ ಯಾವುದೇ ವ್ಯಕ್ತಿಯು ಭಯೋತ್ಪಾದನೆಯನ್ನು ಬೆಂಬಲಿಸಲಾಗದು. ಜಗತ್ತಿನ ಯಾವುದೇ ಮೂಲೆಯಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿನ ಹೋರಾಟಗಳನ್ನು ಬೆಂಬಲಿಸದೇ ಇರಲಾಗದು. ❍

ಹೊಸ ಜಯ ತರುವ ಶತಮಾನ

ಸೂಚಿತ ಜಾಗತಿಕ ರಂಗವನ್ನು ಮುಂದಿನ ದಿನಗಳಲ್ಲಿ ವಿಶ್ವಾದ್ಯಂತ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ವಿರುದ್ಧ ಬಳಸಲಾಗುತ್ತದೆಂಬುದರಲ್ಲಿ ಅನುಮಾನವಿಲ್ಲ. ಇಂದಿಗೂ ಜಗತ್ತಿನ ಜನಸಂಖ್ಯೆಯಲ್ಲಿ ನಾಲ್ಕರಲ್ಲಿ ಒಂದು ಭಾಗವಿರುವ ಚೀನಾ, ವಿಯೆಟ್ನಾಂ, ಕ್ಯೂಬಾ, ಉತ್ತರ ಕೊರಿಯಾ ಮತ್ತು ಲಾವೋಸ್ ಸಮಾಜವಾದಿ ದೇಶಗಳ ವಿರುದ್ಧ ಇದನ್ನು ಬಳಸಲಾಗುವುದು ಎಂಬುದರಲ್ಲೂ ಯಾವುದೇ ಅನುಮಾನವಿಲ್ಲ. ಸೋವಿಯತ್ ರಷ್ಯಾದ ವಿಘಟನೆಯ ನಂತರ ಮೇಲುಗೈಯನ್ನು ಹೊಂದಿರುವ ವಿಶ್ವ ಸಾಮ್ರಾಜ್ಯ ಶಾಹಿ ಪಾಳಯದ ನಾಯಕನಾಗಿರುವ ಅಮೇರಿಕವು ಇದರಿಂದ ಹೆಚ್ಚಿನ ಲಾಭವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ.

ಸೋವಿಯತ್ ಒಕ್ಕೂಟದ ವಿಘಟನೆಯು [illegible] ಜಗತ್ತಿನಾದ್ಯಂತ ಸಮಾಜವಾದಿ, ಪ್ರಜಾಪ್ರಭುತ್ವ ಮತ್ತು ಶಾಂತಿಯ ಶಕ್ತಿಗಳಿಗೆ ಹಿನ್ನಡೆಯುಂಟು ಮಾಡಿತು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಹೇಗಾದರೂ, ಕಳೆದ ಒಂದು ದಶಕವು ಈ ಶಕ್ತಿಗಳು ಸ್ವಲ್ಪ ದುರ್ಬಲಗೊಂಡಿರುವುದನ್ನು ಸಾಬಿತು ಪಡಿಸಿವೆ. ಆದರೆ ಅವು ಮುಕ್ತಾಯಗೊಂಡಿಲ್ಲ. ಪೂರ್ವ ಯುರೋಪಿನ ಸಮಾಜವಾದಿ ವ್ಯವಸ್ಥೆಯು ಕುಸಿಯುತ್ತಿದ್ದಾಗಲೂ ನಮೀಬಿಯಾ ಸ್ವಾತಂತ್ರ್ಯವನ್ನು ಪಡೆಯಿತು. ಮತ್ತು ದಕ್ಷಿಣ ಆಫ್ರಿಕಾದ ವರ್ಣಬೇಧ ಪ್ರಭುತ್ವವು ನೆಲ್ಸನ್ ಮಂಡೆಲಾ ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರನ್ನು ಜೈಲಿನಿಂದ ಬಿಡುಗಡೆ ಮಾಡಬೇಕಾಯ್ತು. ನಂತರದಲ್ಲಿ ನೇಪಾಳವು ಪ್ರಜಾಪ್ರಭುತ್ವದೆಡೆಗೆ ನುಗ್ಗಿತು. ದಕ್ಷಿಣ ಆಫ್ರಿಕಾ ಆಫ್ರಿಕಾ ಮತ್ತು ನೇಪಾಳದಲ್ಲಿ ಇತರರೊಂದಿಗೆ ಕಮ್ಯುನಿಸ್ಟರು ಮರೆಯಲಾಗದ ಪಾತ್ರವನ್ನು ನಿರ್ವಹಿಸಿದ್ದಾರೆ. ಕೆಲವು ವರ್ಷಗಳ ನಂತರ, ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧವನ್ನು ಕಿತ್ತುಹಾಕಲಾಯಿತು. ಮತ್ತು ನೆಲ್ಸನ್ ಮಂಡೇಲಾ ಅಧ್ಯಕ್ಷರಾಗಿ ಆಯ್ಕೆಯಾದರು.

ಮತ್ತೊಂದು ಕಡೆಯಲ್ಲಿ ಲಿಥುವೇನಿಯಾ, ಮಾಲ್ಡೊವಾ, ಮಂಗೋಲಿಯ ಮತ್ತು ಇತರ ದೇಶಗಳಲ್ಲಿ ಕಮ್ಯುನಿಸ್ಟರು ಪುನಃ ಅಧಿಕಾರಕ್ಕೆ ಬಂದರು. ಮತ್ತು ಕೆಲವು ದೇಶಗಳಲ್ಲಿ ಪುನರ್ ವರ್ಗೀಕರಣ ನಡೆದಿದೆ. ಇಂದು ಸಿಪಿಐರ್‌ಎಫ್ (ರಷ್ಯನ್ ಕಮ್ಯುನಿಸ್ಟ್ ಪಕ್ಷ) ರಷ್ಯನ್ ಒಕ್ಕೂಟದ ಅತಿದೊಡ್ಡ ಶಕ್ತಿಯಾಗಿದೆ.

ಇದೇ ಸಮಯದಲ್ಲಿ ಅಮೇರಿಕಾದ ಕೈಗೊಂಬೆ ಮತ್ತು 6 ಲಕ್ಷ ಇಂಡೋನೇಶಿಯನ್ ಜನರ ಕೊಲೆ ಪಾತಕನಾದ ಸುಹಾರ್ತೋ ಅಧಿಕಾರದಿಂದ ಇಳಿಯುವಂತೆ ಮಾಡಿದ್ದು ಮತ್ತು ಇಂಡೋನೇಶಿಯಾ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮರಳಿದ್ದು, ಪಾಪು ವಾನ್ಯೂಗಿನಿಯಾವು ಸ್ವಾತಂತ್ರ್ಯವನ್ನು ಹೊಂದಿತು.

ವಿಶ್ವ ಸಾಮ್ರಾಜ್ಯಶಾಹಿಯ ಪರವಾಗಿ ಬಲಾಬಲಗಳು ತಾತ್ಕಾಲಿಕವಾಗಿ ತಿರುಗಿದ್ದರೂ, ಅಮೆರಿಕವು ತನ್ನಿಷ್ಟದಂತೆ ನಡೆಸಲು ಆಗುವುದಿಲ್ಲ.

ಈಗಿರುವ ಸಮಾಜವಾದಿ ದೇಶಗಳು ಅನುಮಾನವಿಲ್ಲದ ಪ್ರಗತಿಯನ್ನು ಸಾಧಿಸುತ್ತಿವೆ. ಚೀನಾದ ಪ್ರಗತಿಯನ್ನು ಇಡೀ ವಿಶ್ವವು ಗಮನಿಸುತ್ತಿದೆ. ಯುದ್ಧದಿಂದ ನಷ್ಟವಾಗಿದ್ದ ವಿಯೆಟ್ನಾಂ ಇಂದು ಹೊರಬಂದಿದ್ದು ತೀವ್ರ ಪ್ರಗತಿಯನ್ನು ಸಾಧಿಸುತ್ತಿದೆ. ಉತ್ತರ ಕೊರಿಯಾ ಮತ್ತು ಲಾವೋಸ್ ಸ್ವಲ್ಪ ಮಟ್ಟಿಗಿನ ತಾತ್ಕಾಲಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಶೀಘ್ರದಲ್ಲೇ ಅವುಗಳನ್ನು ಪರಿಹರಿಸಿಕೊಳ್ಳುವ ಭರವಸೆ ಹೊಂದಿದೆ.

ಕ್ಯೂಬಾವು, ಕಳೆದು 4 ದಶಕಗಳಿಂದ ಅಮೇರಿಕಾವು ದಿಗ್ಬಂಧನವನ್ನು ಎದುರಿಸಿ ಯಶಸ್ವಿಯಾಗಿ ನಿಂತಿದ್ದು ಸದ್ಯ ಎಲ್ಲಾ ರಂಗಗಳಲ್ಲಿ ಸ್ವಲ್ಪ ಪ್ರಗತಿಯನ್ನು ತೋರಿಸುತ್ತಿದೆ. ಅಮೇರಿಕಾದ ಕರಾವಳಿಯಿಂದ ಕೇವಲ 90 ಮೈಲಿ ದೂರದಲ್ಲಿದ್ದರೂ ಮತ್ತು ಫ್ಲೋರಿಡಾದ ತೀರದಲ್ಲಿ ಗುರಿ ಮಾಡಿ ಅಮೇರಿಕಾದ ಕ್ಷಿಪಣಿಗಳು ನಿಂತಿದ್ದರೂ ಕ್ಯೂಬಾ ಧೃತಿಗೆಡಲಿಲ್ಲ. ಮಾತ್ರವಲ್ಲ, ಕ್ರಾಂತಿಕಾರಿ, ಮುಖ್ಯವಾಗಿ ಲ್ಯಾಟಿನ್ ಅಮೆರಿಕಾದ ದೇಶಗಳ ಕ್ರಾಂತಿಕಾರಿ ಶಕ್ತಿಗಳಿಗೆ ಸ್ಫೂರ್ತಿಯ ನೆಲೆ ಸೆಲೆಯಾಗಿ ಮುಂದುವರೆದಿದೆ. ಕೇವಲ ಇತ್ತೀಚೆಗಷ್ಟೇ ವೆನಿಜುವೆಲಾದಲ್ಲಿ ಒಂದು ಪ್ರಗತಿಪರ ಸರ್ಕಾರ ಸ್ಥಾಪನೆಯಾಗಿದೆ. ಚಿಲಿಯಲ್ಲಿ, ಸಾವಿರಾರು ಜನರನ್ನು ಮತ್ತು ಅಲೆಂಡೆಯನ್ನು ಕೊಂದ ಸರ್ವಾಧಿಕಾರಿ ಪಿನೋಷೆಯನ್ನು ಶಿಕ್ಷಿಸಬೇಕೆಂದು ಸರ್ಕಾರವನ್ನು ಮಣಿಸುವಲ್ಲಿ ಪ್ರಜಾಪ್ರಭುತ್ವೀ ಶಕ್ತಿಗಳು ಯಶಸ್ವಿಯಾಗಿವೆ, ಆದರೂ ಅವನನ್ನು ಹೇಗಾದರೂ ಉಳಿಸುವ ಪ್ರಯತ್ನಗಳು ನಡೆದಿವೆ.

ಹೀಗಾಗಿ ಇಲ್ಲಿ ಸ್ಪಷ್ಟವಾಗಿರುವುದೆಂದರೆ, ಸಿಯಾಟಲ್, ಪ್ರೇಗ್, ಕೋಪನ್‌ಹೇಗನ್, ಜಿನೋವಾಗಳಲ್ಲಿ ಕಂಡಂತೆ ಸಾಮ್ರಾಜ್ಯಶಾಹಿ [illegible] ಅಧಿಪತ್ಯಕ್ಕೆ ವಿರೋಧವು ಹೆಚ್ಚುತ್ತಿದೆ. ಸಾಮ್ರಾಜ್ಯಶಾಹಿ [illegible] ಜಾಗತೀಕರಣ ವಿರುದ್ಧ ಹಲವಾರು ದೇಶಗಳಲ್ಲಿ ದೊಡ್ಡ ಹೋರಾಟಗಳು ನಡೆಯುತ್ತಿದ್ದು ಶೀಘ್ರವಾಗಿ ಅಥವಾ ನಿಧಾನವಾಗಿಯಾದರೂ ಇವು ಹೆಚ್ಚು ಸಂಘಟಿತ ಮತ್ತು ಸಮನ್ವಯ ರೂಪವನ್ನು ಹೊಂದಲಿವೆ. ಇದೇ ರೀತಿ, ಭಯೋತ್ಪಾದನೆಯ ವಿರುದ್ಧ ಹೋರಾಟದ ಹೆಸರಲ್ಲಿ, ಅಮೆರಿಕದ ವಿಶ್ವ ಅಧಿಪತ್ಯದ ಪ್ರಯತ್ನವನ್ನು ವಿರೋಧಿಸಿ ಧ್ವನಿ ಹೆಚ್ಚುತ್ತಿದೆ. ಈ ಎರಡೂ ಆರ್ಥಿಕ ಮತ್ತು ರಾಜಕೀಯ, ತೊರೆಗಳು ಒಂದೆ ತೊರೆಯಾಗಿ ಕೂಡುವುದನ್ನು ಕೂಡಾ ನಿರಾಕರಿಸಲಾಗದು. ಇಂತಹ ಬೆಳವಣಿಗೆಗಳ ಆಧಾರದಲ್ಲಿ ಹೊಸ ಶತಮಾನವನ್ನು ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಶಕ್ತಿಗಳಿಗೆ ಹೊಸ ಜಯವನ್ನು ತರುವ ಶತಮಾನವೆಂದು ಪರಿಭಾವಿಸಲಾಗಿದೆ. ❍

ತೊಲಗಯ್ಯಾ ವಾಜಪೇಯಿ........

ಪುಟ 7 ರಿಂದ

ಭೀಮಸಿ ಕಲಾದಗಿ ಇನ್ನಿತರರು ಮುಖಂಡತ್ವ ವಹಿಸಿದ್ದರು.

ಬಾಗೇವಾಡಿ, ಇಂಡಿ ತಾಲ್ಲೂಕು ಕೇಂದ್ರಗಳಲ್ಲಿ ಪಿಕೆಟಿಂಗ್ ನಡೆದ ವರದಿಗಳು ಬಂದಿವೆ.

ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಮತ್ತು ನಿತ್ಯಾನಂದ ಸ್ವಾಮಿ **ಹಾನಗಲ್**‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಹಿಸಿದ್ದರು.

ಬೀದರ್: ಬೀದರ್ ನಗರದಲ್ಲಿ 500 ಕ್ಕೂ ಅಧಿಕ ಜನತೆಯ ಮೆರವಣಿಗೆ ನಡೆಯಿತು. ನಂತರದ ಟೆಲಿಗ್ರಾಫ್ ಕಛೇರಿಯ ಪಿಕೆಟಿಂಗ್‌ನಲ್ಲಿ 400 ಕ್ಕೂ ಹೆಚ್ಚು ಜನ ಬಂಧನಕ್ಕೊಳಗಾದರು. ನೇತೃತ್ವವನ್ನು ಸಂಗ್ರಾಮ್, ಮುಂತಾದವರು ವಹಿಸಿದ್ದರು.

ಮೈಸೂರಿನಲ್ಲಿ ಉಗ್ರ ಪ್ರತಿಭಟನೆ: ಮೈಸೂರು ನಗರದ ನೆಹರೂ ವೃತ್ತದಲ್ಲಿರುವ ಕೇಂದ್ರ ಅಂಚಿ ಕಛೇರಿಯ ಮುಂದೆ ಸೇರಿದ ಪಕ್ಷದ ಕಾರ್ಯಕರ್ತರು ಕಛೇರಿಗೆ ಮುತ್ತಿಗೆ ಹಾಕಿದಾಗ ಪೋಲೀಸರು ತಡೆದು ಬಂಧಿಸಿದರು. ಪ್ರತಿಭಟನೆಯ ತೀವ್ರತೆ ಎಷ್ಟು ಜೋರಾಗಿತ್ತೆಂದರೆ, ಬಂಧನದ ಅರ್ಧ ಗಂಟೆ ಬಳಿಕವೂ ಸಾರ್ವಜನಿಕರನ್ನು ಕಚೇರಿಯ ಒಳಗೆ ಬಿಟ್ಟಿರಲಿಲ್ಲ.

ಮೈಸೂರು ಜಿಲ್ಲಾ ಕಾರ್ಯದರ್ಶಿ, ಸ್ವಾತಂತ್ರ್ಯ ಹೋರಾಟಗಾರ ಎಂ.ಎನ್. ಉಗ್ರಪ್ಪ, ಮುಖಂಡರಾದ ಪ್ರಭಾಕರ್, ಸಿಐಟಿಯು ಮುಖಂಡರಾದ ಮೋಹನ್ ಕುಮಾರ್, ವಿಕ್ರಾಂತ್ ಟೈರ್ಸ್ ನೌಕರರ ಸಂಘದ ಅಧ್ಯಕ್ಷ ಜಯರಾಂ ಮುಂತಾದವರು ನೇತೃತ್ವ ವಹಿಸಿದ್ದರು.

ಕೊಡಗು: ರಾಜ್ಯದ ಪುಟ್ಟ ಜಿಲ್ಲೆ ಕೊಡಗಿನಲ್ಲಿ ಕರಿಕೆ ಎಂಬುದು ಚಿಕ್ಕ ಗ್ರಾಮ. ಆದರೆ ಅಲ್ಲಿನ ಸಿಪಿಐ(ಎಂ) ... ಪಕ್ಷದ ಕಾರ್ಯಕರ್ತರಿಗೆ, ಹಿತೈಷಿಗಳಿಗೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇಲ್ಲ. ಬಿಜೆಪಿ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಹೋರಾಟದ ಛಲದಿಂದ ಕರಿಗೆ ಗ್ರಾಮದ ಕೇಂದ್ರವಾದ ಎಳ್ಳುಕೊಚ್ಚಿ ಎಂಬಲ್ಲಿಂದ 3. ಕಿಮಿ ದೂರದ ಚಿತ್ತುಕಯ ಎಂಬಲ್ಲಿರುವ ಅಂಚಿ ಕಛೇರಿಗೆ ಮೆರವಣಿಗೆಯಲ್ಲಿ ತೆರಳಿ ಧರಣಿ ನಡೆಸಿದರು. ದಾರಿಯುದ್ದಕ್ಕೂ ಬಿಜೆಪಿ ಸರ್ಕಾರದ ವಿರುದ್ಧ, ಘೋಷಣೆ ಕೂಗಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರ ನೀತಿಯನ್ನು ಬದಲಿಸಬೇಕು ಇಲ್ಲವೇ ಅಧಿಕಾರದಿಂದ ತೊಲಗಬೇಕು ಎಂದು ಒತ್ತಾಯಿಸಿದರು.



ಇದಕ್ಕೂ ಮೊದಲು ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಕೊಚ್ಚಿ, ಹಳಮನೆ, ಬಾಳೆ ಎಳಪ್ಪ ಎಂಬ 3 ಒಳ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ ಇಂದಿನ ಪರಿಸ್ಥಿತಿಯಲ್ಲಿ ಹೋರಾಟದ ಅನಿವಾರ್ಯತೆ ಬಗ್ಗೆ ಮನದಟ್ಟು ಮಾಡಲಾಯ್ತು. ವಂಚಕರ ಆಡಳಿತ ದಿವಾಳಿಯತ್ತ ಭಾರತ ಎಂಬ ಪುಸ್ತಕವನ್ನು ಮಾರಾಟ ಮಾಡಲಾಯ್ತು.

ಪ್ರತಿಭಟನೆಯ ನೇತೃತ್ವವನ್ನು ಶಾಖಾ ಕಾರ್ಯದರ್ಶಿ ರಮಾನಾಥ ಬಿ.ಎಸ್. ಮತ್ತು ಪಿ.ಟಿ. ದಿನೇಶ್ ವಹಿಸಿದ್ದರು.

[illegible] 16 ಜಿಲ್ಲೆಗಳ [illegible] ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.



ಮೂಲಭೂತವಾದ ವಿಜ್ಞಾನಕ್ಕೆ ಸವಾಲಾಗಿದೆ

ಸತ್ಯಸದನ ಚಕ್ರವರ್ತಿ

ವರದಿ: ನಿರೂಪ್ ರಾವತ್

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಆಧುನಿಕ ವೈಜ್ಞಾನಿಕ ಶಿಕ್ಷಣ ನೀಡುವ ಬದಲು ಜೋತಿಷ್ಯ ಶಾಸ್ತ್ರವನ್ನು ಬೋಧನಾ ವಿಷಯನ್ನಾಗಿ ಮಾಡುವುದರೊಂದಿಗೆ ತನ್ನ ಮೂಲಭೂತವಾದವನ್ನು ವಿಜ್ಞಾನಕ್ಕೆ ಸೇರಿಸುವುದರ ಮೂಲಕ ಅಂಧಕಾರದ ಕೂಪಕ್ಕೆ ತಳ್ಳುತ್ತಿದೆ ಎಂದು ಪಶ್ಚಿಮ ಬಂಗಾಳದ ಉನ್ನತ ಶಿಕ್ಷಣ ಸಚಿವರಾದ ಕಾಂ. ಸತ್ಯ ಸದನ ಚಕ್ರವರ್ತಿ ಅಭಿಪ್ರಾಯಪಟ್ಟರು.

ಅವರು ಭಾನುವಾರ(ಸೆ. 30) ತುಮಕೂರಿನಲ್ಲಿ ವೀರಶೈವ ಕಲ್ಯಾಣ ಮಂಟಪದ ಕಾಂ. ಶೈಲೇಂದ್ರ ಶೈಲಿ ಸಭಾಂಗಮದ ಕಾಂ. ನಿತಿನ್ ಜೈನ್ ವೇದಿಕೆಯಲ್ಲಿ ಎಸ್‌ಎಫ್‌ಐನ 9ನೇ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅವರು ನಕ್ಷತ್ರ ಮತ್ತು ಗ್ರಹಗಳ ಚಲನೆಗಳು ಮನುಷ್ಯರ ಜೀವನದ ಮೇಲೆ ಪ್ರಭಾವ ಬೀರುತ್ತವೆ ಎಂದು ಹೇಳುವ ಜೋತಿಷ್ಯಶಾಸ್ತ್ರವನ್ನು ವಿದ್ಯಾರ್ಥಿಗಳ ಮೇಲೆ ಹೇರಲು ಕೇಂದ್ರ ಸರ್ಕಾರ ಹೊರಟಿರುವುದು ತುಂಬಾ ಅಪಾಯಕಾರಿ ಎಂದರು.

ಹಿಂದಿನಿಂದಲೂ ನಡೆದು ಬಂದಂತೆ ಕೋಪರ್ನಿಕಸ್, ಗೆಲಿಲಿಯೋ, ಐನ್‌ಸ್ಟೈನ್ ಮುಂತಾದ ವಿಜ್ಞಾನಿಗಳ ಸಂಶೋಧನೆಗಳನ್ನು ಮೂಲಭೂತ ಶಕ್ತಿಗಳು ಹೇಗೆ ಧಮನಿಸಿದವ್ರೋ ಅದೇ ರೀತಿ ಬಿಜೆಪಿ ಸರ್ಕಾರವೂ ಸಹಾ ವೈಜ್ಞಾನಿಕತೆಯನ್ನು ಧಮನ ಮಾಡಲು ಹೊರಟಿರುವುದು ಖಂಡನೀಯ ಎಂದು ಅಭಿಪ್ರಾಯ ಪಟ್ಟರು.

ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ನಿರ್ಮಾಣ ಮಾಡಬೇಕೆಂಬ ನಮ್ಮ ಸಂವಿಧಾನದ ಆಶಯವನ್ನು ತಿರುಚಿ ಇಡೀ ಶಿಕ್ಷಣ ವ್ಯವಸ್ಥೆಯನ್ನು ಕೋಮುವಾದೀಕರಣ / ಖಾಸಗೀಕರಣಗೊಳಿಸುತ್ತಿರುವ ಆಳುವ ಸರ್ಕಾರವನ್ನು ಖಂಡಿಸಿದ ಉನ್ನತ ಶಿಕ್ಷಣ ಸಚಿವರು ತಮ್ಮ ರಾಜ್ಯದಲ್ಲಿ ಕೈಗೊಂಡ ಜನಪರ ಶಿಕ್ಷಣ ನೀತಿಗಳನ್ನು ಉದಾಹರಿಸುವುದರೊಂದಿಗೆ ಶಿಕ್ಷಣ ವಿರೋಧಿ ನೀತಿಗೆ ಪರ್ಯಾಯ ವ್ಯವಸ್ಥೆ ಸೂಚಿಸಿದರು.

ಪ.ಬಂಗಾಳ ಸರ್ಕಾರವು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಮಾತೃಭಾಷೆಯಲ್ಲಿ ಉಚಿತ ಶಿಕ್ಷಣ ನೀಡುತ್ತಿದೆ. ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹಣ ಕಡಿತಗೊಳಿಸಿದರೂ ಸಹಾ ನಮ್ಮ ರಾಜ್ಯ ಸರ್ಕಾರವು ವರ್ಷದಿಂದ ವರ್ಷಕ್ಕೆ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹೆಚ್ಚು ಹಣವನ್ನು ತೊಡಗಿಸುತ್ತಿದೆ.

ಪ್ರಾಥಮಿಕ ಶಿಕ್ಷಣಕ್ಕೆ ಪಂಚಾಯತ್‌ಗಳಿಂದಲೂ ಹಣ ಕ್ರೋಢೀಕರಿಸುತ್ತಿದ್ದು ಉನ್ನತ ಶಿಕ್ಷಣಕ್ಕೆ ಶೇ 9.5 ರಷ್ಟನ್ನು ರಾಜ್ಯ ಸರ್ಕಾರವು ಭರಿಸುತ್ತಿದ್ದು ಶಿಕ್ಷಣ ಎಲ್ಲರಿಗೂ ದೊರೆಯುಂತಾಗಬೇಕು ಎಂಬುದು ನಮ್ಮ ಆಶಯ.

ವರ್ಷಕ್ಕೆ ಕುಟುಂಬದ ಆದಾಯ 6000 ಕ್ಕಿಂತ ಕಡಿಮೆ ಇದ್ದರೆ ಅಂತಹ ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕವನ್ನು ರಾಜ್ಯ ಸರ್ಕಾರ ಪಡೆಯುತ್ತಿಲ್ಲ. ಎಲ್ಲರಿಗೂ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿಯೇ ನೀಡುತ್ತಿದೆ. ತಾಂತ್ರಿಕ ಕಾಲೇಜುಗಳಲ್ಲಿ ವರ್ಷಕ್ಕೆ ಕೇವಲ 2000 ರೂ.ಗಳಿಗೆ ಶುಲ್ಕವನ್ನು ಬಹಳ ವರ್ಷಗಳ ನಂತರ ಹೆಚ್ಚಿಸಲಾಯಿತೆಂದು ತಿಳಿಸಿದರು. ಈ ನೀತಿ ಗಳಿಂದಾಗಿಯೇ ಪ.ಬಂಗಾಳ ದಲ್ಲಿ ಶೇ 80 ಸಾಕ್ಷರತೆ ಸಾಧಿಸಲು ಸಾಧ್ಯವಾಗಿದೆ ಎಂದರು.

ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವುದರ ಜೊತೆಗೆ ಪ.ಬಂಗಾಳ ಸರ್ಕಾರವು ಪ್ರಮುಖವಾಗಿ ಅನುಸರಿಸುತ್ತಿರುವ ಆರ್ಥಿಕ ನೀತಿ/ಭೂಸುಧಾರಣೆ / ಸಾಮಾನ್ಯರ ಕೈಗೆ ಅಧಿಕಾರ ಕೊಡುವ ನೀತಿಗಳೇ ಇಡೀ ಸಮಾಜವನ್ನು ಬದಲಾಯಿಸಲು ಇರುವ ಏಕೈಕ ಪರ್ಯಾಯ ಮಾರ್ಗ ಎಂದು ಅಭಿಪ್ರಾಯ ಪಟ್ಟರು.

ಪರ್ಯಾಯ ವ್ಯವಸ್ಥೆ ಸೂಚಿಸಿದ ಸಚಿವರು 'ಶಿಕ್ಷಣವು ಮೂಲಭೂತ ಹಕ್ಕಾಗಬೇಕು', ಖಾಸಗೀಕರಣದಂತಹ ನೀತಿಗಳಿಂದ ಶಿಕ್ಷಣ ಶ್ರೀಮಂತ ವರ್ಗದ ಸ್ವತ್ತಾಗುತ್ತಿದ್ದು ಇವುಗಳನ್ನು ಹಿಮ್ಮೆಟ್ಟಿಸಲು ಎಸ್‌ಎಫ್‌ಐ ಪ್ರಬಲ ಹೋರಾಟ ರೂಪಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಕಾಂ. ಕೆ.ಎನ್.ಉಮೇಶ್ ವಹಿಸಿದ್ದರು. ವೇದಿಕೆಯಲ್ಲಿ ಎಸ್‌ಎಫ್‌ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ಶಮಿಕ್ ಲಹರಿ, ಎಸ್‌ಎಫ್‌ಐ ಅ.ಭಾ. ಸಹ ಕಾರ್ಯದರ್ಶಿ ಕೆ.ಕೆ.ರಾಗೇಶ್, ಸ್ವಾಗತ ಸಮಿತಿ ಕಾರ್ಯಧ್ಯಕ್ಷ ಸಿ.ಯತಿರಾಜು ಉಪಸ್ಥಿತರಿದ್ದರು.



ಸತ್ಯಸದನ್ ಚಕ್ರವರ್ತಿ ಮತ್ತು ಕೆ.ಎನ್.ಉಮೇಶ್

ಉಗ್ರಗಾಮಿಗಳನ್ನು ಸೃಷ್ಟಿಸಿ- ಅವರ ವಿರುದ್ಧ ಹೋರಾಡುವ ನಾಟಕವಾಡುವ ಅಮೆರಿಕಾ

ಸೂರ್ಯನಾರಾಯಣ ರಾವ್

ಜಗತ್ತಿನಾದ್ಯಂತ ಉಗ್ರಗಾಮಿಗಳನ್ನು ಸೃಷ್ಟಿಸಿ, ಸಿಐಎ ಮೂಲಕ ಪಿತೂರಿ ನಡೆಸಿ, ಈಗ ಉಗ್ರಗಾಮಿಗಳನ್ನು ಮಟ್ಟಹಾಕುವ ನೆಪದಲ್ಲಿ ಮುಗ್ಧ ಜನತೆಯ ಮೇಲೆ ಅಮೆರಿಕಾ ಯುದ್ಧ ಹೂಡಿದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷ ಎಸ್.ಸೂರ್ಯನಾರಾಯಣ ರಾವ್ ಹೇಳಿದರು.

ಅವರಿಂದು ನಗರದಲ್ಲಿ ಆರಂಭವಾದ ಎಸ್‌ಎಫ್‌ಐ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ರಷ್ಯಾ ವಿರುದ್ಧ ಪಿತೂರಿ ನಡೆಸಲು ತಾಲಿಬಾನ್‌ಗೆ ಬೆಂಬಲ ನೀಡಿ, ಬಿನ್ ಲಾಡೆನ್‌ನನ್ನು ಹಣ ಕೊಟ್ಟು ಬೆಳೆಸಿದ್ದು ಅಮೆರಿಕಾ, ತನ್ನ ಸ್ವಾತಂತ್ರ್ಯ ರಕ್ಷಿಸಲು ಅಮೆರಿಕಾದ ನೀತಿ ಟೀಕಿಸುವ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋರನ್ನು ಕೊಲ್ಲಲು ಸಂಚು ನಡೆಸಿ ಇಡೀ ಲ್ಯಾಟಿನ್ ಅಮೆರಿಕಾದಲ್ಲಿ ಉಗ್ರಗಾಮಿಗಳನ್ನು ಬೆಳೆಸಿದ್ದು ಅಮೆರಿಕಾ ಎಂದು ವಿವರಿಸಿದರು. ಅಮೆರಿಕನ್ ಸಾಮ್ರಾಜ್ಯಶಾಹಿ ಜಗತ್ತಿನಲ್ಲಿ ತನ್ನ ದಬ್ಬಾಳಿಕೆಯನ್ನು ಮುಂದುವರೆಸಲು ಇತರರ ಮೇಲೆ ಯುದ್ಧ ನಡೆಸಿ, ಅಲೆಂಡೆಯವರನ್ನು ಕೊಂದು, ಭಾರತದ ವಿರುದ್ಧವೂ ಇಂತಹ ಪಿತೂರಿಗಳನ್ನು ನಡೆಸುತ್ತಿದೆ ಎಂದು ಅಮೆರಿಕಾದ ನೀತಿಗಳನ್ನು ಖಂಡಿಸಿದರು.

ಉಗ್ರಗಾಮಿತ್ವದ ವಿರುದ್ಧ ಯುದ್ಧ ಮಾಡಿ ಗೆಲ್ಲಲು ಸಾಧ್ಯವಿಲ್ಲ, ಎಲ್ಲರೂ ಮಾತುಕತೆಯ ಮೂಲಕ, ರಾಜಕೀಯ ಪರಿಹಾರ ಕಂಡುಹಿಡಿಯಬೇಕೆಂದು ಅವರು ಸಲಹೆ ಮಾಡಿದರು.

ಅನಾಗರೀಕತೆಗೆ ತಳ್ಳುವ ಶಿಕ್ಷಣ ನೀತಿ

ವಿದ್ಯಾರ್ಥಿಗಳ ಭಾರೀ ಬಹಿರಂಗ ಸಭೆಯಲ್ಲಿ ಶಮೀಕ್ ಲಹರಿ

ವಿಶ್ವವಿದ್ಯಾಲಯಗಳಲ್ಲಿ ಜೋತಿಷ್ಯ ಶಾಸ್ತ್ರವನ್ನು ಆರಂಭಿಸುವ ಮೂಲಕ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ದೇಶವನ್ನು ಅನಾಗರೀಕತೆಗೆ ತಳ್ಳುತ್ತಿದೆ -ಇದೊಂದು ಅನಾಗರಿಕ ಸರ್ಕಾರ ಎಂದು ಎಸ್‌ಎಫ್‌ಐನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ, ಲೋಕಸಭಾ ಸದಸ್ಯ ಶಮಿಕ್ ಲಹರಿ ಹೇಳಿದರು.

ಅವರು ಇಂದು ತುಮಕೂರು ನಗರದಲ್ಲಿ ಆರಂಭವಾದ ಎಸ್‌ಎಫ್‌ಐ ಕರ್ನಾಟಕದ ರಾಜ್ಯಸಮ್ಮೇಳನದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಇಂದು ವಿದ್ಯಾರ್ಥಿಗಳ ಮೇಲೆ ಪ್ರಮುಖವಾಗಿ ಯುವಜನತೆಯ ಮೇಲೆ ಕೇಂದ್ರೀಕರಿಸಲಾಗಿದೆ. ವರ್ಷಕ್ಕೆ ಒಂದು ಕೋಟಿ ಉದ್ಯೋಗ ಸೃಷ್ಟಿಸುತ್ತಿದೆ ಎಂದು ಅಧಿಕಾರಕ್ಕೆ ಬಂದ ಸರ್ಕಾರ ವರ್ಷಕ್ಕೆ ಕೋಟಿ ಉದ್ಯೋಗಳನ್ನು ನಾಶ ಮಾಡುತ್ತಿದೆ. ಇದೊಂದು ವಿಶ್ವಾಸದ್ರೋಹ ಸರ್ಕಾರ ಎಂದು ಜರೆದ್ದರು.

ಜನಸಮುದಾಯದ ಮೇಲೆ ದಾಳಿಗಳನ್ನು ಕೇಂದ್ರೀಕರಿಸಿ ಜನ ವಿರೋಧಿ ಆರ್ಥಿಕ ನೀತಿಗಳನ್ನು, ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲವಾಗುವ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರ ಇದರ ವಿರುದ್ಧ ಎಚ್ಚರಗೊಳ್ಳುತ್ತಿರುವ, ಹೋರಾಟಕ್ಕೆ ಅಣಿಯಾಗುತ್ತಿರುವ ಜನತೆಯನ್ನು ದಿಕ್ಕು ತಪ್ಪಿಸುವ ಕೋಮು ಮತ್ತು ಜಾತಿ ವಿಚಾರಗಳನ್ನು ಕೇಂದ್ರ ಸರ್ಕಾರ ಬಳಸುತ್ತಿದೆ ಎಂದು ಟೀಕಿಸಿದರು.

6.5 ಕೋಟಿ ಮಕ್ಕಳು ಶಾಲೆಯಿಂದ ಹೊರಗಿರುವ, ಕೋಟ್ಯಾಂತರ ಜನ ಅನಕ್ಷರಸ್ತರಾಗಿರುವ ದೇಶದಲ್ಲಿ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸಲಾಗುತ್ತಿದೆ. ಉನ್ನತ ಶಿಕ್ಷಣದಲ್ಲಿ ಸ್ವಾತಂತ್ರ್ಯಾನಂತರದ ಸರ್ಕಾರಗಳು, ರಾಧಾಕೃಷ್ಣನ್ ಮತ್ತು ಕೊಠಾರಿ ಆಯೋಗಗಳನ್ನು ನೇಮಿಸಿ ಸಲಹೆ ಕೇಳಿದ್ದರೆ, ಇದು ಬಿರ್ಲಾ, ಅಂಬಾನಿ ಸಮಿತಿ ರಚಿಸಿ ಸಲಹೆ ಕೇಳುತ್ತಿದೆ. ಇದು ಸರ್ಕಾರ ಸಾಗುತ್ತಿರುವ ದಾರಿಯನ್ನು ತೋರಿಸುತ್ತಿದೆ. ಇದು ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳುತ್ತಿರುವ ಜನವಿರೋಧಿ ಸರ್ಕಾರ ಎಂದರು.

ಈ ನೀತಿಗಳನ್ನು ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ವಿರೋಧಿಸುತ್ತಿದೆ. ಮೂಲದಲ್ಲಿ ಈ ಎಲ್ಲಾ ಜನವಿರೋಧಿ ನೀತಿಗಳ ಜನಕ ಕಾಂಗ್ರೆಸ್ ಆಗಿದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಇದೇ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ. ಅದಕ್ಕೆ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡಿರುವುದೇ ಅದಕ್ಕೆ ಸಾಕ್ಷಿ ಎನ್ನುತ್ತಾ ಈ ರೀತಿಯ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವುದರಿಂದಲೇ ಒಂದು ಕಾಲದಲ್ಲಿ ದೇಶದ ಅತಿದೊಡ್ಡ ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಈಗ ಮೂಲೆಗುಂಪಾಗಿದೆ. ಆದರೆ ಈಗ ಬಿಜೆಪಿಯ ಜನವಿರೋಧಿ ನೀತಿಗಳ ಲಾಭ ಪಡೆದು ಕೆಲವು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದೆ. ಆದರೆ ಮತ್ತದೇ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ.

ನೂತನ ಪದಾಧಿಕಾರಿಗಳು

ಅಧ್ಯಕ್ಷರು	ಕೆ.ಎಸ್.ಲಕ್ಷ್ಮಿ
ಉಪಾಧ್ಯಕ್ಷರು	ಕೃಷ್ಣೇಗೌಡ ಟಿ.ಎಲ್.
	ಲಕ್ಷ್ಮಿನಾರಾಯಣ ಹೆಚ್.ಪಿ.
	ಯುವರಾಜ ಕಂಬಾಳಿಮಠ್
	ಶರಣಬಸವ.ಡಿ
	ಮಮತಾ ಆರ್.ಶೆಟ್ಟಿ
	ಜಿ.ನಾಗರಾಜು
	ರಮೇಶ್ ಕೆ.
ಕಾರ್ಯದರ್ಶಿ:	ರಾಮಕೃಷ್ಣ.ಆರ್
ಸಹಕಾರ್ಯದರ್ಶಿಗಳು	ಗೀತಾ.ವಿ
	ಸಿ.ಎಫ್.ಈರೇಶ್
	ನವೀನ್ ಕುಮಾರ್
	ಮಲ್ಲಿಕಾರ್ಜುನ ಕರಿಗುಡ್ಡ
	ಜಿ.ಪಿ.ಕೊಳ್ಳಿ
	ಬಿ.ರಾಜಶೇಖರಮೂರ್ತಿ

ಸಿಐಟಿಯು ವಿನ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆಗೆ ಬಂದಿದ್ದ ಕಾಂ. ಪಂಧೆಯವರು ಚೀನಾದಲ್ಲಿ ಕಾರ್ಮಿಕ ಕಾನೂನುಗಳಿಗೆ ಸಂಬಂಧಿಸಿ ನೀಡಿದ ಸಂದರ್ಶನ ಈ ಹಿಂದೆ ಓದಿರುವಿರಿ. ಆರ್ಥಿಕ ಮತ್ತು ಅಭಿವೃದ್ಧಿಯ ಕೆಲವು ಪ್ರಶ್ನೆಗಳಿಗೆ ಅವರು ನೀಡಿದ ಅಭಿಪ್ರಾಯಗಳು - ಇಲ್ಲಿದೆ

ಪೇಟೆಂಟ್

ಸಾರ್ವಭೌಮತೆಗೆ ಅಪಾಯದ 'ವಾರಂಟ್'

ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ.ಪಂಧೆ ಸಂದರ್ಶನ

ಸಂದರ್ಶನ: ವಿಶ್ವಕುಂದಾಪುರ

ಬಾಸುಮತಿ ಅಕ್ಕಿ ಪೇಟೆಂಟ್ ವಿಚಾರದಲ್ಲಿ ಏನು ಹೇಳುತ್ತೀರಿ?

● ಅಮೆರಿಕದ ಕಂಪನಿಯೊಂದು ಬಾಸುಮತಿ ಅಕ್ಕಿಯ ಪೇಟೆಂಟ್ ಗಳಿಸಿದ ವಿಚಾರದಲ್ಲಿ ಗೊಂದಲ ಉಂಟಾಗಿ ಅದೀಗ ನಿವಾರಣೆಯಾಗಿದೆ. ಸದ್ಯಕ್ಕೆ ಅಷ್ಟರಮಟ್ಟಿಗೆ ನಾವು ಸಂತೋಷ ಪಡಬಹುದು; ಬಾಸುಮತಿ ಅಕ್ಕಿ ಬೆಳೆಯುವುದು ಭಾರತದಲ್ಲಿ; ಅಮೆರಿಕ ಅದರ ಪೇಟೆಂಟ್ ಪಡೆಯುವುದೆಂದರೆ ಅದು ಅಭಿವೃದ್ಧಿಶೀಲ ದೇಶಗಳ ಮೇಲೆ ಜಾಗತಿಕ ಬಂಡವಾಳಶಾಹಿ ನಡೆಸುವ ಆಕ್ರಮಣವೇ ಆಗಿದೆ.

ಬಾಸುಮತಿ ಪೇಟೆಂಟ್ ವಿಚಾರ ಸದ್ಯಕ್ಕೆ ಒಂದು ಹಂತದಲ್ಲಿದೆಯೇನೋ ಹೌದು. ಆದರೆ ಬೇವು, ಅರಿಶಿನ ಮೊದಲಾದ ಭಾರತೀಯ ಬೆಳೆಗಳು, ಉತ್ಪನ್ನಗಳ ಮೇಲೆ ಅಮೆರಿಕ ಆಗಲೇ ಪೇಟೆಂಟ್ ಪಡೆದಾಗಿದೆ. ಇದು ತೀರಾ ಅಪಾಯಕಾರಿ ಸನ್ನಿವೇಶ.

ಯಾವುದೇ ದೇಶದ ಮೇಲೆ ಬಾಂಬ್ ಹಾಕುವ ಹಕ್ಕು ಅಮೆರಿಕಕ್ಕೆ ಇದೆ! ಯಾವುದೇ ದೇಶದ ಮೇಲೆ ದಿಗ್ಬಂಧನ ವಿಧಿಸುವ ಹಕ್ಕು ಅದಕ್ಕಿದೆ!! ಪೇಟೆಂಟ್ ಪಡೆಯುವ ಅದರ ಕ್ರಮಗಳು ಭಾರತದ ಆರ್ಥಿಕತೆ ಮತ್ತು ಸಾರ್ವಭೌಮತ್ವಕ್ಕೆ ಅಪಾಯಕಾರಿ.

ಇಂಥ ಸನ್ನಿವೇಶ ಉಂಟಾಗಲು ಕಾರಣವೇನು?

● ಸಾವಿರಾರು, ಲಕ್ಷಾಂತರ ರೈತರು ಬೆಳೆಯುವ ಬೆಳೆಗಳಿಗೆ ಭಾರತ ಪೇಟೆಂಟ್ ಹೊಂದಿಲ್ಲ. ಬೇವು, ಅರಿಶಿನ ಮೊದಲಾದವು ನಮ್ಮ ಕೈ ಜಾರಲು ಅದೇ ಕಾರಣ.

ಬೌದ್ಧಿಕ ಆಸ್ತಿ ಹಕ್ಕಿಗೆ ಸಂಬಂಧಿಸಿದ ಪೇಟೆಂಟ್ ಕಾನೂನನ್ನು ತಿದ್ದುಪಡಿ ಮಾಡಲು ಭಾರತ ಸರಕಾರ ಒಪ್ಪಿಕೊಂಡು ಆ ನಿಟ್ಟಿನಲ್ಲಿ ಮುಂದುವರಿದಿದ್ದರಿಂದ ಭಾರಿ ಅನಾಹುತ ಆಗಿದೆ. ಕಾಂಗ್ರೆಸ್ ಸರಕಾರ ಈ ತಿದ್ದುಪಡಿ ತರಲು ಹೊರಟಾಗ ಪ್ರತಿಪಕ್ಷ ನಾಯಕರಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಅದನ್ನು ವಿರೋಧಿಸಿದ್ದರು. ಇದು 'ರಾಷ್ಟ್ರವಿರೋಧಿ ಕ್ರಮ' ಎಂದು ಜರೆದಿದ್ದರು. ಆದರೆ ಅವರು ಪ್ರಧಾನಿಯಾದ ನಂತರ ಈ ತಿದ್ದುಪಡಿ ಮಸೂದೆ ಅಂಗೀಕಾರವಾಯಿತು.

ಈ ಸಂಬಂಧದಲ್ಲಿ ತಪ್ಪು ಯಾರದು ಯಾರಿದಕ್ಕೆ ಹೊಣೆಗಾರರು?

● ಕಾಂಗ್ರೆಸ್ ಮತ್ತು ಬಿಜೆಪಿ ಇವೆರಡೂ ಸಮಾನ ಹೊಣೆಗಾರರು. ಬೌದ್ಧಿಕ ಆಸ್ತಿ ಹಕ್ಕು ಕಾನೂನನ್ನು ತಿದ್ದುಪಡಿ ಮಾಡಲು ಮೊರಕ್ಕಾಸ್ ಮಾತುಕತೆಯಲ್ಲಿ ಅಂದಿನ ಕೇಂದ್ರ ಸಚಿವ ಪ್ರಣವ್ ಮುಖರ್ಜಿ ಒಪ್ಪಿಕೊಂಡಿದ್ದು ದೊಡ್ಡ ಪ್ರಮಾದ. ಪ್ರತಿಪಕ್ಷಗಳನ್ನಾಗಲೀ, ಸಂಸತ್ತನ್ನಾಗಲೀ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕಾಂಗ್ರೆಸ್ ಪಕ್ಷ ಏಕಾಏಕಿ ಈ ಕ್ರಮ ತೆಗೆದುಕೊಂಡಿತು. ಆಮೇಲೆ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಈ ಅಪಾಯವನ್ನು ತಡೆಗಟ್ಟಬಹುದಿತ್ತು. ಆದರೆ ಅದು ಹಾಗೆ ಮಾಡಲಿಲ್ಲ. ಸ್ವದೇಶಿ ಮಂತ್ರ ಜಪಿಸುವ ಅದು ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಿತು. ಈ ರೀತಿಯಾಗಿ ಈ ಎರಡೂ ಪಕ್ಷಗಳೂ ದೇಶಕ್ಕೆ ಅಪಾರ ಹಾನಿಯುಂಟಾಗುವಂತೆ ಮಾಡಿವೆ.

ದೇಶದಲ್ಲಿ ಖಾಸಗೀಕರಣದ ಭರಾಟೆ ಸಾಗಿದೆ ನಿಜಕ್ಕೂ ಇದು ಅಗತ್ಯವೇ?

● ಖಂಡಿತಕ್ಕೂ ಅಗತ್ಯವಿಲ್ಲ. ದೇಶದ ಜನತೆಯ ಕಲ್ಯಾಣದ ಬಗ್ಗೆ ಕಾಳಜಿಯಿಲ್ಲದ ಸರಕಾರಗಳಷ್ಟೇ ಈ ರೀತಿ ಮಾಡಬಲ್ಲವು. ದೇಶದ ಆರ್ಥಿಕ ಸ್ವಾವಲಂಬನೆಯ ಆಧಾರಸ್ತಂಭಗಳಂತಿರುವ ಸಾರ್ವಜನಿಕ ಉದ್ದಿಮೆಗಳನ್ನು ದೇಶೀಯ ಹಾಗೂ ವಿದೇಶಿ ದೊಡ್ಡ ಬಂಡವಾಳಗಾರರಿಗೆ ಮಾರಾಟ ಮಾಡುವುದು ದೊಡ್ಡ ದ್ರೋಹ. ವಾಸ್ತವವಾಗಿ ರಾಷ್ಟ್ರದ ಕೈಗಾರಿಕೆ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸುವ ಮೂಲ ಸೌಕರ್ಯದ ಉದ್ದಿಮೆ, ಲಾಭದಲ್ಲಿ ನಡೆಯುತ್ತಿರುವ ಕೈಗಾರಿಕೆಗಳನ್ನು ಸರಕಾರ ಮಾರುತ್ತಿರುವುದು ವಿಷಾದಕರ ಸಂಗತಿ. ಇದಕ್ಕೆ ದೊಡ್ಡ ಉದಾಹರಣೆ ಬಾಲ್ಕೊ (ಭಾರತ ಅಲ್ಯುಮಿನಿಯಂ ಕಂಪನಿ). ಅದರ ಷೇರುಗಳನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಲಾಯಿತು. ಇದು ಅನಗತ್ಯ ಆತುರದ ಕ್ರಮವಾಗಿತ್ತು.

ಈಗ ಏರ್‌ಇಂಡಿಯಾ ಖಾಸಗೀಕರಣದ ಪ್ರಯತ್ನ ನಡೆದಿದೆ. ವಿಳಂಬವಾಗದ ಶೀಘ್ರಗತಿಯಲ್ಲಿ ಈ ಕೆಲಸ ಆಗಬೇಕೆಂದು ಪ್ರಧಾನಿ ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯ

● ಏರ್‌ಇಂಡಿಯಾ ಲಾಭದಲ್ಲಿ ನಡೆಯುತ್ತಿರುವ ಸಂಸ್ಥೆ. ಅದರ ಷೇರುಗಳನ್ನೇ ಮಾರಲು ಹೊರಟಿದ್ದಾರೆಂದರೆ ಅಂತರ್ರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್), ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳು, ಒತ್ತಡಗಳು ಹೇಗೆ ಕೆಲಸ ಮಾಡುತ್ತಿವೆ ಎನ್ನುವುದು ಗೊತ್ತಾಗುತ್ತದೆ. ಇಲ್ಲಿ ಗಮನಿಸಬೇಕಾದ ಕೆಲವು ಮುಖ್ಯ ವಿಚಾರಗಳೂ ಇವೆ. ಬಹಳಷ್ಟು ಹಗರಣ - ಅವ್ಯವಹಾರ ಏರ್ ಇಂಡಿಯಾದಲ್ಲಿ ನಡೆಯುತ್ತಿದೆ.

ಬೇರೆ ಬೇರೆ ದೇಶಗಳಲ್ಲಿ ಏರ್‌ಇಂಡಿಯಾ ಟಿಕೆಟ್ ಮಾರುವ ಕೌಂಟರ್‌ಗಳನ್ನು ಕಂಪನಿಯೇ ಹೊಂದಿತ್ತು. ಈಗ ಅಪಾರ ಕಮಿಷನ್ ಆಧಾರದಲ್ಲಿ ಅವುಗಳನ್ನು ಜನರಲ್ ಸೇಲ್ಸ್ ಏಜೆನ್ಸಿ (ಜಿಎಸ್‌ಎ) ಗಳಿಗೆ ವಹಿಸಲಾಗಿದೆ. ಸಂಸ್ಥೆಗೆ ಬರುತ್ತಿದ್ದ ಅಪಾರ ಹಣ ಇದರಿಂದ ಸೋರಿ ಹೋದಂತಾಗಲಿಲ್ಲವೇ? ಅದೇ ರೀತಿ, ಏರ್‌ಇಂಡಿಯಾ ಅನೇಕ ವಿದೇಶಿ ಏರ್‌ಲೈನ್ಸ್‌ಗಳ ಸೇವೆಗಳನ್ನು ನಿರ್ವಹಿಸಿ 300 ಕೋಟಿ ರೂಪಾಯಿ ಆದಾಯ ಗಳಿಸುತ್ತಿತ್ತು. ಈಗ ಅದನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಗುತ್ತಿಗೆ ಆಧಾರದಲ್ಲಿ ನೀಡುವ ಮೂಲಕ ಕಂಪನಿ ಆದಾಯ ಕಳೆದುಕೊಳ್ಳುವಂತೆ ಮಾಡಲಾಗಿದೆ. ಹಾಲು ಹಿಂಡುವ ಹಸುವಿನ ಕೆಚ್ಚಲನ್ನೇ ಕತ್ತರಿಸುವ ಧೂರ್ತತನವಲ್ಲದೆ ಇನ್ನೇನಿದು.


ಅಧಿಕಾರಸ್ಥರು, ರಾಜಕಾರಣಿಗಳ ಪ್ರವಾಸಕ್ಕಾಗಿ ಏರ್‌ಇಂಡಿಯಾ ಅಪಾರ ಖರ್ಚು ಮಾಡುವುದು ಇನ್ನೊಂದು ಮುಖ್ಯ ಅಂಶವಾಗಿದೆ. ಪ್ರಧಾನಿಯವರ ವಿದೇಶ ಪ್ರವಾಸಕ್ಕೆ ಏರ್‌ಇಂಡಿಯಾದ 400 ಆಸನ ಸಾಮರ್ಥ್ಯದ ಬೋಯಿಂಗ್ ಬಳಸಲಾಗುತ್ತದೆ. ಅದೇ ವೇಳೆ 800 ಆಸನ ಸಾಮರ್ಥ್ಯದ ಇನ್ನೊಂದು ಬೋಯಿಂಗನ್ನು ಮೀಸಲಿಡಲಾಗುತ್ತದೆ. ಈ ರೀತಿಯಾಗಿ ಪ್ರಧಾನಿ ವಿದೇಶಿ ಪ್ರವಾಸ ಇರುವಷ್ಟು ದಿನ ಎರಡೂ ವಿಮಾನಗಳ ಸೇವೆ ಅಲಭ್ಯ. ಆ ಬಾಬ್ತು ಅಷ್ಟು ನಷ್ಟ. ಸೆಪ್ಟೆಂಬರ್ ಎರಡರಿಂದ 14 ರವರೆಗೆ ವಾಜಪೇಯಿ ಆಸ್ಟ್ರೇಲಿಯಾ ಪ್ರವಾಸ ಹೋಗಲಿದ್ದು ಅಷ್ಟು ದಿನ ಎರಡು ವಿಮಾನಗಳ ಆದಾಯ ನಷ್ಟವಾಗಲಿದೆ. ಅಮೆರಿಕ ಅಧ್ಯಕ್ಷ, ಬ್ರಿಟನ್ ಪ್ರಧಾನಿ ವಿದೇಶ ಪ್ರವಾಸಕ್ಕೆ ಸೇನೆಯ ವಿಮಾನಗಳನ್ನೇ ಬಳಸುತ್ತಾರೆ.

ಪ್ರಧಾನಿ ಮಾತ್ರವೇ ಅಲ್ಲದೆ ಇತರ ಮಂತ್ರಿಗಳು, ಅಧಿಕಾರಿಗಳು, ಸಂಸತ್ ಸದಸ್ಯರು, ರಾಜಕಾರಣಿಗಳು, ಅವರ ಕುಟುಂಬ ಸದಸ್ಯರು ಮೊದಲಾದವರಿಗೆ ಉಚಿತ ಪಾಸ್ ಕೊಡುವುದಲ್ಲದೆ ಅವರ ಖರ್ಚು ವೆಚ್ಚವನ್ನು ಏರ್‌ಇಂಡಿಯಾವೇ ಭರಿಸಿ ಬೊಕ್ಕಸಕ್ಕೆ ಅಪಾರ ನಷ್ಟ ಉಂಟುಮಾಡುತ್ತದೆ.

ಈ ರೀತಿಯಾಗಿ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ ಅನೇಕಾನೇಕ ಹಗರಣ, ದುರ್ವ್ಯವಹಾರ, ಅವೈಜ್ಞಾನಿಕ ಕ್ರಮಗಳಿಂದಾಗಿ ಲಾಭದಲ್ಲಿ ನಡೆಯುವ ಸಂಸ್ಥೆಗಳನ್ನು ನಷ್ಟದತ್ತ ತಳ್ಳುವ ಹುನ್ನಾರ ನಡೆದಿದೆ. ದೇಶದ ಹಿತವನ್ನು ಗೌರವಿಸದೆ ಅವುಗಳನ್ನು ಮಾರುವ ಸಂಚು ಸಾಗಿದೆ.

ಷೇರು ಮಾರಾಟದಲ್ಲಿ ಸರಕಾರದ ನೀತಿ ಹೇಗಿದೆ?

● ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡದ ಕಂಪನಿಗಳೇ ಸಾರ್ವಜನಿಕ ವಲಯದ ಉದ್ಯಮಗಳನ್ನು ಖರೀದಿಸಲು ಮುಂದಾಗುತ್ತಿವೆ. ಬಾಲ್ಕೊ ಖರೀದಿಸಿದ ಸ್ಟರ್‌ಲೈಟ್ ಇದಕ್ಕೆ ಒಳ್ಳೆಯ ಉದಾಹರಣೆ. ಬಿರ್ಲಾ, ದಾಲ್ಮಿಯಾ, ಜಿಂದಾಲ್‌ಗಳು ಸಾಲ ತೀರಿಸಿಲ್ಲ. ಆದರೂ ಅವು ಸರಕಾರಿ ಸಂಸ್ಥೆಗಳ ಖರೀದಿಗೆ ಮುಂದಾಗುತ್ತಿದ್ದು ಸರಕಾರ ಅದಕ್ಕೆ ಮುಕ್ತ ಅವಕಾಶ ನೀಡುತ್ತಿದೆ. ಒಟ್ಟಿನಲ್ಲಿ ಅತ್ಯಮೂಲ್ಯ ರಾಷ್ಟ್ರೀಯ ಆಸ್ತಿ ಪಾಸ್ತಿಗಳನ್ನು ಸರಕಾರ ತಟ್ಟೆಯಲ್ಲಿಟ್ಟು ದೇಶೀಯ ಹಾಗೂ ವಿದೇಶಿ ಆರ್ಥಿಕ ರಕ್ಕಸರ ಕೈಗೆ ಒಪ್ಪಿಸುತ್ತಿದೆ.



ಆರ್ಥಿಕ ವಿಷಯದಲ್ಲಿ ಡಾಕ್ಟರೇಟ್ ಗಳಿಸಿರುವ ಡಾ. ಎಂ.ಕೆ.ಪಂಧೆ ದೇಶದ ಪ್ರಮುಖ ಕಾರ್ಮಿಕ ಸಂಘಟನೆಗಳಲ್ಲಿ ಒಂದಾದ ಸಿಐಟಿಯು ನ ಪ್ರಧಾನ ಕಾರ್ಯದರ್ಶಿ

ದೇಶದ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಸರಕಾರ ಯಾವ ರೀತಿ ಕಾರ್ಯಾಚರಿಸುತ್ತದೆ.

● ಈಗಾಗಲೇ ಗಮನಿಸಿರುವ ಉದಾಹರಣೆಗಳು ಸರಕಾರ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎನ್ನುವುದಕ್ಕೆ ಕನ್ನಡಿಯಾಗಿದೆ. ವಾಸ್ತವವಾಗಿ ಕೊರತೆ ತಡೆಗಟ್ಟುವ ಹೆಸರಿನಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ಹಣ ಹೂಡುವುದನ್ನು ಸರಕಾರ ಹೆಚ್ಚು ಕಡಿಮೆ ಸ್ಥಗಿತಗೊಳಿಸಿದೆ. ಆದರೆ ಕಳೆದ ಮೂರು ವರ್ಷಗಳಲ್ಲಿ ಅತಿ ಹೆಚ್ಚು ಸರಕಾರಿ ನಿಯೋಗಗಳು ವಿದೇಶಗಳಿಗೆ ಭೇಟಿ ನೀಡಿವೆ. ಸಂಸತ್ ಸದಸ್ಯರ ಸಂಬಳ ಸಾಂಗಿಗಳು ಹೆಚ್ಚಿವೆ. ಇವು ವಿರೋಧಾಭಾಸದ ಕ್ರಮಗಳು. ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡಿದೆ. ಹೊಸ ನೇಮಕಾತಿ ಆಗುತ್ತಿಲ್ಲ. ಇರುವ ಉದ್ಯೋಗಿಗಳ ಸಂಖ್ಯೆಯನ್ನೇ ಕಡಿಮೆ ಮಾಡಲಾಗುತ್ತಿದೆ. ಸ್ವಯಂ ನಿವೃತ್ತಿ ಯೋಜನೆಯೂ ಪರಿಸ್ಥಿತಿಯನ್ನು ಬಿಗಡಾಯಿಸುತ್ತಿದೆ.

ಭ್ರಷ್ಟಾಚಾರದ ಬಗ್ಗೆ... ಕೇಂದ್ರ ಸರ್ಕಾರ ಈ ಪಿಡುಗಿನಿಂದ ಏನಾದರೂ ಮುಕ್ತಿ ದೊರಕಿಸುವ ಸಂಭವವಿದೆಯೇ?

● ಎನ್‌ಡಿಎ ಸರಕಾರದ ಭ್ರಷ್ಟಾಚಾರದ ಬಗ್ಗೆ ಪ್ರತಿಪಕ್ಷಗಳು ಹೇಳುವುದಕ್ಕಿಂತ ಆಳುವ ರಂಗದ ಅಂಗಪಕ್ಷಗಳು ಹೇಳಿರುವುದೇ ಸಾಕು. ಶಿವಸೇನೆಯ ಸಂಜಯ ನಿರುಪಮ್, ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ಹಣಕಾಸು ಸಚಿವಾಲಯದತ್ತ ನೇರವಾಗಿ ಬೊಟ್ಟು ಮಾಡಿದ್ದಾರೆ. ಯುಟಿಐ ಹಗರಣದಲ್ಲಿ ಸರಕಾರದ ದೌರ್ಬಲ್ಯ ಪೂರ್ಣ ಬಟಾಬಯಲಾಗಿದೆ. ಸಂಘ ಪರಿವಾರದ ಕಾರ್ಮಿಕ ಸಂಘಟನೆ ಬಿಎಂಎಸ್ ನಾಯಕ ದತ್ತೋಪಂಥ ಠೇಂಗ್ಡಿ ಅವರೇ ಕೇಂದ್ರ ಹಣಕಾಸು ಸಚಿವ ಯಶವಂತ ಸಿನ್ಹಾರನ್ನು 'ಕ್ರಿಮಿನಲ್' ಎಂದು ಜರೆದಿದ್ದಾರೆ?

ಟಿ.ವಿ. ಸೀರಿಯಲ್‌ನಲ್ಲಿ ಭಾಗವಹಿಸದೆಯೇ 'ಕರೋಡ್‌ಪತಿ' ಆಗಬಹುದೆಂಬ ಸನ್ನಿವೇಶ ದೇಶದಲ್ಲಿದೆ. ಭ್ರಷ್ಟಾಚಾರ ಅಷ್ಟೊಂದು ಮೇರೆ ಮೀರಿದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳು ದುರ್ಬಲವಾಗಿವೆ ಎಂಬ ವಾದ ಕೇಳಿಬರುತ್ತಿದೆ. ಇದಕ್ಕೆ ನೀವೇನನ್ನುತ್ತೀರಿ?

● ಯಾರು ಆರ್ಥಿಕ ಕ್ಷೇತ್ರದ ಉದಾರೀಕರಣ, ಜಾಗತೀಕರಣವನ್ನು ಬೆಂಬಲಿಸಿದ್ದಾರೋ ಅವರು ದುರ್ಬಲರಾಗಿದ್ದಾರೆ. ಅದನ್ನು ವಿರೋಧಿಸಿದವರ ನಿಲುವು ಸರಿಯಾಗಿಯೇ ಇದ್ದು ಅವು ಇನ್ನೂ ಪ್ರಬಲವಾಗಿಯೇ ಇವೆ.

ಜರ್ಮನಿ, ಫ್ರಾನ್ಸ್, ಅಮೆರಿಕ, ಬ್ರಿಟನ್ ಮೊದಲಾದ ದೇಶಗಳಲ್ಲಿ ಜಾಗತೀಕರಣವನ್ನು ಬೆಂಬಲಿಸಿದ ಕಾರ್ಮಿಕ ಸಂಘಟನೆಗಳು ದುರ್ಬಲಗೊಂಡಿವೆ. ಅವುಗಳಿಗೆ ಈಗೀಗ ತಪ್ಪಿನ ಅರಿವಾಗುತ್ತಿದೆ. ನವೆಂಬರ್ 9 ರಂದು ಜಗತ್ತಿನಾದ್ಯಂತ ಜಾಗತೀಕರಣ ವಿರೋಧಿ ಪ್ರದರ್ಶನಗಳನ್ನು ನಡೆಸಲು ಬಂಡವಾಳಶಾಹಿ ರಾಷ್ಟ್ರಗಳು ಸೇರಿದಂತೆ ವಿಶ್ವದ ಎಲ್ಲ ಕಾರ್ಮಿಕ ಸಂಘಟನೆಗಳು ಕರೆ ಕೊಟ್ಟಿರುವುದು ಅದರ ಫಲವೇ ಆಗಿದೆ. ಆರ್ಥಿಕ ಸಾಮ್ರಾಜ್ಯಶಾಹಿ ವಿರುದ್ಧದ ಸಂಗ್ರಾಮದಲ್ಲಿ ಇದೊಂದು ಮಹತ್ವದ ಮಜಲಾಗಿದೆ.

ಭಾರತದಲ್ಲಿ ಕಾರ್ಮಿಕ ಸಂಘಟನೆಗಳ ನಡುವಿನ ಏಕತೆ ಹೇಗಿದೆ?

● ಇಲ್ಲಿನ ಬೆಳವಣಿಗೆಯೂ ಆಶಾದಾಯಕವಾಗಿದೆ. ಜಾಗತೀಕರಣ ಮತ್ತು ಎನ್‌ಡಿಎ ಅನುಸರಿಸುತ್ತಿರುವ ತಪ್ಪು ಧೋರಣೆಗಳಿಂದಾಗಿ ದಿನದಿಂದ ದಿನಕ್ಕೆ ಸಂಕಷ್ಟದ ಪ್ರಪಾತಕ್ಕೆ ಬೀಳುತ್ತಿರುವ ಜನಸಾಮಾನ್ಯರು, ವಿಶೇಷವಾಗಿ ಕಾರ್ಮಿಕ ವರ್ಗ ಎಚ್ಚೆತ್ತುಕೊಳ್ಳುತ್ತಿದ್ದಾರೆ. 'ಕೇಸರೀಕರಣ'ದಿಂದ ತಮ್ಮ ಒಗ್ಗಟ್ಟು ಮುರಿಯುತ್ತಾರೆ, ಅದರಿಂದ ತಮ್ಮ ಹೊಟ್ಟೆ ತುಂಬುವುದಿಲ್ಲ ಎನ್ನುವುದು ಅವರಿಗೆ ಮನವರಿಕೆಯಾಗಿದೆ. ಹೀಗಾಗಿ ಬಿಎಂಎಸ್ ಕೂಡ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧದ ಹೋರಾಟದಲ್ಲಿ ಪಾಲ್ಗೊಳ್ಳಲು ಮುಂದಾಗಿದೆ. ಶಿವಸೇನೆಯ ಕಾರ್ಮಿಕ ಸಂಘಟನೆಯೂ ಸೇರುತ್ತಿದೆ. ಜಾರ್ಜ್ ಫರ್ನಾಂಡಿಸ್‌ರ ಎಚ್‌ಎಂಕೆಪಿಯೂ ಹಿಂದೆ ಬಿದ್ದಿಲ್ಲ. ಕಾಂಗ್ರೆಸ್‌ನ ಇಂಟಕ್ ಕಣ್ಣಿಳಿಯುತ್ತಿದೆ. ಎಡಪಂಥೀಯ ಕಾರ್ಮಿಕ ಸಂಘಟನೆಗಳು, ಅದರಲ್ಲೂ ಮುಖ್ಯವಾಗಿ ಸಿಐಟಿಯು ದುಡಿಯುವ ವರ್ಗದ ಅಳಿವು ಉಳಿವಿನ ಹೋರಾಟ ಪ್ರಬಲಗೊಳ್ಳಲು ಸತತ ಪ್ರಯತ್ನ ನಡೆಸುತ್ತಿದೆ. ಕೋಮುವಾದದ ದಳ್ಳುರಿಗೆ ಜನತೆ ಬಲಿಬೀಳದಂತೆ ಅವನ್ನು ಎಚ್ಚರಿಸುತ್ತಿವೆ.

ಜಾಗತೀಕರಣ ಒಂದು ಮಿಥ್ಯೆ. ಅದು ಜಾಗತೀಕರಣ ಅಲ್ಲ; **ಬುಡಕಟ್ಟೀಕರಣ (Trbulisation)** ಎಂದು ಅಮೆರಿಕದ ಪ್ರೊಫೆಸರ್ ಒಬ್ಬರು ಕೆಲವು ದಿನಗಳ ಹಿಂದೆ ಭಾರತೀಯ ಉದ್ಯಮಿಗಳ ಸಂಘಟನೆಯಾದ ಸಿಐಐ ಸಭೆಯಲ್ಲಿ ಹೇಳಿರುವುದು ಗಮನಾರ್ಹ.

ಮುಂದಿನ ದಿನಗಳಲ್ಲಿ ಪ್ರಬಲ ಐಕ್ಯ ಹೋರಾಟಗಳು ಮೂಡಬರಲಿವೆ.

ಸೆಪ್ಟೆಂಬರ್ 11 ರ ಭಯಾನಕ ಭಯೋತ್ಪಾದಕ ಕೃತ್ಯ ನಡೆದು ಎರಡು ವಾರಗಳೇ ಸಂದಿವೆ. ಅದು ಜಗತ್ತನ್ನು ಇನ್ನೂ ಭಯಾನಕವಾಗುವ ರೀತಿಯಲ್ಲಿ ಬದಲಾಯಿಸುತ್ತಿದೆ. ಅದರ ಪರಿಣಾಮದ ಬಗೆಗಿನ ತುಣುಕುಗಳು

ಅಮೆರಿಕದ ರಣಕಹಳೆ : ಸಂಯಮಕ್ಕೆ ಬೆಂಬಲಿಗರ ಆಗ್ರಹ

ಯುದ್ಧದ ಅರ್ಭಟ

ಭಯೋತ್ಪಾದನೆಯ ವಿರುದ್ಧ 'ಯುದ್ಧ' ದ ಹೆಸರಿನಲ್ಲಿ ಅಮೆರಿಕದ ಅಧ್ಯಕ್ಷ ಬುಶ್‌ರ ರಣಕಹಳೆ ತಾರಕಕ್ಕೆ ಹೋಗಿ ಈಗ ಸ್ವಲ್ಪ ಮೆತ್ತಗಾಗುತ್ತಿದೆ. ಕೆಲವು ದಿನಗಳಲ್ಲೇ ಅಫಘಾನಿಸ್ತಾನದ ಮೇಲೆ ವಿಮಾನ ಆಕ್ರಮಣ ಆರಂಭವಾಗುತ್ತದೆ ಎಂಬ ಬೆದರಿಕೆ ಸ್ವಲ್ಪ ತಣ್ಣಗಾಗುತ್ತಿದೆ. ಆದರೆ ಅಫಘಾನಿಸ್ತಾನದ ಸುತ್ತ (ನೆರೆಯ ಪಾಕಿಸ್ತಾನ, ಕಝುಕಿಸ್ತಾನದಲ್ಲಿ) ಅಮೆರಿಕದ ಯುದ್ಧ ವಿಮಾನಗಳು, ಸೈನಿಕಗಳು ಬಂದಿಳಿದಿದ್ದಾರೆ. ಒಂದು ರೀತಿಯಲ್ಲಿ ಅಫಘಾನಿಸ್ತಾನದ ಮೇಲೆ ಯುದ್ಧ ಆಗಲೇ ಆರಂಭವಾಗಿದೆ. ತಾಲಿಬಾನ್ ಸರ್ಕಾರ ತನ್ನ ಪಡೆಗಳು ಎರಡು ಪೈಲೆಟ್-ರಹಿತ ದೂರ -ನಿಯಂತ್ರಿತ ಗೂಢಚಾರ ವಿಮಾನಗಳನ್ನು ತನ್ನವು ಹೌದೇ ಅಲ್ಲವೇ ಎರಡನ್ನೂ ದೃಢಪಡಿಸಿಲ್ಲ. ವರದಿಗಳ ಪ್ರಕರಾ ಈ ಎರಡೂ ವಿಮಾನಗಳೂ ಸಿಐಎ ವಿಮಾನಗಳು ಎನ್ನಲಾಗಿದೆ. ಅಮೆರಿಕದ ವಿಶೇಷ ಕಾರ್ಯಾಚರಣೆ ಪಡೆ ಪಾಕಿಸ್ತಾನದಲ್ಲಿ ಬಂದಿಳಿದು ಆಗಲೇ ಅಫಘಾನಿಸ್ತಾನದಲ್ಲಿ ಗುಹೆ-ಗವಿ-ಬಂಕರಗಳಲ್ಲಿ ಲಾಡೆನ್ ಮತ್ತು ಆತನ ತಂಡದ ಸದಸ್ಯರಿಗೆ ಶೋಧ ನಡೆಸಿದೆಯಂತೆ. ಈ ವಿಶೇಷ ಪಡೆ ಅಫಘಾನಿಸ್ತಾನದ ತುಂಬಾ (ಸಣ್ಣ 4-5 ಜನರ ತಂಡಗಳಾಗಿ) ಗೂಢಾಚರ್ಯೆ ನಡೆಸಿ ಲಾಡೆನರ ಸಂಘಟನೆ ಬಗ್ಗೆ ಶೋಧ ನಡೆಸುತ್ತಾರೆ. ಅವರು ನೇರವಾಗಿ ಸಣ್ಣ ಕಾರ್ಯಾಚರಣೆಗಳ ಮೂಲಕ ಲಾಡೆನ್ ಮತ್ತು ಆತನ ಪ್ರಮುಖ ಸಂಗಡಿಗರನ್ನು ಸೆರೆ ಹಿಡಿಯಲು ಅಥವಾ ನಾಶ ಮಾಡಲು ಪ್ರಯತ್ನಿಸುತ್ತಾರೆ. ಇದು ಸಾಧ್ಯವಾಗದಿದ್ದರೆ ಅಡಗುತಾಣಗಳನ್ನು ಗುರುತಿಸಿ ವಿಮಾನ ದಾಳಿ ಮೂಲಕ ಅವರನ್ನು ನಾಶ ಮಾಡಲಾಗುತ್ತದೆ - ಇದು ಅಮೆರಿಕದ ಯುದ್ಧ ತಂತ್ರ ಎನ್ನಲಾಗಿದೆ. ಮೊದಲ ದಿನಗಳ ಅರ್ಭಟದ ನಂತರ ಅಮೆರಿಕ ಸರ್ಕಾರ ಇರಾಕ್, ಯುಗೋಸ್ಲಾವಿಯಾಗಳಂತೆ ವಿಮಾನ ದಾಳಿಯ ಮೂಲಕ ಅಫಘಾನಿಸ್ತಾನ ದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಪೂರ್ಣ ಪ್ರಮಾಣದ ಭೂ ಯುದ್ಧದಲ್ಲಿ ಅಫಘಾನಿಸ್ತಾದಂತಹ ದುರ್ಗಮ ಪ್ರದೇಶದಲ್ಲಿ ಅಮೆರಿಕದ ಸೈನ್ಯದ ವಿಜಯದ ಸಾಧ್ಯತೆ ಕಡಿಮೆ ಎಂಬ ತೀರ್ಮಾನಕ್ಕೆ ಬಂದಿವೆ ಎಂದು ವರದಿಗಳು ಹೇಳಿವೆ.

ಉತ್ತರದ-ಒಕ್ಕೂಟದ ಜತೆ ಸಂಧಾನ

ಇದಲ್ಲದೆ ತಾಲಿಬಾನ್ ಸರ್ಕಾರ ತಾನಾಗಿ ಲಾಡೆನ್ ಮತ್ತು ಆತನ ಸಂಗಡಿಗರನ್ನು ಒಪ್ಪಿಸುವಂತೆ ಪಾಕಿಸ್ತಾನದ ಸರ್ಕಾರ, ಮಿಲಿಟರಿ, ಧಾರ್ಮಿಕ ನಾಯಕರುಗಳ ಮೂಲಕ ಒತ್ತಡ ಹಾಕಲಾಗುತ್ತಿದೆ. ಅದಕ್ಕೆ ಸಮಯಾವಕಾಶಕ್ಕಾಗಿ ಯುದ್ಧವನ್ನು ಮುಂದಕ್ಕೆ ಹಾಕಲಾಗಿದೆ. ಇದರಜತೆಗೆ ತಾಲಿಬಾನ್ ಸರ್ಕಾರ ಇರುವವರೆಗೆ ಯಾವುದೇ ಕಾರ್ಯಾಚರಣೆ ಕಷ್ಟ. ಆದ್ದರಿಂದ ಅಫಘಾನಿಸ್ತಾನದಲ್ಲಿ ತನ್ನ ತಾಳಕ್ಕೆ ಕುಣಿಯಬಲ್ಲ ಹೊಸ ಸರ್ಕಾರ ಸ್ಥಾಪಿಸಲು ತೆರೆಮರೆಯ ಪ್ರಯತ್ನವನ್ನು ಅಮೆರಿಕ ಮಾಡುತ್ತಿದೆ. ಉತ್ತರದ ಒಕ್ಕೂಟ ಎಂದು ಕರೆಯಲಾಗುವ ತಾಲಿಬಾನ್ ವಿರೋಧಿ ಬಣಗಳೊಂದಿಗೆ ಸಂಪರ್ಕ ಸ್ಥಾಪಿಸಲಾಗಿದೆ. ಅದಕ್ಕೆ ಮಿಲಿಟರಿ, ಆರ್ಥಿಕ ಬೆಂಬಲ ಮೂಲಕ ತಾಲಿಬಾನ್ ಸರ್ಕಾರ ಉರುಳಿಸಿದರೆ, ಲಾಡೆನ್‌ನ ಸಂಘಟನೆಯನ್ನು ಮುರಿಯುವುದು ಸುಲಭವಾಗಬಹುದು ಎಂಬುದು ಅಮೆರಿಕದ ಸರ್ಕಾರದ ಲೆಕ್ಕಾಚಾರವಂತೆ. ಆದರೆ ಪಾಕಿಸ್ತಾನದ ಸರ್ಕಾರ ಇನ್ನೂ ತಾಲಿಬಾನ್-ಪರವಾಗಿದ್ದು, ಉತ್ತರದ-ಒಕ್ಕೂಟ ಪಾಕಿಸ್ತಾನ ಸರ್ಕಾರವನ್ನು ತನ್ನ ಬದ್ಧ ವೈರಿ ಎಂದು ಪರಿಗಣಿಸುತ್ತದೆ. ಇದು ಅಮೆರಿಕದ ಈ ಪ್ರಯತ್ನಕ್ಕೆ ಅಡ್ಡಿಯಾಗಿದೆ ಎನ್ನಲಾಗಿದೆ.

ಸಂಯಮಕ್ಕೆ ಬೆಂಬಲಿಗರ ಆಗ್ರಹ

ಅಧ್ಯಕ್ಷ ಬುಶ್‌ರ 'ಭಯೋತ್ಪಾದನೆ-ವಿರೋಧಿ ಅಂತರ್ರಾಷ್ಟ್ರೀಯ ಒಕ್ಕೂಟ'ದ ಆರಂಭಿಕ ಯಶಸ್ಸಿನ ನಂತರ ಅಲ್ಲೂ ತೊಂದರೆಗಳು ಆರಂಭವಾಗಿವೆ. ಒಂದು ಕಡೆ ರಶ್ಯಾ, ಮತ್ತು ಚೀನಾ ಗಳು ಮೊದಲಿಂದಲೂ ಎಲ್ಲಾ ಕಾರ್ಯಾಚರಣೆಗಳು ಅಂತರರಾಷ್ಟ್ರೀಯ ಸಂಘಟನೆಗಳ ಮೇಲ್ವಿಚಾರಣೆಯಲ್ಲಿ (ಅಂದರೆ ವಿಶ್ವಸಂಸ್ಥೆಯ ಮೂಲಕ) ನಡೆಯಬೇಕು ಎಂದು ಆಗ್ರಹಪಡಿಸುತ್ತಿವೆ. ಅಫಘಾನಿಸ್ತಾನದ ಮೇಲೆ ಏಕಪಕ್ಷೀಯ ಯುದ್ಧ ಭಯೋತ್ಪಾದನೆಗೆ ಯಾವುದೇ ರೀತಿಯಲ್ಲಿ ಪರಿಹಾರವಲ್ಲ ಎಂದು ಸ್ಪಷ್ಟಪಡಿಸಿದೆ. ಅಲ್ಲದೆ ಸೆಪ್ಟೆಂಬರ್ 11 ಭಯೋತ್ಪಾದನೆಯಲ್ಲಿ ಮತ್ತು ಅಮೆರಿಕದ ವಿರುದ್ಧ ಭಯೋತ್ಪಾದನೆ ಗುಂಪುಗಳಿಗೆ ಸೀಮಿತವಾಗಿರಲಾರದು. ಅದು ಎಲ್ಲಾ ಅಂತರಾಷ್ಟ್ರೀಯ ಭಯೋತ್ಪಾದನೆ ಗುಂಪುಗಳನ್ನು ಒಳಗೊಳ್ಳಬೇಕು. ಇದು ಸಾಧ್ಯವಾಗಬೇಕಾದರೆ ವಿಶ್ವಸಂಸ್ಥೆ, ಅಂತರ್ರಾಷ್ಟ್ರೀಯ ಸಂಘಟನೆಗಳು ಪೂರ್ಣವಾಗಿ ಒಳಗೊಳ್ಳಬೇಕು. ಇದಲ್ಲದೆ ಲಾಡೆನ್ ಮತ್ತು ಆತನ ಸಂಘಟನೆ ಸೆಪ್ಟೆಂಬರ್ 11 ರ ಕುಕೃತ್ಯದಲ್ಲಿ ಭಾಗಿಯಾಗಿತ್ತು ಎಂಬುದಕ್ಕೆ ಸ್ಪಷ್ಟ ಪುರಾವೆಯನ್ನು ಇತರ ದೇಶಗಳಿಗೆ ಲಭ್ಯ ಮಾಡಬೇಕೂ ಎಂದು ಹೇಳಿವೆ. ಈ ನಿಲುವಿನತ್ತ ಹೆಚ್ಚೆಚ್ಚು ದೇಶಗಳು ವಾಲುತ್ತಿವೆ. ಅಮೆರಿಕದ ನಾಟೋ ಮಿತ್ರನಾದ ಫ್ರಾನ್ಸ್, ಜರ್ಮನಿಗಳು ವಿಶ್ವಸಂಸ್ಥೆಯನ್ನು ತೊಡಗಿಸಬೇಕು. ಲಾಡೆನ್ ವಿರುದ್ಧ ಪುರಾವೆ ಒದಗಿಸಬೇಕು ಎಂದಿವೆ. ಅದಿಲ್ಲದೆ ಅಮೆರಿಕದ ಜತೆ ಜಂಟಿ ಕಾರ್ಯಾಚರಣೆಯಲ್ಲಿ ಭಾಗವಹಿಸುವುದು ಕಷ್ಟ ಎಂದಿವೆ. ಅಮೆರಿಕದ ಮಿತ್ರನಾದ ಸೌದಿ ಅರೇಬಿಯಾ, ಕೊಲ್ಲಿ ದೇಶಗಳೂ ಲಾಡೆನ್‌ರು ಅಪರಾಧಿ ಎಂಬ ಬಗ್ಗೆ ಪುರಾವೆ ಇಲ್ಲದೆ ಅಮೆರಿಕದ ಜತೆ ಯಾವುದೇ ಮಿಲಿಟರಿ ಕಾರ್ಯಾಚರಣೆಗೆ ಬೆಂಬಲ ಕೊಡುವುದಿಲ್ಲ ಎಂದಿವೆ.

ಪಾಕಿಸ್ತಾನದಲ್ಲಿ ಸರಕಾರ-ವಿರೋಧಿ ಪ್ರತಿಭಟನೆ

ಪಾಕಿಸ್ತಾನದಲ್ಲಿ ಮುಷರಫ್ ಸರ್ಕಾರ ಕಷ್ಟದಲ್ಲಿದೆ. ಅಮೆರಿಕದ ಜತೆ ಮಿಲಿಟರಿ ಕಾರ್ಯಾಚರಣೆಯಲ್ಲಿ ಸಹಕರಿಸುವ ಅವರ ನೀತಿಗೆ ಉಗ್ರ ಪ್ರತಿಭಟನೆ ಕಂಡು ಬಂದಿದೆ. ಹಿಂದೆ ಅವರೇ ಹಟ್ಟು ಹಾಕಿ ಬೆಂಬಲಿಸಿದ ಜೆಹಾದಿ ಗುಂಪುಗಳು, ಧಾರ್ಮಿಕ ನಾಯಕರು, ಧಾರ್ಮಿಕ ಮೂಲ ಭೂತವಾದಿಗಳು ಅಮೆರಿಕದ ಒತ್ತಡಕ್ಕೆ ಮಣಿಯುವ ಅವರ ನೀತಿಯನ್ನು ಉಗ್ರವಾಗಿ ಖಂಡಿಸಿದ್ದಾರೆ. ದೇಶಾದ್ಯಂತ ಒಂದ ದಿನದ ಬಂದ್, ಹಿಂಸಾತ್ಮಕ ಪ್ರತಿಭಟನೆಗಳು ನಡೆದಿವೆ. ಇದರಿಂದಾಗಿ ಮುಶರಫ್ ಸಹ ಅಮೆರಿಕದ ಕಾರ್ಯಾಚರಣೆಗೆ ಸೌಲಭ್ಯ ಕೊಡಲಾಗುವುದು. ಆದರೆ ಇದರಲ್ಲಿ ಪಾಕಿಸ್ತಾನದ ಸೈನ್ಯ ಭಾಗವಹಿಸುವುದಿಲ್ಲ ಎನ್ನಬೇಕಾಗಿದೆ. ಪಾಕಿಸ್ತಾನದ ಸೈನ್ಯ ಭಾಗವಹಿಸದಿದ್ದರೆ ಅಮೆರಿಕದ ಕಾರ್ಯಾಚರಣೆ ಸಫಲವಾಗುವ ಸಾಧ್ಯತೆ ತೀರಾ ಕಡಿಮೆ. ಪಾಕಿಸ್ತಾನದ ಸರ್ಕಾರ ಈ ಸಂದರ್ಭ ಬಳಸಿ, ಆರ್ಥಿಕ ನೆರವು, ದಿಗ್ಬಂಧನ ತೆರವು ಮುಂತಾದವುಗಳನ್ನು ಸಾಧಿಸಿದೆ. ಮುಷರಫ್ ಇವೆಲ್ಲಾ ಅಮೆರಿಕದ ಜತೆ ಸಹಕಾರದಿಂದ ದೇಶಕ್ಕೆ ಆದ 'ಲಾಭ' ಎಂದರು ಇದಕ್ಕೆ ಸಾಕಷ್ಟು ಬೆಂಬಲ ದೊರೆತಿಲ್ಲ. ಅವರ ಬದಲು ಒಸಮಾ ಬಿನ್ ಲಾಡೆನ್ ಸಾಮಾನ್ಯ ಜನರಲ್ಲೂ ಒಂದು ಥರದ 'ಹೀರೋ' ಆಗಿ ಬಿಟ್ಟಿದ್ದಾನೆ.

ಮುಶರಫ್ ತನ್ನ ಸರ್ಕಾರ ಉರುಳಬಹುದು ಎಂಬ ಭೀತಿಯೂ ಕಾಡುತ್ತಿದೆ. ಇಂತಹುದೇ ಪರಿಸ್ಥಿತಿ ಇತರ ಮುಸ್ಲಿಂ ದೇಶಗಳಲ್ಲು ಕಂಡು ಬಂದಿದೆ. ಸೌದಿ ಅರೇಬಿಯಾ, ಈಜಿಪ್ಟ್, ಇಂಡೋನೇಶ್ಯಾ, ಮಲೇಶ್ಯಾ ಮುಂತಾದ ದೇಶಗಳಲ್ಲೂ ಅಮೆರಿಕ-ವಿರೋಧಿ ಉಗ್ರ ಪ್ರತಿಭಟನೆ ವ್ಯಕ್ತವಾಗಿದೆ. ಅಮೆರಿಕ 'ಭಯೋತ್ಪಾದನೆ ವಿರುದ್ಧ ಯುದ್ಧ' ಇಸ್ಲಾಮ್ ವಿರುದ್ಧ ಯುದ್ಧ ಅಲ್ಲ ಎಂದು ಎಷ್ಟೇ ಹೇಳಿದರೂ ಅವರಿಗೆ ಜಗತ್ತಿನ ಮುಸ್ಲಿಮರನ್ನು ಸಮಾಧಾನ ಮಾಡಲು ಸಾಧ್ಯವಾಗಿಲ್ಲ. ಇದರಿಂದಾಗಿ ಅಲ್ಲಿನ ಸರ್ಕಾರಗಳು ಅಮೆರಿಕದ ಜತೆ 'ಸಹಕಾರ'ವನ್ನು ಸೀಮಿತ ಮಟ್ಟದಲ್ಲಿಟ್ಟಿವೆ.

ಅಮೆರಿಕದಲ್ಲಿ ಮುಸ್ಲಿಮರ, ಸಿಖ್ಖರ ಮೇಲೆ ಆಕ್ರಮಣ

ಅಮೆರಿಕದಲ್ಲಿ ಆಂತರಿಕವಾಗಿ ಪರಿಸ್ಥಿತಿ ಸಾಮಾನ್ಯವಾಗಿಲ್ಲ. ಸರ್ಕಾರ 'ಮುಸ್ಲಿಮರ ವಿರುದ್ಧ ಯುದ್ಧ ಅಲ್ಲ' ಎಂದೆಷ್ಟೇ ಹೇಳಿದರು ಅದು ಅದೇ ರೀತಿ ಆಗಿಬಿಟ್ಟಿದೆ. ಹಲವು ಕಡೆ ಉದ್ರಿಕ್ತ ಜನ ಸಾಮಾನ್ಯ ಸಿಖ್ಖರು, ಮುಸ್ಲಿಮರ ಮೇಲೆ ಆಕ್ರಮಣ ಮಾಡಿದ್ದಾರೆ. ಅವರ ಆಸ್ತಿಪಾಸ್ತಿಗಳನ್ನು ಸುಟ್ಟಿದ್ದಾರೆ. ಗುರುದ್ವಾರ, ಮಸೀದಿಗಳ ಮೇಲೆ ಆಕ್ರಮಣ ಮಾಡಲಾಗಿದೆ. ಅಮೆರಿಕನ್ ಸರ್ಕಾರದ ಸಂಘಟನೆಗಳು ತಮ್ಮ ಮುಸ್ಲಿಮ್-ವಿರೋಧಿ, ಏಶ್ಯನ್ ವಿರೋಧಿ, ಅಸಹನೆ, ಪೂರ್ವಗ್ರಹ, ದ್ವೇಶ ಪ್ರದರ್ಶಿಸಿವೆ. ಎಲ್ಲಾ ಕಡೆ ಏಶ್ಯನ್ನರು, ಮುಸ್ಲಿಮರನ್ನು ಸಂಶಯದಿಂದ ಕಾಣಲಾಗುತ್ತಿದೆ. ಇದರ ತಾರಕಸ್ಥಿತಿ ಎಂದರೆ ರಾಜೀವಗಾಂಧಿ ಪುತ್ರ ರಾಹುಲರನ್ನು ಎಫ್‌ಬಿಐ ಒಂದು ಗಂಟೆ ಕಾಲ ಬಂಧಿಸಿದ್ದು, ತನಿಖೆ ಹೆಸರಲ್ಲಿ ಏಶ್ಯನ್ನರನ್ನು, ಮುಸ್ಲಿಮರಿಗೆ ಕಿರುಕುಳ ಆರಂಭವಾಗಿದೆ. ಅಮೆರಿಕದ ಒಳಗೂ 'ಭಯೋತ್ಪಾದನೆ ಮೇಲೆ ಯುದ್ಧ' ಎಂದರೆ ಏಶ್ಯನ್ನರ, ಮುಸ್ಲಿಮರ ಮೇಲೆ ಯುದ್ಧ ಎಂಬ ಸತ್ಯವನ್ನು ಮುಚ್ಚಿಡಲಾಗುತ್ತಿಲ್ಲ.

ವಿಮಾನಯಾನದಲ್ಲಿ ಬಿಕ್ಕಟ್ಟು

ಅಮೆರಿಕಾದ ವಿಮಾನಯಾನ ತೀವ್ರಬಿಕ್ಕಟ್ಟಿಗೆ ಸಿಲುಕಿದೆ. ಸೆಪ್ಟೆಂಬರ್ 11 ರ ಘಟನೆ ನಂತರ ಸಾಮಾನ್ಯ ಜನರ ಸುಭದ್ರತೆಗೆ ಭಾವನೆಗೆ ಘಾಸಿಯಾಗಿದೆ. ವಿಮಾನದಲ್ಲಿ ಜನ ಪ್ರಯಾಣಿಸಲು ಹಿಂಜರಿಯುತ್ತಿದ್ದಾರೆ. ಇದರಿಂದ ಸಂಬಂಧಪಟ್ಟ ಹೊಟೆಲ್, ಸಾಗಾಣಿಕೆ, ಪ್ರವಾಸ, ವಿಮಾನ-ತಯಾರಿಕೆ ಕೈಗಾರಿಕೆಗಳಿಗೂ ತೊಂದರೆಯಾಗಿದೆ. ಎರಡು ವಿಮಾನ ಯಾನ ಕಂಪನಿಗಳು ಮುಚ್ಚುವ ಸ್ಥಿತಿಗೆ ಬಂದಿದೆ. ವಿಮಾನ ತಯಾರಿಸುವ ಕೈಗಾರಿಕೆಗಳು ಅದೇ ಸ್ಥಿತಿಗೆ ಬರುತ್ತಿವೆ. ಸರ್ಕಾರ 15 ಶತಕೋಟಿ ಡಾಲರುಗಳ ಸಹಾಯಧನ ಘೋಷಿಸಬೇಕಾಗಿ ಬಂದಿದೆ.

ಅಧ್ಯಕ್ಷ ಬುಶ್ ಸ್ವತಃ 'ವಿಮಾನ ಯಾನ ಮಾಡಿ, ಎಲ್ಲಾ ಸುಭದ್ರವಾಗಿದೆ' ಎಂದು ಪ್ರಚಾರ ಮಾಡುವ ಸ್ಥಿತಿ ಬಂದಿದೆ. ಬುಶ್‌ನ ಮಂತ್ರಿಗಳ ಸ್ವತಃ ವಿಮಾನಯಾನ ಮಾಡಿ' ನೋಡಿ ಎಲ್ಲಾ ಚೆನ್ನಾಗಿದೆ ಎಂದು ಹೇಳಬೇಕಾಗಿ ಬಂದಿದೆ. ಆದರೂ ವಿಮಾನ ಯಾನ ಇನ್ನೂ ಸುಧಾರಿಸಿಲ್ಲ. ವಿಮಾನ ಯಾನ ಸುಭದ್ರಗೊಳಿಸಲು ಪೈಲಟ್‌ಗಳಿಗೆ ಶಸ್ತ್ರ ಒಯ್ಯುವ ಅನುಮತಿ, ಸಶಸ್ತ್ರ ಸೈನಿಕರ ಪ್ರಯಾಣ, ಕಾಕ್-ಪಿಟ್‌ಗೆ ಬುಲೆಟ್‌ಪ್ರೂಫ್ ಬಾಗಿಲು - ಇತ್ಯಾದಿ ಕ್ರಮಗಳನ್ನು ಯೋಜಿಸಲಾಗುತ್ತಿದೆ. ಅಮೆರಿಕದಲ್ಲಿ ಎಲ್ಲೆಡೆ ವದಂತಿಗಳು ಹರಡುತ್ತಿವೆ. ಮುಂದಿನ ಬಾರಿ ವಿಮಾನದಲ್ಲಿ ರಾಸಾಯನಿಕ-ಬ್ಯಾಕ್ಟೀರಿಯ ಸಿಂಪಡಿಸುವ ಭಯೋತ್ಪಾದನೆ ಮಾಡಲಾಗುತ್ತದೆಯಂತೆ. ಸಿಐಎಗೆ ಮೊದಲೇ ಈ ಬಗ್ಗೆ ಗೊತ್ತಿತ್ತು. ವದಂತಿಗಳು ಇಂಟರ್‌ನೆಟ್, ಮೊಬೈಲ್ ಫೋನ್ ಮೂಲಕ ಕಾಡ್ಗಿಚ್ಚಿನಂತೆ ಹರಡಿವೆ. ಶೇರು ಪೇಟೆ ಎರಡನೇ ಮಹಾಯುದ್ಧದ ಸಮಯದ ಮಟ್ಟಕ್ಕೆ ಕುಸಿದಿದೆ.

- [illegible]

ಅಮೆರಿಕದಲ್ಲಿ ಮುಸ್ಲಿಮರ ಮತ್ತು ಸಿಖ್ಖರ ಮೇಲೆ ಆಕ್ರಮಣಗಳು-ಯುದ್ಧ ವಿರೋಧಿ ಪ್ರತಿಭಟನೆ

ಅಮೆರಿಕದ ಯುದ್ಧಕೋರ ಪ್ರಯತ್ನಗಳನ್ನು ವಿರೋಧಿಸಿ ದೇಶದಾದ್ಯಂತ ಪ್ರತಿಭಟಿಸಲು ಸಿಪಿಐ(ಎಂ) ಹಾಗೂ ಎಡಪಕ್ಷಗಳು ಕರೆ ನೀಡಿವೆ. ಈ ಸಂದರ್ಭದಲ್ಲಿ ಮೆರವಣಿಗೆ, ಮತಪ್ರದರ್ಶನ ಮತ್ತು ಯುದ್ಧವಿರೋಧಿಯಾದ ಭೂತದಹನ ತಕ್ಷಣದಲ್ಲೇ ನಡೆಸಲಾಗುವುದು.


ಅಮೆರಿಕಾದಲ್ಲಿ 10 ಸಾವಿರಕ್ಕೂ ಹೆಚ್ಚು ಯುದ್ಧವಿರೋಧಿ ಪ್ರಬಲ ಪ್ರತಿಭಟನಾಕಾರರು

ಸಿನಿಮಾ

ನಿರೀಕ್ಷೆ ಹುಸಿಗೊಳಿಸಿದ 'ನೀಲಾ'

ಸ್ವಾತಂತ್ರ್ಯಾನಂತರವೂ ಭಾರತದ ವಿವಿಧೆಡೆಗಳಲ್ಲಿ ಭೂ ಒಡೆಯರು ತಮ್ಮ ಪಾಳೇಗಾರಿ ಮನೋಭಾವದಿಂದ, ದುರಹಂಕಾರದ ಪರಮಾವಧಿಯ ಪ್ರತೀಕವಾಗಿ ಬಡಜನತೆ ದೌರ್ಜನ್ಯಕ್ಕೊಳಗಾಗುತ್ತಿರುವುದನ್ನು ನಾವು ಇಂದು ಕೂಡ ನೋಡುತ್ತಿದ್ದೇವೆ. ಅಂತಹ ಪಾಳೆಯಗಾರನೊಬ್ಬನ ಅಟಾಟೋಪಕ್ಕೆ ಸಿಲುಕಿ ನಿರ್ನಾಮವಾಗುವ ಜನಪದ ಕಲಾ ಕುಟುಂಬವೊಂದು, ಕೊನೆಯಲ್ಲಿ ಅವನ ಅಂತ್ಯಕ್ಕೆ ಕಾರಣವಾಗುವ ಕಥೆಯೇ 'ನೀಲಾ'

ಜಗದೇವರಾಯ ಕಲ್ಲಂದೂರು ಪ್ರಾಂತ್ಯದ ಜಹಗೀರುದಾರ. ಅಲ್ಲಿನ ಜಾನಪದ ಕಲಾ ಕುಟುಂಬವೊಂದು ಈ ಪಾಳೆಗಾರನ ವಂಶದ ಮೇಲೆ ಹಾಡು ಕಟ್ಟಿ, ಅವನ ಮುಂದೆ ಹಾಡಿ-ಕುಣಿದು ಅವನೀಡುವ ಭಿಕ್ಷೆಯಿಂದ ಬಾಳ್ವೆ ನಡೆಸುತ್ತಿರುತ್ತದೆ.

ತನ್ನ ವಂಶದ ಬಗ್ಗೆ ಭಾರೀ ಅಭಿಮಾನವಿರಿಸಿಕೊಂಡ ಜಗದೇವರಾಯನ ಹುಟ್ಟು ನೀತಿಬಾಹಿರವಾದುದೆಂಬ ರಹಸ್ಯವನ್ನು ಅರಿತಿದ್ದ ಕಲಾ ಕುಟುಂಬದ ಮಗನು ಪಾಳೆಗಾರನನ್ನು ಹಾಡಿಹೊಗಳುವ ಕಾಯಕವನ್ನು ಒಲ್ಲದವನಾಗಿರುತ್ತಾನೆ. ಆದರೆ ತಂದೆಯ ಒತ್ತಾಯಕ್ಕೆ ಮಣಿದು ಹಾಡುವಂತಾಗುತ್ತದೆ. ಹಾಡುವಾಗ ಜಗದೇವರಾಯನು ತಂದೆ ಸತ್ತ ಮೇಲೆ ಹುಟ್ಟಿದವನೆಂದು ಹೇಳಿ ಅವನಿಂದ ಹಲ್ಲೆಗೊಳಗಾಗುವುದೇ ಅಲ್ಲದೆ ಪಾಳೆಯಗಾರನ ಮಗಳನ್ನು ಪ್ರೀತಿಸಿದ ತಪ್ಪಿಗೆ ಹತ್ಯೆಗೀಡಾಗುತ್ತಾನೆ. ಕಲಾ ಕುಟುಂಬದ ತಂದೆ-ಮಗಳು ತಮ್ಮ ಮೇಲಾಗಬಹುದಾದ ದಾಳಿಯನ್ನು ಅರಿತು ಪರಾರಿಯಾಗುವ ಸಂದರ್ಭದಲ್ಲಿ ತಂದೆ ಕೂಡ ಮೃತನಾಗಿ ಮಗಳಾದ 'ನೀಲಾ' ಮಾತ್ರ ಉಳಿದುಕೊಳ್ಳುತ್ತಾಳೆ.

ಅಜ್ಜ ಶಿವಯ್ಯ ನೀಲಾಳಿಗೆ ಆಶ್ರಯ ನೀಡಿ, ಅವಳನ್ನು ಜಗದೇವರಾಯನ ವಿರುದ್ಧ ತಿರುಗಿ ಬೀಳಲು ಜ್ಞಾನ ದೀಕ್ಷೆ ನೀಡಿ ಪ್ರೇರೇಪಿಸುತ್ತಾನೆ. ನೀಲಾ ತನ್ನ ಅಣ್ಣನ ಹತ್ಯೆಗೆ ಜಗದೇವರಾಯ ಕಾರಣನೆಂಬುದನ್ನು ಊರಮುಂದೆ ಬಹಿರಂಗ ಪಡಿಸಿದಾಗ ಅವಳ ಮೇಲಾಗಬಹುದಾದ ಹಲ್ಲೆಯನ್ನು ಮನಗಂಡು ಕೋಟೆಯ ಅಧ್ಯಯನ ನಡೆಸಲು ಬಂದಿದ್ದ ಇಬ್ಬರು ಸಂಶೋಧಕರು ಆಕೆಯನ್ನು ನಗರಕ್ಕೆ ಕರೆ ತಂದು ಅವಳನ್ನು ಖ್ಯಾತ ಗಾಯಕಿಯನ್ನಾಗಿಸುತ್ತಾರೆ.

ಜಗದೇವರಾಯ ಪಾಳೆಗಾರ ವಂಶದ ನಿಜವಾದ ವಾರಸುದಾರನಲ್ಲನೆಂಬ ವಿಷಯವನ್ನು ಅಜ್ಜ ಶಿವಯ್ಯನ ಅರ್ಜಿಯಿಂದ ಮನಗಂಡ ಸರ್ಕಾರ ಅವನ ಸಮಸ್ತ ಆಸ್ತಿಯನ್ನು ವಶಪಡಿಸಿಕೊಳ್ಳಲು ಮುಂದಾಗುತ್ತದೆ. ಇಲ್ಲವಾದಲ್ಲಿ ತಾನೇ ನಿಜವಾದ ವಾರಸುದಾರ ನೆಂಬುದನ್ನು ರುಜುವಾತು ಪಡಿಸಬೇಕೆಂದು ಆದೇಶಿಸುತ್ತದೆ. ಜಗದೇವರಾಯ ಯಾವುದೇ ರುಜುವಾತುಗಳಿಲ್ಲದ ಸಂದರ್ಭದಲ್ಲಿ ಜನಪದ ಕಲಾವಿದರು ಆ ವಂಶಸ್ತರ ಮೇಲೆ ಕಟ್ಟಿದ ಹಾಡುಗಳನ್ನು ಕೇಳಿ ಅದರಲ್ಲಿರುವ ವಿಚಾರಗಳನ್ನು ಸಾಕ್ಷ್ಯಗಳಾಗಿ ಪರಿಗಣಿಸುತ್ತದೆಂಬ ವಿಚಾರವನ್ನು ತಿಳಿದು ನೀಲಾಳನ್ನು ತನ್ನ ಪರವಾಗಿ ಜಿಲ್ಲಾಧಿಕಾರಿಗಳ ಮುಂದೆ ಹಾಡಬೇಕೆಂದು ಒತ್ತಾಯಿಸುತ್ತಾನೆ. ಆದರೆ ಅಜ್ಜ ಶಿವಯ್ಯ ಮತ್ತು ಸಂಶೋಧಕರ ಪ್ರೇರಣೆ ಮತ್ತು ತನ್ನ ಮೇಲಾದ ದೌರ್ಜನ್ಯದ ವಿರುದ್ಧ ದನಿಯೆತ್ತಲು ನಿರ್ಧರಿಸಿದ ನೀಲಾ ಜಿಲ್ಲಾಧಿಕಾರಿಗಳ ಮುಂದೆ ಜಗದೇವರಾಯ ಅಪ್ಪ ಸತ್ತ ಹನ್ನೆರಡು ತಿಂಗಳಿಗೆ ಹುಟ್ಟಿದವ ಎಂಬ ಸತ್ಯವನ್ನು ಹಾಡಿನ ಮೂಲಕ ತಿಳಿಸುತ್ತಾಳೆ. ಸರ್ಕಾರ ಇದನ್ನೇ ಸಾಕ್ಷ್ಯವೆಂದು ಪರಿಗಣಿಸಿ ಜಗದೇವರಾಯ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮವಹಿಸುತ್ತದೆ.

ತನ್ನ ಹುಟ್ಟಿನ ರಹಸ್ಯ ಅರಿಯದ ಜಗದೇವರಾಯ ತನ್ನ ತಾಯಿಯ ಬಳಿ ಸತ್ಯ ಏನೆಂದು ಕೇಳಿದಾಗ ಆತನ ತಂದೆ ಸಾಯುತ್ತಿರುವ ಸಂದರ್ಭದಲ್ಲಿ ಸಮಸ್ತ ಆಸ್ತಿಗೆ ದಿಕ್ಕಿಲ್ಲದಂತಾಗಿ ಸರ್ಕಾರದ ಪಾಲಾಗುವುದನ್ನು ತಪ್ಪಿಸಲು ಕೂಡಾವಳಿಯ ಮೂಲಕ ಈತನನ್ನು ಹಡೆದದನ್ನು ಒಪ್ಪಿಕೊಂಡು ನಂತರ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಜಗದೇವರಾಯನ ತಂದೆ ಬೇರೆಯಾರಾಗಿರದೆ ತನ್ನ ಮನೆಯಲ್ಲಿ ಭಿಕ್ಷೆ ಬೇಡಿ ತಿನ್ನುತ್ತಿದ್ದ ಹುಚ್ಚನೊಬ್ಬನೆಂದು ತಿಳಿದು ಆದ



ಅವಮಾನವನ್ನು ಸಹಿಸಲಾರದೆ ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದು ನೀಲಾ ಚಿತ್ರ ಕಥೆ.

ಇದು ಒಬ್ಬ ಪಾಳೆಯಗಾರನ ವಿರುದ್ಧ ಬಂಡೆದ್ದ ಹೆಣ್ಣೊಬ್ಬಳ ಕಥೆಯಂತೆ ಭಾಸವಾದರೂ ಚಿತ್ರದಲ್ಲಿ ಎಲ್ಲೋ ಈ ಕೆಚ್ಚು ಕಾಣಬರುವುದಿಲ್ಲ. ಪ್ರಾರಂಭದಲ್ಲಿ ಚಿತ್ರ ವೇಗದಿಂದ ಚಲಿಸಿ ನಂತರ ಮುಗ್ಗರಿಸುತ್ತದೆ. ಕಥೆಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವಲ್ಲಿ ನಿರ್ದೇಶಕರು ವಿಫಲರಾಗಿದ್ದಾರೆ. ಅಸಂಬದ್ಧ, ಅನಗತ್ಯವಾದ ಸನ್ನಿವೇಶಗಳನ್ನು ತುರುಕಿ ಅತ್ತ ಪಾಳೆಗಾರರ ದೌರ್ಜನ್ಯದ ವಿರುದ್ಧದ ಬಂಡಾಯವೂ ಆಗದೆ ಇತ್ತ ಜನಪದ ಕಲಾವಿದರ ಹಾಡು-ಪಾಡಿನ ಕಥೆಯೂ ಆಗದೆ ಅತಂತ್ರಗೊಂಡಿದೆ.

'ನೀಲಾ'ಳಿಗೆ ಗಂಟಲು ಕ್ಯಾನ್ಸರ್ ಬರುವುದು ನಂತರ ಸರಿ ಹೋಗುವುದು, ಆಕೆ ನಗರದಲ್ಲಿದ್ದಾಗ ಜಗದೇವರಾಯನನ್ನು ಮರೆತು ನಂತರ ಮತ್ತೆ ಆತನ ವಿರುದ್ಧದ ಸಂಘರ್ಷಕ್ಕೆ ಬೇಕಾಗುವ ಪ್ರೇರಣೆಗಾಗಿ ಶಿವಯ್ಯನನ್ನು ಹುಡುಕುತ್ತಾ ಹೊರಡುವುದು ಹಾಸ್ಯಾಸ್ಪದವಾಗಿದೆ. ದೌರ್ಜನ್ಯಕ್ಕೊಳಗಾದವರಿಗೆ ಅದರ ವಿರುದ್ಧ ದನಿಯೆತ್ತಲು ನಿರ್ಧರಿಸಿದವರಿಗೆ ಮತ್ತೆ ಮತ್ತೆ ಹೊರಗಿನಿಂದ ಪ್ರೇರಣೆ ಬೇಕೆ? ಚಿತ್ರಕ್ಕೆ ಪೂರಕವಾಗಿರದ ಈ ದೃಶ್ಯಗಳು ಚಿತ್ರವನ್ನು 'ಚುಯಿಂಗ್‌ಗಮ್'ನಂತೆ ಎಳೆಯಲು ಮತ್ತು ಪ್ರೇಕ್ಷಕರ ಸಹನೆ ಪರೀಕ್ಷಿಸಲು ಸೇರಿಸಿದಂತಿದೆ. 'ನೀಲಾ' ಪಾತ್ರಧಾರಿ ಗಾಯಿತ್ರಿ ಜಯರಾಂ ನಟನೆಯಲ್ಲಿ ಸೋತಿದ್ದಾರೆ. ದೌರ್ಜನ್ಯಕ್ಕೀಡಾಗಿ, ಅದರ ವಿರುದ್ಧ ದನಿಯೆತ್ತುವ ಹೆಣ್ಣಾಗಿ ಆಕೆ ಎಲ್ಲಿಯೂ ಗೋಚರಿಸದೆ ಸುಕೋಮಲ ಹೆಣ್ಣಾಗಿಯೇ ಕಣ್ಣಮುಂದೆ ನಿಲ್ಲುತ್ತಾಳೆ. ಅನ್ಯಾಯಕ್ಕೊಳಗಾದವರ ಮನದೊಳಗಿನ ಆಕ್ರೋಶದ ದನಿಯಂತೆ ಕೋಟಗಾನಹಳ್ಳಿ ರಾಮಯ್ಯನವರ ಸಂಭಾಷಣೆ ಅಲ್ಲಲ್ಲಿ ಗಮನಸೆಳೆಯುತ್ತದಾದರೂ ಅದಕ್ಕೆ ಸಮನಾದ ದೃಶ್ಯ ಸಂಯೋಜನೆಯಿಲ್ಲದೆ ಚಿತ್ರ ಪೇಲವವಾಗಿ ಕಾಣುತ್ತದೆ. ಬಹುದಿನಗಳ ನಂತರ ವಿಜಯಭಾಸ್ಕರ್ ಈ ಚಿತ್ರಕ್ಕೆ ಸಂಗೀತ ನೀಡಿರುವುದು ವಿಶೇಷ. ಒಂದೆರಡು ಹಾಡುಗಳು ಗುನುಗುನಿಸುವಂತಿವೆ. ಪಾಳೆಗಾರರ ದರ್ಪ-ದುರಹಂಕಾರದ ಪ್ರತಿರೂಪವಾಗಿ ಶರತ್‌ಬಾಬು ಆ ಪಾತ್ರದಲ್ಲಿ ಮಿಂಚಿದ್ದಾರೆ. ಶಿವಯ್ಯನಾಗಿ ಅನಂತ್‌ನಾಗ್‌ರ ಅಭಿನಯದಲ್ಲಿ ವಿಶೇಷವಾದುದೇನಿಲ್ಲ. ಸಂಶೋಧಕರ ಪಾತ್ರದಲ್ಲಿನ ಏಣಗಿ ನಟರಾಜ್ ತಮ್ಮ 'ಖಡಕ್' ಸಂಭಾಷಣೆಯಿಂದ ಗಮನಸೆಳೆಯುತ್ತಾರೆ, ನವನಟ ನವೀನ್ ಮಯೂರ್‌ಗೆ ಹೆಚ್ಚಿನ ಅವಕಾಶವಿಲ್ಲ.

ನಿರ್ದೇಶಕ ನಾಗಾಭರಣ ಹಿಂದಿನ ಕೆಲವು ಗಮನಾರ್ಹ ಚಿತ್ರಗಳನ್ನು ಗಮನಿಸಿ ನಿರೀಕ್ಷೆಯಿಟ್ಟುಕೊಂಡು ಹೋದವರಿಗೆ 'ನೀಲಾ' ಭಾರಿ ನಿರಾಸೆ ಮೂಡಿಸುತ್ತದೆ. ರಮ್ಯ ಹೊರಾಂಗಣದಲ್ಲಿ ಚಿತ್ರೀಕರಿಸಿರುವುದನ್ನು ಬಿಟ್ಟರೆ ಇಲ್ಲಿ ಭರಣರ ವಿಶೇಷ ಛಾಪು ಈ ಚಿತ್ರದಲ್ಲಿ ಏನೇನೂ ಇಲ್ಲ.

\- ಎಂ.ರಾಮು

ರಂಗಭೂಮಿಗೆ ಸಾಮಾಜಿಕ ಕಳಕಳಿ ಅಗತ್ಯ: ಸತ್ಯು

ಭಾನುವಾರ ಬೆಂಗಳೂರಿನಲ್ಲಿ ಭಾಗವತರು ಸಾಂಸ್ಕೃತಿಕ ಸಂಘಟನೆ ಹಮ್ಮಿಕೊಂಡಿದ್ದ 'ರಂಗಭೂಮಿ ಮೂಡಿಸಿದ ರಾಜಕೀಯ ಪ್ರಜ್ಞೆ' ಎಂಬ ವಿಚಾರಸಂಕಿರಣದಲ್ಲಿ ಕೇಳಿದ್ದು.

ಖ್ಯಾತ ರಂಗಕರ್ಮಿ, ನಿರ್ದೇಶಕ ಎಂ.ಎಸ್.ಸತ್ಯು

● ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎರಡೂ ರಂಗಭೂಮಿ ನೀಡಿದ ಕೊಡುಗೆ ಅನನ್ಯ. ಹೀಗಿರುವಾಗ ಮೇಲು ಕೀಳು ಎಂದು ಪ್ರತ್ಯೇಕಿಸಿ ನೋಡಲಾಗದು.



ಏಣಗಿ ಬಾಳಪ್ಪ ಮಾತನಾಡುತ್ತಿರುವುದು

● ಸಿದ್ಧಾಂತವಿಲ್ಲದ ನಾಟಕಕಗಳು ಯಾವುದೇ ಗುರಿ ಹೊಂದಿರುವುದಿಲ್ಲ. ಸಾಮಾಜಿಕ ಬದಲಾವಣೆಗಾಗಿ ಜನರಲ್ಲಿ ಜಾಗೃತಿ ಮೂಡಬೇಕಾದರೆ ವೈಚಾರಿಕತೆ ಹಾಸು ಹೊಕ್ಕಿದ್ದರೆ ಮಾತ್ರ ಸಾಧ್ಯ. ಕುರಿ, ಲಂಚಾವತಾರ ನಾಟಕಗಳಲ್ಲಿ ಸಾಮಾಜಿಕ ಕಳಕಳಿ ಎದ್ದು ಕಾಣುತ್ತದೆ.

● ನಾಟಕಗಳು ಮನೋರಂಜನೆಗೆ ಮಾತ್ರ ಎಂಬ ಪ್ರತೀತಿ ಹೋಗಲಾಡಿಸಬೇಕು. ನಾಟಕ ರಚನೆಕಾರರು, ನಾಟಕ ಆಡುವವರಲ್ಲೂ ಸಾಮಾಜಿಕ ಕಾಳಜಿ ಇದ್ದರೆ ಸಾಲದು. ಆ ಕಾಳಜಿಯ ಜೊತೆ ಸಿದ್ಧಾಂತ ಇದ್ದರೆ ಮಾತ್ರ ಜನರಲ್ಲಿ ಜಾಗೃತಿ ಮೂಡಿಸಬಹುದು.

ಅಮೆರಿಕ ವಿರುದ್ಧ ವಾಗ್ದಾಳಿ

● ವಿಶ್ವದ ಹಿರಿಯಣ್ಣನಿಗೆ ವಿಶ್ವದಲ್ಲಿ ವೈರಿಗಳು ಯಾರು ಶತ್ರುಗಳು ಯಾರು ಎಂಬುದೇ ಅರ್ಥವಾಗುತ್ತಿಲ್ಲ. ಭಯೋತ್ಪಾದನೆ ನೀಡಿದ ಹೊಡೆತಕ್ಕೆ ಅಮೆರಿಕ ತತ್ತರಿಸಿ ಹೋಗಿದೆ. ಅಮೆರಿಕಾ ಅಧ್ಯಕ್ಷ ಬುಶ್‌ರಿಗೆ ಯುದ್ಧವೊಂದೇ ದಾರಿ ಎನ್ನುವಂತೆ ವರ್ತಿಸುತ್ತಿರುವುದು ಅವರಿಗಿರುವ ಭಯ ಎತ್ತಿ ತೋರಿಸುತ್ತದೆ. ನಮ್ಮ ಮೇಲೆ ಪ್ರಪಂಚದ ತುಂಬ ಇಷ್ಟೊಂದು ದ್ವೇಷ, ವಿರೋಧ ಇದೆಯಲ್ಲ ಎಂಬ ಸ್ವಯಂಪ್ರಜ್ಞೆ ಇಲ್ಲದಿರುವುದು, ಆದಿಪತ್ಯದ ಕನಸು ಅನಾಹುತಕ್ಕೆ ಕಾರಣ.

● ಅಮೆರಿಕ ಅಧ್ಯಕ್ಷರು ಬಾಯಲ್ಲಿ ಯುದ್ಧ ಶಬ್ದವೊಂದನ್ನೇ ಗೊಣಗುತ್ತಿದ್ದಾರೆ. ಅಲ್ಪಮತದಿಂದ ಅಧ್ಯಕ್ಷರಾಗಿರುವ ಅವರಿಗೆ ಅಮೆರಿಕಾದ ಜನತೆಯ ಬೆಂಬಲ ಗಳಿಸುವ ಏಕೈಕ ಉದ್ದೇಶದಿಂದ ಸರಿಯೋ ತಪ್ಪೋ ಯುದ್ಧ ಮಾಡಿದರಾಯ್ತು ಎನ್ನುವ ಗುರಿ ಇಟ್ಟುಕೊಂಡಿರುವುದು ಜಗತ್ತಿಗೇ ಮಾರಕ.

● ಅಮೆರಿಕಾ ಯುದ್ಧ ಎಂದರೆ- ನಾವು ಯುದ್ಧವೇಕೆ ಎಂದು ಪ್ರಶ್ನಿಸಬೇಕಾಗಿದೆ. ವಿಯೆಟ್ನಾಂ, ಕೋರಿಯಾ, ಕ್ಯೂಬಾದ ಮೇಲೆ ನಡೆಸಿದ ದಬ್ಬಾಳಿಕೆಯ ಫಲ ಏನಾಯಿತು ಎಂಬುದು ಇಡೀ ವಿಶ್ವಕ್ಕೆ ಗೊತ್ತು.

● ಈ ಸಂದರ್ಭದಲ್ಲಿ ಭಾರತ ತಾಳಿರುವ ನಿಲುವು ಸರಿಯೇ ಎಂಬುದು ಚರ್ಚಿಸಬೇಕಾದ ಸಂಗತಿ. ವಿಶ್ವಕ್ಕೆ ಶಾಂತಿ ಸಾರಿದ ಈ ದೇಶ ಅಮೆರಿಕಾದ ಅಣತಿಗೆ ತಲೆಬಾಗಿದರೆ ಮುಂದೆ ಸಂಭವಿಸಬಹುದಾದ ಅನಾಹುತಗಳು ಗಂಭೀರವಾದವು.

● ಭಯೋತ್ಪಾದನೆ, ಅಮೆರಿಕಾ ನೀತಿ, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ದುಷ್ಪರಿಣಾಮಗಳನ್ನು ಬಿಂಬಿಸುವ ನಾಟಕ ರಚನೆ ಅಗತ್ಯವಿದೆ.

★ ★ ★

ಉತ್ತರ ಕರ್ನಾಟಕದ ಖ್ಯಾತ ರಂಗನಟ ಏಣಗಿ ಬಾಳಪ್ಪ

● ಸಮಾಜ ರಂಗಭೂಮಿಯಿಂದ ಸತ್ಯವನ್ನು ಅಪೇಕ್ಷಿಸುತ್ತಿದೆ. ಸತ್ಯಕ್ಕಾಗಿ, ನ್ಯಾಯಕ್ಕಾಗಿ, ಶೋಷಿತರ ಒಳದನಿಗಾಗಿ ಕಾತರಿಸುತ್ತಿರುವಾಗ ರಂಗ ಭೂಮಿ ಅಂಥ ನಾಟಕಗಳನ್ನು ನೀಡಲೇಬೇಕು. ನಾಲ್ಕು ದಿನ ಪತ್ರಿಕೆಗಳನ್ನು ಓದದೆ ಹೋದರೆ ನಾಲಿಗೆಯೇ ನಿಂತು ಹೋಗುತ್ತದೆ ಎಂದ ಹಿರಣ್ಣಯ್ಯ, ಪತ್ರಿಕೆಗಳು ಹೊರಹಾಕುವ ಹತ್ತಾರು ವಿಷಯಗಳೇ ನಾಟಕಕಕ್ಕೆ ಆಹಾರ.

● ಸ್ವಾತಂತ್ರ್ಯ ಸಂಗ್ರಾಮದಲ್ಲಿ ವೃತ್ತಪತ್ರಿಕೆಗಳು ಮಾಡಿರುವ ಜನಜಾಗೃತಿಯಷ್ಟೇ ವೃತ್ತಿ ರಂಗಭೂಮಿ ತನ್ನ ಸೇವೆ ಸಲ್ಲಿಸಿದೆ.

★ ★ ★

ಲೇಖಕ ಲಿಂಗದೇವರು ಹಳೆಮನೆ

● ಜಾಗತಿಕವಾಗಿ ಬಂಡವಾಳಶಾಹಿ ವಿರುದ್ಧ ರಂಗಭೂಮಿ ಸಮರ್ಥ ಅಸ್ತ್ರವಾಗಿ ಕೆಲಸ ಮಾಡಿದೆ ಎಂದು

PRBDECR 319-79/79 AIKYARANGA WEEKLY
Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH